
# <u>ವೀರಾಂಜನೇಯ ಪ್ರಸನ್ನ</u>

**ಭಾರತದ ಸಾಂಸ್ಕೃತಿಕ ಪರಂಪರೆ**

(1) **i: ಸಿಂಧೂ ನಾಗರಿಕತೆ**

**<u>"ಭಾರತದ ನಾಗರಿಕತೆಯ ತೊಟ್ಟಿಲು"</u>** ಎಂದೇ ಹೆಸರುವಾಸಿಯಾದ ಸಿಂಧೂನದಿಯ ತೀರದಲ್ಲಿ ಬೆಳೆದ ಸಿಂಧೂಬಯಲಿನ ನಾಗರಿಕತೆ ಅಥವಾ ಹರಪ್ಪಾ ಸಂಸ್ಕೃತಿಯು ಭಾರತದ ಅತ್ಯಂತ ಪುರಾತನ ನಾಗರಿಕತೆಯಾಗಿದೆ. **<u>'ಕ್ರಿಸ್ತ ಪೂ. 3000'</u>** ರಲ್ಲಿ ಭಾರತದ ಗರ್ಭದಲ್ಲಿ ಬೆಳೆದ ಈ ಮಹಾನಾಗರಿಕತೆಯು ಈಜಿಪ್ಟ ಮತ್ತು ಮೆಸಪೊಟೆಮಿಯಾ ನಾಗರಿಕತೆಗಳ ಸಮಕಾಲೀನದ್ದಾಗಿದ್ದು, **"ಜಗತ್ತಿನ ಮೊದಲ ನಗರ ನಾಗರಿಕತೆಯಾಗಿದೆ"**




- **ಉತ್ಖನನಗಳು:–**

ಕ್ರಿ.ಶ 1856 ರಲ್ಲಿ ಬ್ರಿಟಿಷರು ಸಿಂಧ್‌ನ ಮೊಹೆಂಜೋದಾರೊನಲ್ಲಿ ರೈಲ್ವೆ ಮಾರ್ಗವನ್ನು ಹಾಕಲು ದಿಬ್ಬ ಕಡಿಯುತ್ತಿದ್ದಾಗ ದೊರೆತ ಸುಟ್ಟ ಇಟ್ಟಿಗೆಗಳ ಆಧಾರದ ಮೇಲೆ ಭಾರತದ ಭವ್ಯ ನಾಗರಿಕತೆಯ ಅನ್ವೇಷಣೆಗೆ ಹಾದಿಯಾಯಿತು. **<u>1906 ರಲ್ಲಿ ಲಾರ್ಡ ಕರ್ಜನ್</u>** ರಿಂದ ಸ್ಥಾಪಿತವಾದ **<u>"ಭಾರತೀಯ ಪುರಾತತ್ವ ಇಲಾಖೆ"</u>**ಯು ಡೈರೆಕ್ಟರ್ ಜನರಲ್ ಸರ್ ಜಾನ್ ಮಾರ್ಷಲ್ ರಿಂದ ಸಿಂಧೂ ನದಿಯ ಉದ್ದಕ್ಕೂ ವ್ಯಾಪಕ ಸಂಶೊಧನೆ ಕೈಗೊಂಡದರ ಪ್ರತಿಫಲವಾಗಿ, 1921–22 ರಲ್ಲಿ ದಯಾರಾಂ ಸಹಾನಿಯವರಿಂದ ಹರಪ್ಪಾ ಮತ್ತು 1922–23 ರಲ್ಲಿ ಆರ್.ವಿ.ಬ್ಯಾನರ್ಜಿಯವರಿಂದ ಮೋಹೆಂಜೊದಾರೊ ನಗರಗಳು ಪತ್ತೆಯಾದವು.

**ಸಿಂಧೂ ನಾಗರಿಕತೆಯ ವ್ಯಾಪ್ತಿ ಮತ್ತು ಪ್ರಮುಖ ನಗರಗಳು:–**

ಪಶ್ಚಿಮದ ಬಲೂಚಿಸ್ಥಾನದಿಂದ ಪೂರ್ವದ ಉತ್ತರಪ್ರದೇಶದ ಆಲಂಘರ್‌ವರೆಗೂ, ಉತ್ತರದ ಹಿಮಾಲಯದ ಅಡಿಯಿಂದ ದಕ್ಷಿಣದ ನರ್ಮದಾ ನದಿ ತೀರದವರೆಗೆ ಹಬ್ಬಿತ್ತು.

**ಪ್ರಮುಖ ನಗರಗಳು:–**

- **ಹರಪ್ಪಾ:–** 1921 ರಲ್ಲಿ ದಯಾರಾಂ ಸಹಾನಿಯವರಿಂದ ಪತ್ತೆಯಾದ ಈ ನಗರವು ಮಾಂಟೆಗೊಮರಿ ಜಿಲ್ಲೆಯಲ್ಲಿದ್ದು, 3 ಮೈಲಿ ಸುತ್ತಳತೆ ಹೊಂದಿದೆ. ಸಿಂಧೂ ಸಂಸ್ಕೃತಿಯ ಅತಿ ದೊಡ್ಡ ನಗರವಾಗಿದ್ದ ಇಲ್ಲಿ ಸಿಂಧೂ ನಾಗರಿಕತೆ ಬೆಳವಣಿಗೆಯ 4ನೇ ಹಂತವನ್ನು ಕಾಣಬಹುದು
- **ಮೊಹೆಂಜೊದಾರೊ:–** ಪಾಕಿಸ್ತಾನದ ಲಾರ್ಖಾನಾ ಜಿಲ್ಲೆಯಲ್ಲಿದೆ ಸಾರ್ವಜನಿಕ ಉಗ್ರಾಣ, ನೃತ್ಯ ಭಂಗಿಯ ಕಂಚಿನ ಹುಡುಗಿ ಪ್ರತಿಮೆ ಇಲ್ಲಿಯ ಮುಖ್ಯ ಅವಶೇಷಗಳು
- **ಕಾಲಿಬಂಗನ್:–** 1953ರಲ್ಲಿ ಘೋಷರಿಂದ ಸಂಶೋಧನೆ. ಕಾಲಿಬಂಗನ್ ಎಂದರೆ ಕಪ್ಪು ಬಳೆಗಳು ಎಂದರ್ಥ. ಯಜ್ಞಕುಂಡಗಳು, ಒಂಟೆ, ದನದ ಮೂಳೆಗಳು ಇಲ್ಲಿಯ ಮುಖ್ಯ ಅವಶೇಷಗಳು.
- **ಲೋಥಾಲ್:–** ಗುಜರಾತಿನ ಕ್ಯಾಂಬೆ ತೀರದಲ್ಲಿದ್ದು ಎಸ್ ಆರ್ ರಾವ್ ಅವರಿಂದ ಸಂಶೋದನೆ.

  ಹಡಗು ಕಟ್ಟೆ, ಸ್ತ್ರಿ ಪುರುಷರ ಜೋಡಿ ಸಮಾಧಿಗಳು ಇಲ್ಲಿಯ ಮುಖ್ಯ ಅವಶೆಷಗಳು
- **ಬನವಾಲಿ:–** ಹರಿಯಾಣದ ಹಿಸ್ಸಾರ ಜಿಲ್ಲೆಯಲ್ಲಿದ್ದು, ಬಾರ್ಲಿ ಧಾನ್ಯ, ಜೇಡಿ ಮಣ್ಣಿನ ಗೊಂಬೆ ಆಟಿಕೆಗಳು ಇಲ್ಲಿಯ ಅವಶೇಷಗಳು.

**ಸಿಂಧೂ ನಾಗರಿಕತೆಯ ಪ್ರಮುಖ ಲಕ್ಷಣಗಳು**

| | |
|---|---|
| 1) ನಗರ ಯೋಜನೆ | ವಾಸದ ಗೃಹಗಳು |
| | ಸಾರ್ವಜನಿಕ ಕಟ್ಟಡಗಳು |
| | ಕಾರ್ಮಿಕರ ಮನೆಗಳು |
| | ಸಾರ್ವಜನಿಕ ಉಗ್ರಾಣ |
| | ಬೃಹತ್ ಈಜುಕೊಳ |
| | ಒಳಚರಂಡಿ ವ್ಯವಸ್ಥೆ |
| 2) ರಾಜಕೀಯ ವ್ಯವಸ್ಥೆ | |
| 3) ಮುದ್ರೆಗಳು | |
| 4) ಕೆರೆ ಮತ್ತು ವಾಸ್ತುಶಿಲ್ಪ | |
| 5) ಸಾಮಾಜಿಕ ಜೀವನ | |

1) **ನಗರ ಯೋಜನೆ:– 'ಜಗತ್ತಿನ ಪ್ರಥಮ ನಗರ ನಾಗರಿಕತೆ'** ಯಂದೇ ಹೆಸರುವಾಸಿಯಾದ ಸಿಂಧೂ ನಾಗರಿಕತೆಯಲ್ಲಿ ಜನರು ನಗರ ಜೀವನ ರೂಢಿಸಿಕೊಂಡು ನಗರ ನಿರ್ಮಾಣದಲ್ಲಿ ಅಪಾರ ಪ್ರೌಢಿಮೆಯನ್ನು ತೋರಿದ್ದಾರೆ.

- ಹರಪ್ಪ ಮತ್ತು ಮೊಹರಂಜೊದಾರೊ ಮುಖ್ಯನಗರಗಳು
- ನಗರಗಳು ವಿಶಾಲವಾಗಿದ್ದು ರಸ್ತೆಗಳೂ ನೇರವಾಗಿ ಮತ್ತು ಅಗಲವಾಗಿವೆ.
- ಮುಖ್ಯ ರಸ್ತೆಗಳು 13 ರಿಂದ 33 ಅಡಿ ಅಗಲ
- ಕಿರು ಬೀದಿಗಳು 9 ರಿಂದ 11 ಅಡಿ ಅಗಲ
- ಚಚ್ಚೌಕಾಕಾರದ ನಗರಗಳು (GRID SYSTEM)
- ಪ್ರತಿ ಮುಖ್ಯ ರಸ್ತೆಗೊಂದು ಸಾರ್ವಜನಿಕ ಬಾವಿ.
- ರಸ್ತೆ ಬದಿಯಲ್ಲಿ ಕಸದ ತೊಟ್ಟಿ & ದೀಪದ ಕಂಬಗಳು.
- ನಗರಗಳ ಪಶ್ಚಿಮ ಭಾಗ ಎತ್ತರವಾಗಿದ್ದು, ಕೋಟೆಯಿಂದ ಆವರಿಸಲ್ಪಟ್ಟಿದ್ದರೆ, ಪೂರ್ವಭಾಗ ತಗ್ಗು ಪ್ರದೇಶದಲ್ಲಿದ್ದು, ವಿಶಾಲವಾಗಿದ್ದು ಅಲ್ಲಿ ಗ್ರಾಮಸ್ಥರು ನೆಲೆಸಿದ್ದರು.
- ಮನೆಗಳನ್ನು ರಸ್ತೆಬದಿಗೆ ಸಾಕಷ್ಟು ಸ್ಥಳಾವಕಾಶಗಳನ್ನು ಬಿಟ್ಟು ನಿರ್ಮಿಸಿದ್ದಾರೆ.
- ನಗರಗಳನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಾಣ
- ರಸ್ತೆಗಳಲ್ಲಿ ಧೂಳು ಏಳದಂತೆ ಇಟ್ಟಿಗೆ ಮತ್ತು ಮಡಿಕೆ ಚೂರುಗಳಿಂದ ನಿರ್ಮಾಣ.

ಈ ಎಲ್ಲಾ ಅದ್ಭುತ ನಗರ ಲಕ್ಷಣಗಳಿಂದಲೇ, **'ಅರ್ವೆಸ್ಟ ಮೆರೆ'** ಅವರು **"ಸಿಂದು ನಾಗರಿಕತೆಯ ನಗರಗಳು ಪುರಾತನವಾಗಿ ಕಂಡರೂ ಆಧುನಿಕ ನಗರಗಳಂತೆ ಕಾಣುತ್ತದೆ"** ಎಂದಿರುವುದು ಸಮಂಜಸವಾಗಿದೆ.

- **ನಗರದ ಪ್ರಮುಖ ಲಕ್ಷಣಗಳು :–** ಡಾ॥ ಎ. ಡಿ. ಪುಸಾಲ್ಕರ ಅವರು ನಗರ ಯೋಜನೆಯನ್ನು 5 ಪ್ರಮುಖ ಭಾಗಗಳಾಗಿ ವಿಂಗಡಿಸಿದ್ದಾರೆ

**1) ವಾಸದ ಗೃಹಗಳು:–**

- ಸುಟ್ಟ ಇಟ್ಟಿಗೆಗಳಿಂದ ನಿರ್ಮಾಣ
- ಮನೆ–ಮನೆಗಳ ನಡುವೆ ಸಾಕಷ್ಟು ಸ್ಥಳಾವಕಾಶ
- ಇಟ್ಟಿಗೆಗಳು $55.5 \times 26.5 \times 9cm$ ವಿಸ್ತೀರ್ಣ
- ಮರದ ಬಾಗಿಲುಗಳು (2 ರಿಂದ 7 ಅಡಿ)
- ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಸ್ನಾನ ಗೃಹ
- ಮಳೆನೀರು ಕೊಯ್ಲು ವ್ಯವಸ್ಥೆ ಜಾರಿಯಲ್ಲಿತ್ತು
- ಪ್ರತಿ ಮನೆಗೆ ಒಂದು ಶುದ್ಧ ನೀರಿನ ಬಾವಿ

**2) ಸಾರ್ವಜನಿಕ ಕಟ್ಟಡಗಳು:–**


- ಕಟ್ಟಡಗಳು ವಿಶಾಲವಾಗಿದ್ದವು
- ಮೊಹೆಂಜೊದಾರೋ ನಲ್ಲಿ $83 \times 24$ಮೀ ವಿಸ್ತೀರ್ಣದ **ಪುರೋಹಿತರ ವಸತಿ ಗೃಹ** ಪತ್ತೆಯಾಗಿದೆ.
- $230 \times 78$ ಅಡಿ ಅಗಲದ ವಿಶಾಲದ **ಪುರಭವನವು** ಇಲ್ಲಿಯ ಬೃಹತ್ ಕಟ್ಟಡ

**3) ಕಾರ್ಮಿಕರ ಮನೆಗಳು:–**

- ಹರಪ್ಪಾದಲ್ಲಿ 16 ಕಾರ್ಮಿಕ ಮನೆಗಳು $(18 \times 7)$ ಮನೆಗಳು ದೊರೆತಿವೆ.
- ಕಾರ್ಮಿಕ ಮನೆಗಳ ಬದಿಯಲ್ಲಿ ಉಗ್ರಾಣಗಳು ಪತ್ತೆಯಾಗಿದ್ದು, ಕಾರ್ಮಿಕರು ಇವುಗಳನ್ನು ಧಾನ್ಯಗಳನ್ನು ಹಿಟ್ಟು ಮಾಡಲು ಬಳಸುತಿದ್ದರು.

**4) ಬೃಹತ್ ಈಜುಕೊಳ:**

- ಮೋಹೆಂಜೊದಾರೊದಲ್ಲಿ ಕಂಡುಬಂದಿದ್ದು, ಸಾರ್ವಜನಿಕ ಸ್ನಾನ ಕಾರ್ಯಕ್ಕೆ ಬಳಸಲಾಗುತಿತ್ತು
- $180 \times 108$ ಅಡಿ ಉದ್ದಗಲ



- ಕೊಳದ ಎರಡೂ ಕಡೆ ಇಳಿಯುವ ಮೆಟ್ಟಿಲು ಗಳಿದ್ದು ಸುತ್ತಲೂ ಕೊಠಡಿಗಳಿವೆ.
- ಶುದ್ಧ ನೀರಿನ ಬಾವಿಯಿಂದ ಕೊಳಕ್ಕೆ ನೀರು ತುಂಬಿ, ಅಶುದ್ಧ ನೀರನ್ನು ತೆಗೆಯಲಾಗುತಿತ್ತು.
- ಇದನ್ನು ಪವಿತ್ರ ಧಾರ್ಮಿಕ ಸಂಸ್ಕಾರಗಳಿಗೆ ಪೂಜಾ ಸ್ನಾನ ಗಳಿಗೆ ಬಳಸಿಕೊಳ್ಳಲಾಗುತ್ತಿತ್ತು.

**5) ಸಾರ್ವಜನಿಕ ಉಗ್ರಾಣ:–**

- ಧಾನ್ಯ ಸಂಗ್ರಹಣೆಗೆ ಬಳಕೆ
- 72 ಉಗ್ರಾಣಗಳು ದೊರಕಿದ್ದು ಇವು ಹರಪ್ಪ, ಮೊಹೆಂಜೊದಾರೊ, ಲೋಥಲ್, ಕಾಲಿಬಂಗನ್ ನಲ್ಲಿವೆ.
- ಇವುಗಳನ್ನು ಸರ್ಕಾರದ ಧಾನ್ಯ ಸಂಗ್ರಹಣೆಗೆ ಬಳಸಲಾಗುತಿತ್ತು.

**6) ಒಳ ಚರಂಡಿ ವ್ಯವಸ್ಥೆ:–**

(**'ಸ್ವಚ್ಛ ಭಾರತ ಅಭಿಯಾನ'** ದಂತಹ ಹಲವು ನೈರ್ಮಲ್ಯೀಕರಣ ಯೋಜನೆಗಳು ಅಸ್ತಿತ್ವದಲ್ಲಿರುವ ಈ ಕಾಲದಲ್ಲಿ ಸುಮಾರು 3000 ವರ್ಷಗಳ ಹಿಂದೆಯೇ ಸಿಂಧೂ ನದಿ ಬಯಲಿನ ನಾಗರಿಕರು, ಪ್ರಪಂಚದ ಯಾವುದೆ ದೇಶದ ನಾಗರಿಕತೆ ಹೊಂದಿರದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದು ಹಿರಿಮೆಯೆ ಸರಿ.)



- ರಸ್ತೆಯ ಎರಡೂ ಬದಿಯಲ್ಲಿ 1 ರಿಂದ 2ಅಡಿ ಆಳವಾಗಿ ಒಳಚರಂಡಿ ನಿರ್ಮಾಣ
- ಬಚ್ಚಲು ಮನೆಯನ್ನು **'ಮಣ್ಣಿನ ಪೈಪುಗಳ'** ಮೂಲಕ ಒಳಚರಂಡಿಗೆ ಸಂಪರ್ಕಿಸಲಾಗಿತ್ತು
- ಒಳಚರಂಡಿ ಶುಧ್ಧಿಕರಣಕ್ಕೆ **'ಮ್ಯಾನ್ ಹೋಲ್'** ವ್ಯವಸ್ಥೆ ಇತ್ತು

**ಎ ಎಲ್ ಭಾಷ್ಯಂ** ಅವರ **"THE WONDER THAT WAS INDIA"** ಎಂಬ ಕೃತಿಯಲ್ಲಿ **'ರೋಮನ್ ನಾಗರಿಕತೆಯವರೆಗೂ ಯಾವುದೇ ಪುರಾತನ ನಾಗರಿಕತೆಯು ಸಿಂಧೂ ಜನರಂತಹ ಅತ್ಯಾಧುನಿಕ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರಲಿಲ್ಲ.'** ಎಂದಿದ್ದಾರೆ.

**2. ರಾಜಕೀಯ ವ್ಯವಸ್ಥೆ:–**

- ನಿರ್ಧಿಷ್ಟ ರಾಜಕೀಯ ವ್ಯವಸ್ಥೆಯನ್ನು ಇನ್ನೂ ಖಚಿತವಾಗಿ ಗುರುತಿಸಲು ಆಗದಿದ್ದರು, ಒಳಚರಂಡಿ ವ್ಯವಸ್ಥೆ, ಏಕರೂಪದ ನಗರ ಯೋಜನೆ, ನೀರು ಪೂರೈಕೆ, ಅಳತೆ ತೂಕಗಳು ಜನರಲ್ಲಿ ಪೌರಪ್ರಜ್ಞೆಯನ್ನು ಸೂಚಿಸುತ್ತದೆ.
- ಹರಿಯಾಣದ ಕುನಾಲದಲ್ಲಿ ದೊರೆತಿರುವ ಬೆಳ್ಳಿ ಕಿರೀಟವು, ವಂಶಪಾರಂಪರೆಯುಳ್ಳ ರಾಜ ಪ್ರಭುತ್ವ ಇದ್ದಿರುವುದನ್ನು ಹೇಳುತ್ತದೆ.
- ಸಮರೂಪತ್ವ ಈ ನಾಗರಿಕತೆಯು ಪ್ರಮುಖ ಲಕ್ಷಣ

- ಡಾ॥ ಎಸ್ ಆರ್ ರಾವ್ ಮುದ್ರೆಗಳ ಮೇಲೆ ಪಾಲ, ಪಾಲಕ, ಮಹಾಪಾಲಕ ಎಂಬ ಪದಗಳನ್ನು ಆಡಳಿತಗಾರ, ಉಪಆಡಳಿತಗಾರ, ಮಹಾಆಡಳಿತಗಾರ ಎಂಬರ್ಥಕ್ಕೆ ಹೋಲಿಸಿದ್ದಾರೆ.
- ಸಿಂಧೂ ನಗರಗಳು ವಾಣಿಜ್ಯ ನಗರಗಳಾಧ್ದರಿಂದ ವರ್ತಕ ಪ್ರಭುಗಳು ಆಳಿರಬಹುದೆಂದು ನಂಬಲಾಗಿದೆ.

**3) ಮುದ್ರೆಗಳು:–**

ಹರಪ್ಪ ಸಂಸ್ಕೃತಿಯನ್ನು ತಿಳಿಯಲು ನಮಗೆ ಯಾವ ಲಿಖಿತ ಆಧಾರಗಳು ದೊರೆತಿಲ್ಲವಾದ್ದರಿಂದ, ಸಂಸ್ಕೃತಿ ತಿಳಿಯಲು ಮುದ್ರೆಗಳೇ ಏಕೈಕ ಆಧಾರವಾಗಿವೆ.

- 2500+ ಮುದ್ರೆಗಳು ದೊರೆತಿದ್ದು, ಇವುಗಳನ್ನು ಟೆರ್ರಕೋಟ ಜೇಡಿಮಣ್ಣು, ಮೃದುಕಲ್ಲು & ದಂತದಿಂದ ತಯಾರಿಸಲಾಗಿದೆ.
- ಮುದ್ರೆಗಳ ಮೇಲೆ ವಿವಿಧ ಪ್ರಾಣಿಗಳ, ದೇವತೆಗಳ ಮತ್ತು ಮಾನವರ ಚಿತ್ರಗಳನ್ನು ಬಿಡಿಸಲಾಗಿದೆ.

| | |
|---|---|
| ➢ ಮುದ್ರೆಗಳ ಪ್ರಮುಖ 3 ಉದ್ದೇಶಗಳು | 1. ಧರ್ಮ ಸಂಕೇತ |
| | 2. ವ್ಯಾಪಾರ ಉದ್ದೇಶ |
| | 3. ಮತಾಆಚರಣೆ |

**4) ಕಲೆ ಮತ್ತು ವಾಸ್ತುಶಿಲ್ಪ :–**

ಪುರಾತನ ಕಾಲದಲ್ಲಿಯೇ ಅಪಾರ ಕಲಾ ಪ್ರೌಢಿಮೆಯನ್ನು ತೋರಿಸಿದ ಸಿಂಧೂ ಜನರು ಕಲಾಪ್ರಿಯರಾಗಿದ್ದು, ವಾಸ್ತುಶಿಲ್ಪದಲ್ಲಿ ನುರಿತವರಾಗಿದ್ದರು.

- ಮೊಹೆಂಜೋದಾರೊವಿನ ಈಜುಕೊಳ, ಸಾರ್ವಜನಿಕ ಉಗ್ರಾಣ, ಪುರೋಹಿತರ ಮನೆ ಇತ್ಯಾದಿ ಇವರ ಕಲೆಗೆ ನಿದರ್ಶನಗಳು.
- ಮುದ್ರೆಗಳ ಮೇಲಿನ ಪಶುಪತಿ, ಗೂಳಿ, ಮಾನವ ಆಕೃತಿಗಳು, ಮಾತೃದೇವತೆ, ಘೇಂಡಾಮೃಗ ಮುಂತಾದವುಗಳು ಕಲೆಯನ್ನು ವೈಭವಿಕರಿಸಿವೆ.

## ಪ್ರಮುಖ ಪ್ರತಿಮೆಗಳು

| | | |
|---|---|---|
| 1. ಕಂಚಿನ ಲೋಹದ ನೃತ್ಯಭಂಗಿ |  | ➢ ಮೊಹೆಂಜೊದಾರೋದಲ್ಲಿ ದೊರೆತಿದೆ<br>➢ $4\frac{1}{2}$ ಅಡಿಎತ್ತರ<br>➢ ಬಲಗೈ ಸೊಂಟದ ಮೇಲಿದೆ |
| 2. ಗಡ್ಡದ ಮಾನವ ಆಕೃತಿ |  | ➢ ಮೊಹೆಂಜೊದಾರೋದಲ್ಲಿ ದೊರೆತಿದೆ<br>➢ ಮೆದುಶಿಲೆಯನ್ನು ಬಳಸಲಾಗಿದೆ<br>➢ 17 ಸೆಂ.ಮಿ ಎತ್ತರ |
| 3. ಪಶುಪತಿ ಮುದ್ರೆ |  | ➢ ಪದ್ಮಾಸನದಲ್ಲಿ ಕುಳಿತುಕೊಂಡಿರುವ ಭಂಗಿ<br>➢ ಯೋಗಿಯ ಹೋಲಿಕೆ<br>➢ **"ಪ್ರಾಣಿಗಳ ದೊರೆ"** ಎಂದೆ ಪ್ರಖ್ಯಾತಿ |

**5) ಸಿಂಧೂ ಜನರ ಸಾಮಾಜಿಕ ಜೀವನ:–**

| | |
|---|---|
| **ಸಮಾಜ ವರ್ಗೀಕರಣ** | ಡಾ॥ ಎ. ಡಿ ಪುಸಾಲ್ಕರ್ ಅವರು ಸಮಾಜವನ್ನು<br>**1. ಪುರೋಹಿತ ವರ್ಗ**<br>**2. ಕ್ಷತ್ರಿಯ ವರ್ಗ**<br>**3. ವ್ಯಾಪಾರಿ ವರ್ಗ**<br>4. **ಕೂಲಿಕಾರ ವರ್ಗ** |
| **ಆಹಾರ** | ಗೋಧಿ, ಬಾರ್ಲಿ, ಭತ್ತ, ನವಣೆ, ತರಕಾರಿ, ಹಾಲು, ಹಣ್ಣು–ಹಂಪಲುಗಳು |
| **ಉಡುಗೆ–ತೊಡುಗೆಗಳು** | ಹತ್ತಿಯಿಂದ ನೇಯ್ದಬಟ್ಟೆ, ಸ್ತ್ರೀಯರು ಲಂಗ ಅಥವಾ ಸೀರೆ, ಪುರುಷರು ಧೋತಿ, ಪಾದರಕ್ಷೆಯ ಬಳಕೆ ಇದ್ದಿರಲಿಲ್ಲ |
| **ಆಭರಣಗಳು** | ಸ್ತ್ರೀ ಪುರುಷರಿಬ್ಬರೂ ಆಭರಣ ಪ್ರಿಯರು<br>ಸ್ತ್ರೀಯರು ಓಲೆ, ಮೂಗುತಿ, ಕಿವಿ ಉಂಗುರ ತೋಳಬಂದಿ |

| | |
|---|---|
| | ಇತ್ಯಾದಿ<br>ಪುರುಷರು ಕೈಕಡಗ & ಉಂಗುರ |
| **ಸೌಂದರ್ಯವರ್ಧಕಗಳು** | ಕಣ್ಣಿನ ಕಾಡಿಗೆ, ಕೂದಲು ತೊಳೆಯುವ ಶಾಂಪೂ, ತುಟಿಯ ಲೇಪನ |
| **ಆಹಾರ ಸಾಮಾನುಗಳು** | ಸುಟ್ಟ ಮಣ್ಣಿನ ಗೊಂಬೆಗಳು, ಗೋಲಿಗಳು, ಹಕ್ಕಿ, ನಾಯಿ ಬೊಂಬೆಗಳು (ಟೆರ್ರಕೋಟಾದ ಆಟಿಕೆಗಳು) |
| **ಮನೊರಂಜನೆ** | ಚದುರಂಗ, ಪಗಡೆಯಾಟ ಮುಖ್ಯವಾದವು |

- **ಸಿಂಧೂ ನಾಗರಿಕತೆಯ ಸಂಸ್ಕೃತಿ & ವೇದ ಕಾಲೀನ ನಾಗರಿಕತೆಗಳ ಸಂಸ್ಕೃತಿಯ ವ್ಯತ್ಯಾಸ ಗಳು**

| **ಸಿಂಧೂ ಸಂಸ್ಕೃತಿ** | | **ವೇದೀಯ ಸಂಸ್ಕೃತಿ** |
|---|---|---|
| **ಕಾಲ** | ಕ್ರಿ. ಪೂ 3000 | ಕ್ರಿ. ಪೂ. 2000–800 |
| **ಲಿಪಿ** | ಲಿಪಿ ಇತ್ತು<br>• ಬಲದಿಂದ ಎಡಕ್ಕೆ | ಲಿಪಿ ಗೊತ್ತಿರಲಿಲ್ಲ<br>• ಎಡದಿಂದ ಬಲಕ್ಕೆ |
| **ರಕ್ಷಣೆ** | ಯುಧ್ಧಪ್ರಿಯರಲ್ಲ | ಯುದ್ಧ ಪ್ರಿಯರು |
| **ಪವಿತ್ರ ಪ್ರಾಣಿ** | ಗೂಳಿ | ಹಸು |
| **ಕ್ರೀಡೆಗಳು** | ಚದುರಂಗ(ಒಳಾಂಗಣ), ನೃತ್ಯ | ರಥಸ್ಪರ್ಧೆ, ಬೇಟೆ ಇತ್ಯಾದಿ (ಹೊರಾಂಗಣ) |
| **ಲೋಹ** | ಕಬ್ಬಿಣದ ಬಳಕೆ ಇದ್ದಿಲ್ಲ<br>ತಾಮ್ರ, ಕಂಚು ಹೆಚ್ಚು ಬಳಕೆ | ಕಬ್ಬಿಣದ ಬಳಕೆ ಗೊತ್ತಿತ್ತು |
| **ಕೌಟುಂಬಿಕ ವ್ಯವಸ್ಥೆ** | ವಿಭಕ್ತ ಕುಟುಂಬಗಳು ಹೇರಳ | ಅವಿಭಕ್ತ ಕುಟುಂಬಗಳು ಹೆರಳ |
| **ಸಾಮಾಜಿಕ** | ಮಾತೃ ಪ್ರಧಾನ ಸಮಾಜ | ಪಿತೃ ಪೃಧಾನ ಸಮಾಜ |
| **ಆಡಳಿತ** | ಪ್ರಜಾಸತ್ತ ಪ್ರಭುತ್ವ | ಅನುವಂಶೀಕ ರಾಜ ಪ್ರಭುತ್ವ |
| **ಆರ್ಥಿಕ ವ್ಯವಸ್ಥೆ** | ಕೃಷಿ ಪ್ರಧಾನ | ಕೃಷಿ ಮತ್ತು ಪಶುಪಾಲನೆ ಪ್ರಧಾನ |
| **ಮೂರ್ತಿ ಪೂಜೆ** | ➢ ಮೂರ್ತಿ ಪೂಜೆ ರೂಡಿ<br>➢ ಮಾತೃ ದೇವತಾ ಆರಾಧನೆ | ➢ ಮೂರ್ತಿ ಪೂಜೆ ಇರಲಿಲ್ಲ<br>➢ ಪುರುಷ ದೇವರ ಆರಾಧನೆ |
| **ಕತೃಗಳು** | ದ್ರಾವಿಡರು ಈ ಸಂಸ್ಕೃತಿಯ ಕತೃಗಳು | ಆರ್ಯರು ಕತೃಗಳು |
| **ಶವ ಸಂಸ್ಕಾರ ಪದ್ದತಿ** | ಹೂಳುವ ವ್ಯವಸ್ಥೆ | ಸುಡುವ ಪದ್ದತಿ |

**ಜಾತಿ ಮತ್ತು ವರ್ಣ ವ್ಯವಸ್ಥೆ ಉಗಮವಾದ ಬಗೆ:–**

**'ಜಾತಿ'** ಎಂಬ ಪದವು, ಪೋರ್ಚುಗೀಸ್ ಮೂಲದ **"ಕಾಸ್ಟಾ"** ಎಂಬ ಪದದಿಂದ ಬಂದಿದೆ. ಇದರರ್ಥವು ಅನುವಂಶೀಯತೆ/ತಳಿ/ಜನಾಂಗ ಎಂದರ್ಥ. ಉತ್ತರ ವೈದಿಕ ಕಾಲದಲ್ಲಿ ವೃತ್ತಿ ಆಧಾರಿತವಾಗಿ ಬೆಳೆದ ವರ್ಣವು ಮುಂದೆ ಸಂಕೀರ್ಣಗೊಂಡು ಹುಟ್ಟಿನ ಆಧಾರದ ಮೇಲೆ ಬದಲಾಗಿ, ಜಾತಿಯಾಗಿ ರೂಪುಗೊಂಡಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ 4 ವರ್ಣಗಳಾದರೆ ಇದರ ಫಲವಾಗಿ ಇಂದು 4000 ಕ್ಕೂ ಹೆಚ್ಚು ಅಧಿಕ ಜಾತಿಗಳ ಅಸ್ತಿತ್ವವಿದೆ. ಜಾತಿ ಮತ್ತು ವರ್ಗ ವ್ಯವಸ್ಥೆಗಳು **'ಸಾಮಾಜಿಕ ಸ್ತರ ವಿನ್ಯಾಸದ'** 2 ಪ್ರಮುಖ ಘಟಕಗಳಾಗಿವೆ.

**ಜಾತಿಯ ವ್ಯಾಖ್ಯಾನ:–**

ಪ್ರೊ. ರ್‍ಯಾಪ್ಸನ್ ಅವರ **'EVELUTION OF CAST'** ಕೃತಿಯಲ್ಲಿ **"ವಿವಾಹ, ವೃತ್ತಿ, ದೇವತಾ ಪೂಜೆಗಳಂತಹ ಕೆಲವು ಸಾಮಾಜಿಕ ಆಚಾರಗಳ ಪರಿಶುದ್ಧತೆ ಕಾಪಾಡಲು ಸಂಘಟಿತ ಕೆಲವು ಜನರ ಸಮೂಹವೆ ಜಾತಿ."** ಎಂದು ವ್ಯಾಖ್ಯಾನಿಸಿದ್ದಾರೆ.

**ಜಾತಿ ಪದ್ಧತಿಯ ಉಗಮ:–**

**"CAST IS A SOCIAL CUSTOM AND ALL OF OUR GREAT PREACHERS HAVE TRIED TO BREAK IT DOWN"** ಸ್ವಾಮಿ ವಿವೇಕಾನಂದ

ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಅಂತರ್ಗತವಾಗಿರುವ ಜಾತಿಯನ್ನು, ಸಮಾಜದಿಂದ ಬೇರ್ಪಡಿಸುವುದು ಅಸಾಧ್ಯವೆಂಬ ಸ್ಥಿತಿ ನಿರ್ಮಾಣವಾಗಿದೆ. **'ಜಾತಿ'** ಯ ಹುಟ್ಟು ಯಾವ ನಿಶ್ಚಿತ ಸಮಯದಲ್ಲಿ ಆಗಿದೆ ಎಂಬುದನ್ನು ಹೇಳುವುದು ಕಷ್ಟಕರವಾದ್ದರಿಂದ. (ಜಾತಿಯ ಬೆಳವಣಿಗೆಯ 3 ಪ್ರಮುಖ ಹಂತಗಳನ್ನು ಚರ್ಚಿಸಬಹುದು.

- ವೇದ ಮತ್ತು ವೇದೋತ್ತರ ಕಾಲ (ಕ್ರಿ.ಶ 1100)
- ಮಧ್ಯಕಾಲಿನ ಕಾಲ( ಕ್ರಿ.ಶ. 1100–1757)
- ಆಧುನಿಕ ಕಾಲ (ಕ್ರಿ.ಶ 1757 ನಂತರ)

**1) ವೇದ ಮತ್ತು ವೇದೋತ್ತರ ಕಾಲ;**

ವರ್ಣವು ಉತ್ತರ ವೈದಿಕ ಕಾಲದಿಂದ ಹುಟ್ಟಿ ನಂತರ ಜಟಿಲವಾದ ಮಾರ್ಪಾಡುಗಳಿಂದ ಜಾತಿಯಾಗಿ ರೂಪುಗೊಂಡಿದೆ. ಋಗ್ವೇದದ 10 ನೇ ಮಂಢಲದ **'ಪುರುಷ ಸೂಕ್ತದಲ್ಲಿ'** ಜಾತಿಯ ಉಲ್ಲೇಖವಿದೆ. **'ಚಾತುರ್ವರ್ಣ ಪದ್ದತಿ'** ಯಂತೆ ವೃತ್ತೀಯ ಆಧಾರದ ಮೇಲೆ ಸಮಾಜವನ್ನು **ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ** ಎಂದು ವಿಭಜಿಸಲಾಯಿತು. ಇವರು ಕ್ರಮವಾಗಿ ಸೃಷ್ಟಿಕರ್ತನಾದ **ಬ್ರಹ್ಮನ ಮುಖ, ಭುಜ, ತೊಡೆ ಹಾಗೂ ಪಾದದಿಂದ** ಹುಟ್ಟಿದರೆಂಬ ನಂಬಿಕೆ. ವೃತ್ತಿ ಆಧಾರಿತವಾಗಿದ್ದ ಈ ವಿಭಜನೆಯು

ಕ್ರಮೇಣವಾಗಿ ಜಟಿಲಗೊಂಡು ಹುಟ್ಟಿನಿಂದಲೇ ವ್ಯಕ್ತಿಯ ವರ್ಣ ನಿರ್ಧಾರಿತವಾಗಿ ಜಾತಿಯಾಗಿ ರೂಪುಗೊಂಡಿತು.

**2) ಮಧ್ಯಕಾಲಿನ ಕಾಲದಲದಲ್ಲಿ ಜಾತಿ:–**

ಹುಟ್ಟಿನ ಶ್ರೇಷ್ಠತೆ, ಬ್ರಾಹ್ಮಣರ ಮತ್ತು ಜಮೀನ್ದಾರರ ಪ್ರಾಬಲ್ಯ, ಸ್ವಯಂ ಸಾಮರ್ಥ್ಯವಿರುವ ಸ್ವಾವಲಂಬಿ ಹಳ್ಳಿಗಳಿಂದ **'ಸಾಮಾಜಿಕ ಚಲನೆ'** ಗೆ ಅವಕಾಶವಿಲ್ಲದೆ ಹಲವಾರು ಉಪಜಾತಿಗಳ ಉಗಮವಾಯಿತು. ರಾಜರುಗಳಿಂದ ದೊರೆಯುತ್ತಿದ್ದ ಜಾಗೀರು, ಹಣ, ರತ್ನಗಳಿಂದ ಬ್ರಾಹ್ಮಣರು ಪ್ರಬಲರಾದರೆ, ಮಧ್ಯಕಾಲಿನ ಯುಗದ ವಿದೇಶಿ ಆಕ್ರಮಣಗಳೀಂದ ವಿದೇಶಿ ವ್ಯಾಪಾರ ಮತ್ತು ಆಂತರಿಕ ವ್ಯಾಪಾರಿ ಕ್ಷೀಣಿಸಿ ವರ್ತಕ ವರ್ಗವು ಕುಸಿಯತೊಡಗಿತು. ರಜಪೂತರನ್ನೊಳಗೊಂಡು ಹಲವಾರು ಜಾತಿಗಳು ಕ್ಷತ್ರಿಯ ವರ್ಗಕ್ಕೆ ಸೇರ್ಪಡೆಯಾದವು.

**3) ಆಧುನಿಕ ಕಾಲದಲ್ಲಿ ಜಾತಿ:**

ಜಾತಿ ವ್ಯವಸ್ಥೆ ಅಸ್ಪೃಶ್ಯರ ಶೋಷಣೆ, ಸಾಮಾಜಿಕ ಮೌಢ್ಯ & ಅನಿಷ್ಟಗಳಿಂದ ಕಲುಷಿತವಾಗಿದ್ದ ಭಾರತೀಯ ಸಮಾಜದಲ್ಲಿ, ಸುಧಾರಣೆಯ ಕಿಡಿ ಹೊತ್ತಿಸಿದವರು ಸಾಮಾಜಿಕ ಸುಧಾರಕರು & ಪ್ರವರ್ತಕರು, ಹಲವಾರು ಆಂದೋಲನ, ಸಾಹಿತ್ಯ, ಜಾಗೃತಿ ಮೇಳಗಳಿಂದ ಜಾತಿಯ ವಿರುದ್ಧ ಹೋರಾಡಿ ಬ್ರಿಟಿಷರ ಮನವೊಲಿಸಿ, ಸತಿ ಸಹಗಮನ, ಬಾಲ್ಯವಿವಾಹ ಮುಂತಾದ ಕೆಟ್ಟ ಆಚರಣೆಗಳ ನಿಷೇಧಕ್ಕೆ ಕಾರಣರಾಗಿ ಜಾತಿ ವ್ಯವಸ್ಥೆಯು ಸುಧಾರಿಸಲು ಕಾರಣರಾದರು. ಸ್ವಾತಂತ್ರ್ಯಾನಂತರ ಸಾಂವಿಧಾನಿಕ ಕಾಯ್ದೆಗಳ ಮೂಲಕ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ & ಪರಿಶಿಷ್ಟ ವರ್ಗಗಳ ಏಳೀಗೆಗೆ ಶ್ರಮಿಸಲಾಗಿದ್ದು ಜಾತಿ ವ್ಯವಸ್ಥೆಯು ಸಡಿಲಗೊಂಡಿದ್ದರು, ಇನ್ನು ಅಸ್ತಿತ್ವದಲ್ಲಿದೆ.

**ವರ್ಣ ವ್ಯವಸ್ಥೆಯ ಉಗಮ:–**

ವರ್ಣ ಎಂಬ ಪದವು ಸಂಸ್ಕೃತದ **'ವೃ'** ಎಂಬ ಮೂಲದಿಂದ ಬಂದಿದ್ದು **'ವೃತ್ತಿಯನ್ನು ಆಯ್ಕೆ ಮಾಡು'** ಎಂಬ ಅರ್ಥವನ್ನು ಕೊಡುತ್ತದೆ

**ಉಗಮ:–**

- ಋಗ್ವೇದದ 10 ನೇ ಮಂಡಲದ ಪುರುಷ ಸೂಕ್ತದಲ್ಲಿ 'ವರ್ಣ' ದ ಬಗ್ಗೆ ಉಲ್ಲೇಖವಿದ್ದು ಅದರಂತೆ ವ್ಯಕ್ತಿಯ ಆಧಾರದ ಮೇಲೆ ಸಮಾಜವನ್ನು ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಎಂದು 4 ವರ್ಣಗಳಾಗಿ ವಿಭಜಿಸಲಾಯಿತು.
- ಚಾತುರ್ವರ್ಣಪದ್ಧತಿ ಎಂದೆ ಕರೆಯಲಾಗಿದ್ದ ಈ ವ್ಯವಸ್ಥೆಯಲ್ಲಿ, ವೃತ್ತಿ ಅನುವಂಶಿಕವಾಗಿರಲಿಲ್ಲ ಒಂದು ವೃತ್ತಿಯಿಂದ ಮತ್ತೊಂದು ವೃತ್ತಿಗೆ ಪರಿವರ್ತನೆ ಹೊಂದಲು ಅವಕಾಶವಿತ್ತು.



**ವರ್ಣಗಳ ಬೆಳವಣಿಗೆ:-**

- ಸೃಷ್ಟಿಕರ್ತನಾದ ಬ್ರಹ್ಮನ ಮುಖ, ಭುಜ, ತೊಡೆ ಹಾಗೂ ಪಾದದಿಂದ ಕ್ರಮವಾಗಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರರು ಹುಟ್ಟಿದರು ಎಂದು ಹೇಳಲಾಗಿದೆ.
- **ಸ್ಮೃತಿಕಾರ ಮನು ಹೇಳಿರುವಂತೆ ಬ್ರಾಹ್ಮಣರು ಪೂಜೆ, ಧಾರ್ಮಿಕ ಕಾರ್ಯಗಳು, ಕ್ಷತ್ರಿಯರು ದೇಶ ರಕ್ಷಣೆ & ಆಡಳಿತ ಪರಿಪಾಲನೆ, ವೈಶ್ಯರು ವ್ಯಾಪಾರ & ಕೃಷಿಯಲ್ಲಿ ತೊಡಗಿದ್ದರೆ, ಶೂದ್ರರು ಈ ಎಲ್ಲಾ ವರ್ಗಗಳ ಸೇವೆಯಲ್ಲಿ ತೊಡಗಿದ್ದರು.**
- ಸಾಮಾಜಿಕ ವಿಭಜನೆಯು **ಗುಣಕರ್ಮದ** ಮೇಲೆ ಆಧಾರದ ಮೇಲೆ ಸೃಷ್ಟಿಯಾಗಿತ್ತು.

- **ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆಗಿಂತ ಭಿನ್ನವೇ?**

ಹೌದು ದೈವವಾಣಿಯೊಂದು ಹೇಳಿರುವಂತೆ **"ಹುಟ್ಟುತ್ತ ಎಲ್ಲರು ಶೂದ್ರರಾಗಿ ಹುಟ್ಟುತ್ತಾರೆ. ಅನಂತರ ಜೀವನದಲ್ಲಿ ಉತ್ತಮ ಸಂಸ್ಕಾರ ಹೊಂದಿದವನು ಬ್ರಾಹ್ಮಣತ್ವ ಪಡೆಯುತ್ತಾನೆ."** ಅಂದರೆ ಗುಣ ಕರ್ಮದಿಂದ ಯಾವ ವೃತ್ತಿಯನ್ನಾದರು ಕೈಗೊಳ್ಳಬಹುದಾಗಿತ್ತು.

ಉದಾ:- 1. ವಸಿಷ್ಠ ವೈಶ್ಯನಾದರೂ, ಗುಣಕರ್ಮದಿಂದ ಮಹರ್ಷಿ ಆದರು

2. ವಿಶ್ವಾಮಿತ್ರ ಕ್ಷತ್ರಿಯನಾದರೂ, ಬ್ರಾಹ್ಮಣ ವೃತ್ತಿ ಕೈಗೊಂಡನು.

ಆರ್ಯರು ಭಾರತದ ಮೂಲವಾಸಿಗಳಾದ ಕಪ್ಪಾದ ದ್ರಾವಿಡರಿಂದ ಪ್ರತ್ಯೇಕಿಸಿಕೊಳ್ಳಲು ಹುಟ್ಟುಹಾಕಿದ ಪದ್ದತಿ ಇದು. ವರ್ಣವೇ ಬೇರೆ, ಜಾತಿಯೇ ಬೇರೆ. **ವೃತ್ತಿಯಿಂದ ವರ್ಣವಾದರೆ ಹುಟ್ಟಿನಿಂದ ಜಾತಿಯಾಯಿತು**. ಆದ್ದರಿಂದ ವಿ. ಎ ಸ್ಮಿತ್ & ಮಾಕ್ಸಮುಲ್ಲರ್ ಹೇಳುವಂತೆ ಋಗ್ವೇದಕಾಲದಲ್ಲಿ ವರ್ಣವ್ಯವಸ್ಥೆ ಅಸ್ತಿತ್ವದಲ್ಲಿತ್ತು ಆದರೆ ಜಾತಿ ಪದ್ದತಿ ಇರಲಿಲ್ಲ.

## <u>ಧಾರ್ಮಿಕ ಚಳುವಳಿಗಳ ಉಗಮ</u>

**ಹಿನ್ನೆಲೆ:-**

ಅಂಧ ಧಾರ್ಮಿಕ, ಮತಶ್ರದ್ಧೆಗಳು ತೀವ್ರವಾಗಿದ್ದ ಕಾಲದಲ್ಲಿ, ಇವುಗಳನ್ನು ಅಂತ್ಯಗೊಳಿಸಲು ಕ್ರಿ. ಪೂ. 6 ನೇ ಶತಮಾನದಲ್ಲಿ ಹಲವಾರು ಧರ್ಮಗಳು, ಸಾಮ್ರಾಜ್ಯಗಳು, ಧಾರ್ಮಿಕ ಸುಧಾರಕರು ಪಣತೊಟ್ಟು, ಭಾರತೀಯ ರಾಜಕೀಯ & ಧಾರ್ಮಿಕ ಇತಿಹಾಸದಲ್ಲಿ ಹೊಸ ಮನ್ವಂತರಕ್ಕೆ ಕಾರಣರಾದರು. ಆದ್ದರಿಂದ ಈ ಪ್ರಬುದ್ಧ ಕಾಲವನ್ನು **'ಪರಿವರ್ತನೆ ಯುಗ'** ಎಂದು ಕರೆಯುತ್ತಾರೆ. ಆದ್ಯಾತ್ಮಿಕತೆ ಮತ್ತು ತತ್ವಶಾಸ್ತ್ರದ ಬಗ್ಗೆ ಹಲವಾರು ಪ್ರವರ್ತಕರು ತತ್ವಜ್ಞಾನಿಗಳು, ಸುಧಾರಕರು ಜನರಲ್ಲಿ ಜಾಗೃತಿ ಮೂಡಿಸಿ ಪರಿವರ್ತನೆಗೆ ಅವರನ್ನು

ಸೆಳೆಯಲು ಹೊಸ ಧರ್ಮಗಳನ್ನು ಸ್ಥಾಪಿಸಿ ಸಮಾಜವನ್ನು ಸುಧಾರಿಸಿದವರು ಆದ್ದರಿಂದ ಈ ಕಾಲವನ್ನು "ಅಸಮ್ಮತಿ &ಪ್ರತಿಭಟನೆಯ ಕಾಲ ಎನ್ನಲಾಗಿದೆ

**<u>ಧಾರ್ಮಿಕ ಚಳುವಳಿ & ಹೊಸ ಧರ್ಮಗಳ ಉದಯಕ್ಕೆ ಕಾರಣಗಳು</u>**

- ವೇದ ಧರ್ಮಗಳ ಅಂಧಶ್ರದ್ಧೆ ಜಟಿಲತೆ, ದುಬಾರಿ ಯಜ್ಞ ಆಚರಣೆಗಳು, ಬ್ರಾಹ್ಮರ ಶ್ರೇಷ್ಠತೆಯ ವಿರುದ್ಧ ಅವೈದಿಕ ಧರ್ಮಗಳಾದ ಜೈನ & ಬೌದ್ಧ ಧರ್ಮಗಳು ದಂಗೆ ಎದ್ದವು

**ಈ ಹೊಸ ಧರ್ಮಗಳ ಉದಯಕ್ಕೆ ಕಾರಣಗಳು**

1. ಸಂಕೀರ್ಣ ಸಂಸ್ಕಾರ & ದುಬಾರಿ ಆಚರಣೆ
2. ಮಂತ್ರ– ತಂತ್ರಗಳ ಅಂಧಶ್ರದ್ಧೆ
3. ಬ್ರಾಹ್ಮಣರ ಶ್ರೇಷ್ಠತೆ
4. ಕಠಿಣವಾದ ಸಂಸ್ಕೃತ ಭಾಷೆ
5. ಮುಕ್ತಿ ಸಾಧನೆಯ ಕ್ಲಿಷ್ಟಕರ ಮಾರ್ಗಗಳು
6. ಶೋಷಿತ ಸಾಮಾಜಿಕ ಸ್ತರ ವಿನ್ಯಾಸ (ಜಾತಿ ಪದ್ಧತಿ)
7. ಬ್ರಾಹ್ಮಣ & ಕ್ಷತ್ರೀಯರ ನಡುವಿನ ದ್ವೇಷ
8. ಪ್ರಬಲ ವೈದಿಕ ರಾಜ ಮನೆತನಗಳು ಉದಾ; ಮಗಧ
9. ವ್ಯಾಪರಿ ವರ್ಗದ ಉದಯ
10. ಪ್ರಾಣಿ ಬಲಿ
11. ನಗರೀಕರಣ

**<u>ಧಾರ್ಮಿಕ ಚಳುವಳಿಗಳ 2 ಹಂತಗಳು</u>**

1. ವೇದ ಪೂರ್ವ & ವೇದ ಕಾಲದಲ್ಲಿನ ಧಾರ್ಮಿಕ ಚಳುವಳಿಗಳು
2. ಮಧ್ಯಕಾಲಿನ ಭಾರತದಲ್ಲಿನ ಧಾರ್ಮಿಕ ಚಳುವಳಿಗಳು

**<u>1. ವೇದ ಪೂರ್ವ & ವೇದ ಕಾಲದಲ್ಲಿನ ಧಾರ್ಮಿಕ ಚಳುವಳಿಗಳು</u>**

- ವೇದ ಪೂರ್ವ ಕಾಲದಲ್ಲಿ ಜನರು, ಭೂಮಿಯ ಒಂದು ದೈವಿಕ ಶಕ್ತಿಯಿಂದ ಸೃಷ್ಟಿಯಾಗಿದೆ ಎಂದು ನಂಬಿದ್ದರು.
- ಪ್ರಕೃತಿ ಶಕ್ತಿಗಳಾದ ಸೂರ್ಯ ಮತ್ತು ಚಂದ್ರರಂತಹ ದೈವಗಳನ್ನು ಆರಾಧಿಸುತ್ತಿದ್ದರು
- ಋಗ್ವೇದ ಕಾಲದಲ್ಲಿ **ಇಂದ್ರ, ವರುಣ, ಅಗ್ನಿ, ರುದ್ರ** ಮುಂತಾದ ದೈವಗಳನ್ನು ಆರಾಧಿಸುತ್ತಿದ್ದರು
- **ಸಾಮವೇದ& ಯರ್ಜುವೇದ ಕಾಲದಲ್ಲಿ ಯಜ್ಞ ಯಾಗಾದಿಗಳು, ಕ್ರೀಯಾ ವಿಧಿಗಳು, ಶ್ಲೋಕಗಳು ಮತ್ತು ಸಂಗೀತದ ಪ್ರಭಾವ ಹೆಚ್ಚಿತು.**
- **ಅಥರ್ವಣ ವೇದಗಳ ಕಾಲದಲ್ಲಿ ಮೂಢನಂಬಿಕೆಗಳು, ಮಂತ್ರ– ತಂತ್ರಗಳು ಬಳಕೆ ಹೆಚ್ಚಿತು.**

- **ಅಸಾಂಪ್ರದಾಯಿಕ ಧಾರ್ಮಿಕ ಚಳುವಳಿಗಳು:–**

ವೇದಗಳು ಮತ್ತು ಬ್ರಾಹ್ಮಣರ ಶ್ರೇಷ್ಠತೆಯನ್ನು ಖಂಡಿಸಿ ಅವುಗಳ ಶೋಷಣೆಯ ವಿರುದ್ಧ ದಂಗೆದ್ದು ಉದಯವಾದ ಧಾರ್ಮಿಕ ಚಳುವಳಿಗಳಲ್ಲಿ ಪ್ರಮುಖವಾದವು ಬೌದ್ಧ

ಮತ್ತು ಜೈನ ಧರ್ಮಗಳು (ಈ ಧರ್ಮಗಳ ತತ್ವಗಳ ಬಗ್ಗೆ ಭಾರತೀಯ ದರ್ಮಗಳಲ್ಲಿ ವಿವರಿಸಲಾಗಿದೆ.)

- **ಸಾಂಪ್ರದಾಯಿಕ ಅಥವಾ ಆಸ್ತಿಕ ಧರ್ಮಗಳು:**

ವೇದ ಮತ್ತು ಉಪನಿಷತ್‌ಗಳ ಸ್ಪೂರ್ತಿಗಳಿಂದ ನಾಸ್ತಿಕ ಧರ್ಮಗಳ ಜೊತೆಯಲ್ಲಿಯೆ ಅವುಗಳಿಗೆ ವಿರುದ್ಧವಾಗಿ ಉದಯಗೊಂಡ ಧರ್ಮಗಳೇ ಆಸ್ತಿಕ ಧರ್ಮಗಳು

ಉದಾ: ವೈಷ್ಣವ, ಶೈವ, ಶಕ್ತಿ ಪಂಥಗಳು

**2. ಮಧ್ಯಕಾಲಿನ ಭಾರತದಲ್ಲಿನ ಧಾರ್ಮಿಕ ಚಳುವಳಿಗಳು:–**

ಅನಿಷ್ಟ ಮತ್ತು ಮೌಢ್ಯಗಳಿಂದ ಕಲುಷಿತವಾಗಿದ್ದ ಹಿಂದೂ ಮತ್ತು ಮುಸ್ಲಿಂ ಧರ್ಮಗಳಲ್ಲಿ ಸುಧಾರಣೆಗೆ ಮತ್ತು ಉದಾರೀಕರಣಗೊಳ್ಳಲು ಉದಯಗೊಂಡ ಧಾರ್ಮಿಕ ಚಳುವಳಿಗಳೇ ಭಕ್ತಿ ಪಂಥ ಮತ್ತು ಸೂಫಿ ಪಂಥ. **ಹಿಂದೂ ಧರ್ಮದಲ್ಲಿ ಮೋಕ್ಷಕ್ಕೆ ಭಕ್ತಿಯೇ ಸಾಧನ** ಎಂದ **ಭಕ್ತಿ ಪಂಥವು** ಇಸ್ಲಾಂ ಧರ್ಮದಲ್ಲಿ ಮೌಢ್ಯಗಳನ್ನು ಖಂಡಿಸಿ, ಉದಾರತೆಯನ್ನು ಪ್ರತಿಪಾದಿಸಿದ ಸೂಫಿ ಪಂಥವು, **ಜಾತಿರಹಿತ ಸಮಾಜ** ನಿರ್ಮಾಣಕ್ಕೆ ಒತ್ತು ನೀಡುದವು.

**1(ii) ವೈದಿಕ ಸಾಹಿತ್ಯ (ಕ್ರಿ.ಪೂ.2500–750)**

- **ವೈದಿಕ ಸಾಹಿತ್ಯ ಎಂದರೆನು? ಅದರ ಮಹತ್ವ ಏನು?**

ಹಿಂದೂ ಧರ್ಮದ ಪೂಜನೀಯ ಮತ್ತು ಪವಿತ್ರ ಜ್ಞಾನದ ಮೂಲವಾಗಿರುವ ವೈದಿಕ ಸಾಹಿತ್ಯವು ಭಾರತದ ಅತ್ಯಂತ ಪುರಾತನ ಸಾಹಿತ್ಯವಾಗಿದೆ. ಋಷಿಗಳಾದ ವಿಶ್ವಾಮಿತ್ರ, ವಸಿಸ್ಟ, ಭಾರದ್ವಾಜ, ಕಣ್ವ ಮೊದಲಾದವರಿಂದ ರಚಿತಗೊಂಡು ಮೌಖಿಕವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆಯಾಗಿರುವ ಸಂಸ್ಕೃತ ಭಾಷೆಯಲ್ಲಿರುವ ಸಾಹಿತ್ಯವೆ 'ವೈದಿಕ ಸಾಹಿತ್ಯ'.

- **ಮಹತ್ವ:–**
    - ಆಧ್ಯಾತ್ಮಿಕ ಮತ್ತು ವೈಚಾರಿಕ ಜ್ಞಾನದ ಮೂಲ
    - ಜ್ಞಾನ, ಕರ್ಮ& ಭಕ್ತಿ ಸಿದ್ಧಾಂತಗಳ ಆಧಾರ
    - ಸಾಕ್ಷಾತ್ ದೇವರಿಂದ ರಚಿತವಾಗಿರುವ ದಿವ್ಯ ಜ್ಞಾನ ಎಂಬ ನಂಬಿಕೆ
- **ವೈದಿಕ ಸಾಹಿತ್ಯದ 2 ವಿಧಗಳು**

| ಶೃತಿ | ಸ್ಮೃತಿ |
|---|---|
| | |

| | |
|---|---|
| ➢ ವೇದಗಳು, ಬ್ರಾಹ್ಮಣಕಗಳು ಅರಣ್ಯಕಗಳು, ಉಪನಿಷತ್ತುಗಳು | ➢ ವೇದಾಂಗಗಳು, ದರ್ಮಶಾಸ್ತ್ರ, ಉಪವೇದ, ಮಹಾಕಾವ್ಯ ಪುರಾಣಗಳು |

➢ **6 ವೇದಾಂಗಗಳು**

1. ಶಿಲ್ಪ – ಸಂಸ್ಕಾರ ಶಾಸ್ತ್ರ
2. ಶಿಕ್ಷಾ – ದ್ವನಿ ಶಾಸ್ತ್ರ
3. ವ್ಯಾಕರಣ – ಭಾಷಾಶಾಸ್ತ್ರ
4. ನಿರುಕ್ತಿ – ವ್ಯುತ್ಪತ್ತ ಶಾಸ್ತ್ರ(Etymology)
5. ಛಂದಸ್ಸು – ಛಂದಸ್ಸು ಶಾಸ್ತ್ರ
6. ಜೋತಿಷ್ಯ – Astrology

➢ **4 ಉಪವೇದಗಳು**

1. **ಆಯುರ್ವೇದ (ಋಗ್ವೇದ)**–ಔಷಧಿ & ಗಿಡಮೂಲಿಕೆ
2. **ಧನುರ್ವೇದ (ಯಜುರ್ವೇದ)** – ಯುದ್ದಕಲೆ ಅಥವಾ ಬಿಲ್ವಿದ್ಯೆ
3. **ಗಂಧರ್ವವೇದ (ಸಾಮವೇದ)** – ಸಂಗೀತ & ನೃತ್ಯಕಲೆ
4. **ಶಿಲ್ಪವೇದ (ಅಥರ್ವಣ)** – ವಾಸ್ತುಶಿಲ್ಪ

➢ **ಷಡ್ದರ್ಶನಗಳು**

| **ದರ್ಶನ** | ಕರ್ತೃ | ಮಹತ್ವ |
|---|---|---|
| **ಸಾಂಖ್ಯ** | ಕಪಿಲ | ಪ್ರಕೃತಿ ಆತ್ಮಗಳ ಅಮರತ್ವ |
| **ವೈಶೇಷಿಕ** | ಕಣಾದ | ದೇವರ ನಿರಾಕರಣೆ |
| **ಯೋಗ** | ಪತಂಜಲಿ | ಯೋಗದಿಂದ ಮುಕ್ತಿ ಸಾಧನೆ |
| **ನ್ಯಾಯ** | ಗೌತಮ | ದೇವರ ಅರಿವಿಗೆ ಕರ್ಮಮಾರ್ಗ |
| **ಪೂರ್ವಮೀಮಾಂಸೆ** | ಜೈಮಿನಿ | ಮುಕ್ತಿ ಸಾಧನೆ ಕರ್ಮಮಾರ್ಗ |
| **ಉತ್ತರ ಮೀಮಾಂಸೆ** | ವ್ಯಾಸ | ದೇವರೇ ಸರ್ವಶಕ್ತ |

**ಮಹಾಕಾವ್ಯಗಳು ಮತ್ತು ಪುರಾಣಗಳು:–**

**ಮಹಾಕಾವ್ಯಗಳು:–**

➢ ಕಾವ್ಯಯುಗವು ಋಗ್ವೇದ & ಬೌದ್ಧ ಧರ್ಮದ ನಡುವಿನ ಕಾಲ($6^{th}$ BC to $1^{st}$ BC)

➢ ರಾಮಾಯಣ & ಮಹಾಭಾರತ ವೈದಿಕ ಸಾಹಿತ್ಯದ 2 ಮಹಾಕಾವ್ಯಗಳು ಇವುಗಳನ್ನು ಗ್ರೀಕ್ ಮಹಾಕಾವ್ಯಳಾದ **ಈಲಿಯಡ್** & **ಒಡಿಸ್ಸಿಗೆ** ಹೊಲಿಸಲಾಗಿದೆ

➢ ವಾಲ್ಮೀಕಿ ರಚಿತ ರಾಮಾಯಣವು ಆರ್ಯ & ಅನಾರ್ಯರ ನಡುವಿನ ಹೋರಾಟ ಮತ್ತು ರಾಮ ಸೀತೆಯರ ಕಥೆ, ರಾಮ ರಾವಣರ ಧರ್ಮಯುದ್ದ ಹೊಂದಿದ್ದರೆ

ವ್ಯಾಸ ಮಹರ್ಷಿ ರಚಿತ ಮಹಾಭಾರತವು ಪಾಂಡವರು ಮತ್ತು ಕೌರವರ ನಡುವಿನ ಹೋರಾಟವಾಗಿದೆ.

- ರಾಮಾಯಣ–24,000 ಶ್ಲೋಕ

  ಮಹಾಭಾರತ 1ಲಕ್ಷ ಶ್ಲೋಕ & 18 ಪರ್ವ

- ರಾಮಾಯಣದ ಭಾಗಗಳನ್ನು 'ಕಾಂಡಾ' ಎಂದರೆ ಮಹಾಭಾರತದ ಭಾಗಗಳನ್ನು 'ಪರ್ವ' ಗಳು ಎನ್ನಲಾಗುತ್ತದೆ.

**ಪುರಾಣಗಳು;–**

(ರಚನೆ– ಕ್ರಿ ಶ 3 ರಿಂದ 10 ನೇ ಶತಮಾನದ ವರೆಗೆ)

- ಪ್ರಾಚೀನ ಭಾರತವನ್ನು ಆಳಿದ ರಾಜಮನೆತನಗಳ ಹಾಗೂ ಪ್ರಾಚೀನ ಭೌಗೋಳಿಕ ಗಡಿ & ವಿಸ್ತೀರ್ಣಗಳ ಬಗ್ಗೆ ಮಾಹಿತಿ ತಿಳಿಸುವ ಸಮಗ್ರ ಇತಿಹಾಸವೆ **ಪುರಾಣಗಳು**.

**ಲಕ್ಷಣಗಳು:–**

- ವಿಶ್ವಸೃಷ್ಠಿ
- ಪುನರ್ ಸೃಷ್ಠಿ & ವಿನಾಶ
- ರಾಜಾವಳಿ
- ಮನುಯುಗ
- ಸಾಮ್ರಾಜ್ಯಯುಗ

- ಒಟ್ಟು 18 ಪುರಾಣಗಳು

ಪ್ರಮುಖವಾದವು:–

ವಾಯುಪುರಾಣ, ಸ್ಕಂದಪುರಾಣ, ಮತ್ಸ್ಯಪುರಾಣ ಇತ್ಯಾದಿ :

- **ಭಾರತೀಯರ ಜೀವನದ & ಸಂಸ್ಕೃತಿಯ ಮೇಲೆ ಪುರಾಣಗಳ ಪರಿಣಾಮ:–**

**ರಾಮಾಯಣ:–**

- ಸಮಾಜದ ಮುಖ್ಯ ಘಟಕವಾಗಿರುವ ಕುಟುಂಬದ ಒಳಿತಿಗೆ ಅವಶ್ಯವಿರುವ ಕೌಟುಂಬಿಕ ಸಂಬಂಧಗಳ ಮಹತ್ವವನ್ನು ತಿಳಿಸುತ್ತದೆ.
- ಭಾರತೀಯ ಮಹಿಳೆಯರಿಗೆ ಸೀತೆಯ ತ್ಯಾಗ ಮತ್ತು ಪರಿಶುದ್ಧತೆಯ ಅರಿವು
- ರಾಮನ ತ್ಯಾಗ, ಪಿತೃ ಪ್ರೇಮ, ಸತ್ಯ ಆದರ್ಶ ವ್ಯಕ್ತಿತ್ವ, ಶೌರ್ಯ, ಲಕ್ಷ್ಮಣನ ಮೇಲಿನ ಸಹೋದರ ಪ್ರೇಮ, ಇವೆಲ್ಲವೂ ಸಮಕಾಲೀನ ಸಮಾಜಕ್ಕೆ ಆದರ್ಶವಾಗಿವೆ.

- ಉಪನಯನ, ಕರ್ಣಚೂಡದಂತಹ ೧೮ ಸಂಸ್ಕಾರಗಳು ಇಂದಿಗೂ ಬಳಕೆಯಲ್ಲಿವೆ.

**ಮಹಾಭಾರತ:–**

- ದುರ್ಯೋದನನ ಪತನದಿಂದ, **ಸರ್ವಸುಖವೂ ಕ್ಷಣಿಕ, ಮಾನವನ ಆಡಂಬರ ಅಲ್ಪಕಾಲಿಕ** ಎಂದು ತಿಳಿಯುತ್ತದೆ.
- ಜೀವನ ಒಂದು ಪಯಣದಂತೆ, ಇದರ ಅರ್ಥವು ದರ್ಮದ ಆಚರಣೆಯಿಂದ ಅರಿವಾಗುತ್ತದೆ.
- ಕರ್ಣ ದುರ್ಯೋದನರ ಸ್ನೇಹವು ಜಗತ್ತಿಗೆ ಆದರ್ಶವಾಗಿದೆ.
- ಮಹಾಭಾರತದಲ್ಲಿ ಬರುವ **'ಹರಿಶ್ಚಂದ್ರ'** ನಾಟಕದಿಂದ **ಮಹಾತ್ಮ ಗಾಂಧಿಯವರು** ಪ್ರೇರಿತರಾಗಿ ಅವರು ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ **ಸತ್ಯ, ನಿಸ್ವಾರ್ಥಕ್ಕೆ ಈ ನಾಟಕವೇ ಕಾರಣ** ಎಂದು ಹೇಳಿಕೊಂಡಿರುವುದು ಇದರ ಮಹತ್ವವನ್ನು ಸೂಚಿಸುತ್ತದೆ.
- ಧರ್ಮವೇ ಎಲ್ಲದಕ್ಕಿಂತ ಉನ್ನತ ಎಂಬುದು ಅರಿವಾಗುತ್ತದೆ.

- **ಪುರಾಣಗಳ ಮಹತ್ವ**
  - ಪುರಾಣಗಳಲ್ಲಿ ಬರುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳು ಇಂದಿಗೂ ಜೀವಂತವಾಗಿದೆ.

    ಉದಾ: **'ಭಗವತ್ ಪುರಾಣ'** ದಿಂದ ಪ್ರೇರಿತವಾಗಿ ದಕ್ಷಿಣ ಭಾರತದಲ್ಲಿ **'ಭರತನಾಟ್ಯ'** ಮತ್ತು ಈಶಾನ್ಯ ಭಾರತದಲ್ಲಿ **'ರಾಸಲೀಲಾ'** ಪ್ರಚಲಿತವಾದವು.
  - ಇಂದು ಆಚರಣೆಯಲ್ಲಿರುವ ಹೋಳಿ, ದೀಪಾವಳಿ, ದುರ್ಗಾಪೂಜೆ, ಅಮವಾಸ್ಯೆ, ಹುಣ್ಣಿಮೆಗಳೆಲ್ಲವೂ ಪುರಾಣಗಳಿಂದ ಬಂದುದಾಗಿವೆ.

**ರಾಜ್ಯಾಡಳಿತದಲ್ಲಿ ಗದ್ಯಕೃತಿಗಳ ರಚನೆ& ನೀತಿ:–**

- ಪ್ರಾಚೀನ ಭಾರತದ ರಾಜ್ಯಾಡಳಿತ, ಸಮಾಜ ಕಾನೂನು ಮತ್ತು ನ್ಯಾಯಿಕ ಸಂಸ್ಥೆಗಳು, ಮುಂತಾದವುಗಳ ಬಗ್ಗೆ ತಿಳಿದುಕೊಳ್ಳಲು ಪುರಾತನ ಸಾಹಿತ್ಯಗಳು ವಿದೇಶಿ ಯಾತ್ರಿಕರು ಬರೆದಿರುವ ಪ್ರಾವಾಸ ಕೃತಿಗಳು, ಶಾಸನಗಳು, ಪಳೆಯುಳಿಕೆಗಳು ಅವಶ್ಯಕ.
- ಪ್ರಾಚೀನ ಭಾರತೀಯರಿಗೆ ರಾಜ್ಯಶಾಸ್ತ್ರ & ರಾಜಕೀಯ ಸಂಘಟನೆಗಳ ಬಗ್ಗೆ ಉತ್ತಮವಾದ ಅರಿವಿತ್ತು. ರಾಜ್ಯಾಡಳಿತವನ್ನು 'ರಾಜಧರ್ಮ', 'ರಾಜ್ಯಶಾಸ್ತ್ರ', 'ದಂಡನೀತಿ', 'ನೀತಿಶಾಸ್ತ್ರ', 'ಅರ್ಥಶಾಸ್ತ್ರ' ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು.
- ಗದ್ಯಕೃತಿಗಳ ಕಾಲವನ್ನು ೧) ಕೌಟಿಲ್ಯ ಪೂರ್ವಕಾಲ ೨) ಕೌಟಿಲ್ಯನ ನಂತರದ ಕಾಲ ಎಂದು ವಿಭಜಿಸಿಬಹುದು.

| ಕೌಟಿಲ್ಯ ಪೂರ್ವ ಕಾಲ | ಕೌಟಿಲ್ಯನ ಉತ್ತರದ ಕಾಲ |
|---|---|
| • ಮಹಾಭಾರತ:– ಆದಿಪರ್ವ, ಶಾಂತಿಪರ್ವ, ವಾನಪರ್ವಗಳು ರಾಜನ ಕರ್ತವ್ಯಗಳು ಮತ್ತು ಆಡಳಿತದ ಮೇಲೆ ಬೆಳಕು ಚೆಲ್ಲುತ್ತದೆ. | • ಕಾಮಾಂದಕ ನ 'ನೀತಿ ಪಾಠ' (ಗುಪ್ತರ ಕಾಲದಲ್ಲಿ ರಚನೆ)<br>• ತಿರುವಳ್ಳುವರನ 'ತಿರುಕ್ಕುರಳ್' ೫ನೇ ಶತಮಾನ |

**ಅರ್ಥಶಾಸ್ತ್ರ:–**

| | |
|---|---|
| ಕೌಟಿಲ್ಯ ಅಥವಾ ವಿಷ್ಣುಗುಪ್ತನಿಂದ ರಚಿತವಾಗಿರುವ **'ಅರ್ಥಶಾಸ್ತ್ರ'** ವು ರಾಜ್ಯಶಾಸ್ತ್ರ ಸಾಮಾಜಿಕ ಆಡಳಿತ, ರಾಜ್ಯಾಡಳಿತ, ಕಾನೂನು ಆರ್ಥಿಕ ವ್ಯವಸ್ಥೆ ಹೀಗೆ ಎಲ್ಲಾ ಕ್ಷೇತ್ರಗಳ ಸಮಸ್ಯೆಗೆ ಪರಿಹಾರ & ಉತ್ತಮ ಆಡಳಿತ ನೀಡಲು ರಚಿತವಾಗಿವ ಶ್ರೇಷ್ಠ ಕೃತಿ. | • ಜೈನ ಸಾಹಿತಿ, ಸೋಮದೇವ ಸೂರಿಯಿಂದ ರಚನೆವಾದ **'ನೀತಿಕಾವ್ಯ ಮಿತ್ರ'**<br>• ಶುಕ್ರಾಚಾರ್ಯರಿಂದ ರಚಿತವಾದ **'ಶುಕ್ರನೀತಿಸಾರ'** ಪ್ರಾಚೀನ ಭಾರತದ ಆಡಳಿತ ತಿಳಿಯಲು ಪ್ರಮುಖವಾಗಿದೆ. |

**ಪ್ರಾಚೀನ ಭಾರತದಲ್ಲಿ ವಿಜ್ಞಾನ & ತಂತ್ರಜ್ಞಾನ**

ಜಗತ್ತಿನ ಎಲ್ಲಡೆಯಿಂದ ಪ್ರಾಚೀನ ಭಾರತದಲ್ಲಿಯ ಹಲವಾರು ಮಹಾನ್ ವ್ಯಕ್ತಿಗಳು ವೈಜ್ಞಾನಿಕ ಮನೊಭಾವನೆ ರೂಢಿಸಿಕೊಂಡು ಅದ್ಭುತ ವೈಜ್ಞಾನಿಕ ಅನ್ವೇಷಣೆಗಳಿಗೆ ಕಾರಣರಾದರು. ಮಾನವ ಕುಲದ ಉದ್ಧಾರಕ್ಕ ವೈಜ್ಞಾನಿಕ ಅನ್ವೇಷಣೆಗಳು ಅವಶ್ಯಕವೆಂದು ಭಾವಿಸಿ ವಿಜ್ಞಾನ & ತಂತ್ರಜ್ಞಾನದ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿ ಇಂದಿನ ವಿಜ್ಞಾನಿಗಳಿಗೆ ಆದರ್ಶವಾಗಿದ್ದಾರೆ.

**ಖಗೋಳಶಾಸ್ತ್ರ :–**



- ಪ್ರಾಚೀನ ಭಾರತದಲ್ಲಿ ಖಗೋಳಶಾಸ್ತ್ರ ಅದ್ಯಯನವು ಒಂದು ಪ್ರಮುಖ ಕ್ಷೇತ್ರವಾಗಿ ಬೆಳೆಯಿತು.
- ಗ್ರಹಗಳ ಸ್ಥಾನ, ಚಲನೆಯ ಬಗ್ಗೆ ಮೊದಲು ತಿಳಿಸಿದವರು ಆರ್ಯಭಟ. ಇವರ **'ಸೂರ್ಯ ಸಿದ್ಧಾಂತ'**, **'ಆರ್ಯಭಟೀಯಂ'** ಪ್ರಸಿದ್ಧ ಗ್ರಂಥಗಳು **'ಸೂರ್ಯಸಿದ್ಧಾಂತ'** ರಲ್ಲಿ ಭೂಮಿ ದುಂಡಗಿದ್ದು,

ಸೂರ್ಯನ ಸುತ್ತ ತನ್ನ ಅಕ್ಷದಲ್ಲಿ ತಿರುಗುತ್ತದೆ ಎಂದರು.

- ವರಾಹಮಿಹಿರನ **'ಪಂಚ ಸಿದ್ಧಾಂತವು', 'ಖಗೋಳಶಾಸ್ತ್ರ ಬೈಬಲ್'** ಎಂದೆ ಪ್ರಖ್ಯಾತವಾಗಿದ್ದು. ಇದರಲ್ಲಿ ಚಂದ್ರ ಭೂಮಿಯ ಸುತ್ತ ತಿರುಗುವನೆಂದು ಪ್ರತಿಪಾದಿಸಿದ್ದಾರೆ.
- ಆರ್ಯಭಟನು ಭೂಮಿಯ ಪ್ರದಕ್ಷಿಣಾ ಅವಧಿ 23 ಗಂಟೆ 36 ನಿಮಿಷ 4.1 ಸೆಕೆಂಡ ಎಂದು ಅಂದಿನ ಕಾಲದಲ್ಲಿ ತಿಳಿಸಿದನು
- ಆರ್ಯಭಟನು ಚಂದ್ರಗ್ರಹಣ, ಸೂರ್ಯಗ್ರಹಣಕ್ಕೆ ಕಾರಣ ನೀಡಿದನು.

**ಗಣಿತಶಾಸ್ತ್ರ:–**

- **'ಹರಪ್ಪಾದ ನಗರ ನಾಗರಿಕತೆಯು'** ಅಂದಿನ ಜನರು ಆಡಳಿತ ರೇಖಾಗಣಿತದ ಬಗ್ಗೆ ಉತ್ತಮ ಜ್ಞಾನ ಹೊಂದಿದ್ದರು ಎಂಬುದನ್ನು ಸೂಚಿಸುತ್ತದೆ.
- ಕ್ರಿ.ಶ ೩ ನೇ ಶತಮಾನದಿಂದೀಚೆ ಗಣಿತ ಶಾಸ್ತ್ರವು ಒಂದು ಪ್ರಮುಖ ಅಧ್ಯಯನ ಕೇಂದ್ರವಾಗಿ ಬೇಳೆದಿದೆ.
- ಭಾರತೀಯ ಗಣಿತ ಶಾಸ್ತ್ರವು **'ಸೂಲ್ವ ಸೂತ್ರ'** ಗಳಿಂದ ಉದಯವಾಗಿದೆ ಎನ್ನಲಾಗಿದೆ.
- **'ಸಾಂಕೇತಿಕ ಪದ್ಧತಿ', 'ದಶಮಾನ ಪದ್ಧತಿ', 'ಸೊನ್ನೆ'** ಈ ಕಾಲದ ಪ್ರಮುಖ ಅನ್ವೇಷನೆಗಳು
- ಕ್ರಿ. ಪೂ 2 ನೇ ಶತಮಾನದಲ್ಲಿ ಬ್ರಹ್ಮಗುಪ್ತನ **'ಬ್ರಹ್ಮಸ್ಪುತ ಸಿದ್ಧಾಂತ'** ದಲ್ಲಿ ಮೊದಲ ಬಾರಿಗೆ ಸೊನ್ನೆಯ ಉಲ್ಲೇಖವಾಗಿದ್ದು, ಜಾಗತಿಕ ಮಟ್ಟದ ಗಣಿತಶಾಸ್ತ್ರಕ್ಕೆ ಇದೊಂದು ಬಹುದೊಡ್ಡ ಕೊಡುಗೆಯಾಗಿದೆ.
- ಆರ್ಯಭಟನ ಬೀಜ ಗಣಿತವು ಆಧುನಿಕ ಜಗತ್ತಿನಲ್ಲಿ ಪ್ರತ್ಯೇಕ ಶಾಖೆಯಾಗಿ ಹೋರಹೊಮ್ಮಿತು.
- ಪ್ರಸಿದ್ಧ ಪೈಥಾಗೊರಸ್ ಪ್ರಮೇಯ $a^2 + b^2 = c^2$ ನ್ನು ಭಾರತೀಯರು ವೇದಕಾಲದಲಿಯೆ ಬಳಸಿರುವುದು ಗಮನಾರ್ಹ.

**ಭೌತಶಾಸ್ತ್ರ:–**

- ಋಗ್ವೇದ ಕಾಲದಲ್ಲಿ **'ಬೆಳಕಿನ ವೇಗ', 'ಗ್ರಹಗಳ ಅಂಡಾಕಾರದ ಕಕ್ಷೆ'** ಯ ಬಗ್ಗೆ ಉಲ್ಲೇಖವಿದೆ.
- **'ಭಗವದ್ ಪುರಾಣದಲ್ಲಿ'** ಬೇರೊಂದು ಸೌರಮಂಡಲದ ಅಸ್ಥಿತ್ವವಿದ ಬಗ್ಗೆ ತಿಳಿಸಲಾಗಿದೆ.
- ಕ್ರಿ. ಪೂ. 7000 ರಲ್ಲಿ **ವಿಶ್ವರುಚಿಯ 'ಕಪ್ಪುರಂಧ್ರ'** ಗಳ ಬಗ್ಗೆ ತಿಳಿಸಿದ್ದಾರೆ.


- **‘ಮುಂಡಕೋಪನಿಷತ್’** ನಲ್ಲಿ **‘ಅಣುಶಕ್ತಿ’** ಯ ಬಗ್ಗೆ ಪ್ರಥಮ ಬಾರಿಗೆ ಉಲ್ಲೇಖಿಸಲಾಗಿದೆ.
- ಶ್ರೀಧರಾಚಾರ್ಯರು **ದ್ರವ್ಯದ ಸ್ಥಿತಿಸ್ಥಾಪಕತ್ವ** ಗುಣದ ಬಗ್ಗೆ ನಮೂದಿಸಿದ್ದಾರೆ.

**ರಸಾಯನಶಾಸ್ತ್ರ:–**

- ಕ್ರಿ. ಪೂ. 1500 ರಲ್ಲಿ ಹೆಚ್ಚು ಪ್ರಚಲಿತವಾದ ರಸಾಯನ ಶಾಸ್ತ್ರವು ಭಾರತದಲ್ಲಿ **‘ರಸವಿದ್ಯೆ’** ಎಂದು ಪ್ರಸಿದ್ಧವಾಗಿತ್ತು.
- ಚೀನಿ ಯಾತ್ರಿಕ ಇ–ತ್ಸಿಂಗ ಅವರ ಕೃತಿಯಿಂದ ೭ನೇ ಶತಮಾನದಲ್ಲಿಯೇ ಭಾರತಿಯರಿಗೆ **ಪೇಪರ್ ತಯಾರಿಕಾ** ಕೌಶಲ್ಯವಿತ್ತು ಎಂಬುದು ತಿಳಿಯುತ್ತದೆ.
- ಸಸ್ಯ ಉತ್ಪನ್ನಗಳಿಂದ ರಂಗು ತಯಾರಿಕಾ ವಿಧಾನವನ್ನು ತಿಳಿದಿದ್ದರು ಎಂಬುದು ‘ಅಥರ್ವಣವೇದ’ ದಿಂದ ತಿಳಿದು ಬರುತ್ತದೆ.
- ವರಾಹಮಿಹಿರನ **‘ಬೃಹತ್ ಸಂಹಿತೆ’** ಯಲ್ಲಿ ಕಾಂತಿವರ್ದಕ ಸುಗಂಧ ದ್ರವ್ಯಗಳ ಬಳಕೆಯ ಬಗ್ಗೆ ಉಲ್ಲೆಖವಿದೆ.
- ತಕ್ಷಶಿಲಾದ ಉತ್ಪನ್ನಗಳು & ಅಜಂತಾ ಗುಹೆಗಳಲ್ಲಿ ದೊರೆತಿರುವ ಆಧಾರಗಳಿಂದ ಇಂಕು ಬಳಕೆಯಲ್ಲಿ ಪ್ರಾಚೀನ ಭಾರತಿಯರ ಪ್ರೌಢಿಮೆ ಕಂಡು ಬರುತ್ತದೆ.
- ಮಧ್ಯಕಾಲೀನ ಯುಗದಲ್ಲಿ ಮೊಘಲರು ಗನ್–ಪೌಡರ ಬಳಸಿರುವುದು ರಸಾಯನಶಾಸ್ತ್ರದ ತೀಕ್ಷ್ಣ ಬೆಳವಣಿಗೆಯನ್ನು ಸೂಚಿಸುತ್ತದೆ.

**ಸಸ್ಯಶಾಸ್ತ್ರ:–**

- ಚರಕ ಸಂಹಿತೆ & ಸುಶ್ರೂತ ಸಂಹಿತೆಯ ಆಧಾರದ ಮೇಲೆ ‘ಜೀವ’ವನ್ನು ೨ ರೀತಿಯಾಗಿ ವರ್ಗಿಕರಸಿಲಾಗಿದೆ.




- ಸುಶ್ರೂತ ಸಂಹಿತೆಯ ಪ್ರಕಾರ ಸಸ್ಯಗಳ ೪ ಬಗೆಗಳು ಹೀಗಿವೆ

  ೧. **ವನಸ್ಪತಿ –** ಹೂ ಬಿಡದ ಮರ
  ೨. **ವೃಕ್ಷ –** ಹೂ & ಫಲ ಕೊಡುವ ಮರಗಳು
  ೩. **ಮೀರದ –** ಬಳ್ಳಿಗಳು
  ೪. **ಔಷಧಿ** – ಆಹಾರ & ಜೀವಸತ್ವ ನೀಡುವ ಸಸ್ಯಗಳು

- ಮಹಾಭಾರತದ **'ಶಾಂತಿಪರ್ವ'** ದಲ್ಲಿ ಸಸ್ಯಗಳು ಜೀವವನ್ನು ಹೊಂದಿದ್ದು, ಸುಖ–ದುಃಖಗಳನ್ನು ಅನುಭವಿಸುತ್ತದೆ. ತಮ್ಮ ಬೇರಿನ ಮೂಲಕ ನೀರಿನ್ನು ಹೀರಿಕೊಳ್ಳುತ್ತವೆ ಎಂಬುದನ್ನು ದೃಢಪಡಿಸಿವೆ. ತಮ್ಮ ಬೇರಿನ ಮೂಲಕ ನೀರನ್ನು ಹೀರಿಕೋಳ್ಳುತ್ತವೆ ಎಂಬುದನ್ನು ದೃಡಪಡಿಸಿವೆ.
- ವೃಕ್ಷಾಕುರ್ವೇದ, ಅಮರಕೋಶ, ಬೃಹತ್‌ಸಂಹಿತೆ, ಸಸ್ಯಶಾಸ್ತ್ರದಲ್ಲಿ ಪ್ರಮುಖ ಗ್ರಂಥಗಳು.

**ಪ್ರಾಣಿಶಾಸ್ತ್ರ:–**

- ಸುಶ್ರೂತ ಸಂಹಿತೆಯ ೨ನೇ ವಿಧವಾದ **'ಜಂಗಮ'**ದ ಭಾಗದಲ್ಲಿ 4 ರೀತಿಯ ಪ್ರಾಣಿಗಳನ್ನು ಗುರುತಿಸಲಾಗಿದೆ.

  ೧. **ಜರಾಯುಜ** – ಗರ್ಭದಿಂದ ಹುಟ್ಟು – ಮಾನವ

  ೨. **ಅಂಡಜ** – ಮೊಟ್ಟೆಯಿಂದ – ಕೋಳೀ


  ೩. **ಸ್ವೇದಜ–** ಬೆವರಿನಿಂದ – ಹೇನು

  ೪. **ಉದ್ಭಿಜ್ಜ –** ಸೀಳಿ ಹೊರಬರುವ ಪ್ರಾಣಿಗಳು –ಕಪ್ಪೆ

- ಸುಶ್ರೂತ ಸಂಹಿತೆಯಲ್ಲಿ 57 ಕ್ಕೂ ಅಧಿಕ ರೋಗ ನಿವಾರಕ ಸಾಮರ್ಥ್ಯವಿರುವ ಪ್ರಾಣಿಗಳನ್ನು ಗುರುತಿಸಿಲಾಗಿದೆ.

**ವೈದ್ಯಶಾಸ್ತ್ರ :–**

- ಕಾಯಿಲೆಗಳು, ಚಿಕಿತ್ಸೆ & ಔಷಧಿಗಳ ಬಗ್ಗೆ ಮೊದಲ ಬಾರಿಗೆ ಅಥರ್ವಣ ವೇದದಲ್ಲಿ ಉಲ್ಲೇಖಿಸಲಾಗಿದೆ.
- ಜ್ವರ, ಕೆಮ್ಮು, ಅತಿಸಾರ, ಕುಷ್ಟರೋಗಗಳನ್ನೋಳಗೊಂಡತೆ ಹಲವು ರೋಗಗಳನ್ನು ಗುರುತಿಸಲಾಗಿತ್ತು.



- ಕ್ರಿ. ಪೂ. 600 ರಲ್ಲಿ ಪ್ರಭುದ್ಧಕ್ಕೆ ಬಂದ ವೈದ್ಯಶಾಸ್ತ್ರವು, ತಕ್ಷಶಿಲಾ & ವಾರಣಾಸಿ ಯಲ್ಲಿ ಹೆಚ್ಚು ಪ್ರಚಲಿತವಾಯಿತು.
- **ಭಾರತೀಯ ವೈದ್ಯಶಾಸ್ತ್ರದ 'ವಿಶ್ವಕೋಶ' ವೆಂದೇ ಪ್ರಸಿದ್ಧವಾದ ಚರಕನ 'ಚರಕ ಸಂಹಿತೆ' & ಸುಶ್ರೂತನ 'ಸುಶ್ರೂತ ಸಂಹಿತೆ' ಯು ಭಾರತೀಯ ವೈದ್ಯಶಾಸ್ತ್ರದ ಪ್ರಮುಖ ಗ್ರಂಥಗಳಾಗಿವೆ.**
- ಸುಶ್ರೂತನು ಹಲವು ಬಗೆಯ **'ಶಸ್ತ್ರಚಿಕಿತ್ಸೆ'** ಗಳನ್ನು ಪರಿಚಯಿಸಿದನು.

- **‘ಆಯುರ್ವೇದದ ಪಿತಾಮಹ’ ದನ್ವಂತರಿಯು** ಆಯುರ್ವೇದ ನಿಘಂಟನ್ನುವೈದ್ಯಕೀಯ ಶಾಸ್ತ್ರಕ್ಕೆ ನೀಡಿದ್ದು ಇದರಲ್ಲಿ ಸಸ್ಯೋತ್ಪನ್ನಗಳಿಂದ ತಯಾರಿಸಿದ ಔಷಧಿಗಳಿಂದ ನೂರಾರು ಬಗೆಯ ಕಾಯಿಲೆಗಳಿಗೆ ಚಿಕಿತ್ಸೆಯನ್ನು ವಿವರಿಸಿದ್ದಾರೆ.
- **ವಾಗ್ಭಟನು** 8 ಅಧ್ಯಾಯದ ವೈದ್ಯಶಾಸ್ತ್ರದ ಗ್ರಂಥವಾದ **‘ಅಷ್ಟಾಂಗ ಸಂಗ್ರಹ’** ವನ್ನು ಬರೆದಿದ್ದಾನೆ.

**ವೈದ್ಯಕೀಯ ಶಾಸ್ತ್ರದಲ್ಲಿ ಶಸ್ತ್ರ ಚಿಕಿತ್ಸೆ:–**

- ಶಸ್ತ್ರ ಚಿಕಿತ್ಸೆಯನ್ನು ಪ್ರಥಮ ಬಾರಿಗೆ ವಿವರವಾಗಿ ಅಧ್ಯಯನ ಮಾಡಿದವನು ಸುಶ್ರೂತ (600 BC)
- ಸುಶ್ರೂತನಿಂದ ರಚಿತವಾದ **ಅಥರ್ವಣವೇದದ** ಭಾಗವಾಗಿರುವ ಸುಶ್ರೂತ ಸಂಹಿತೆ’ ಯ ಹಲವಾರು ಶಸ್ತ್ರಚಿಕಿತ್ಸೆಗಳ ವಿಧಾನ ಮತ್ತು ಕ್ರಮಗಳನ್ನು ಒಳಗೊಂಡಿದೆ.
- 1100 ಕ್ಕೂ ಅಧಿಕ ರೋಗಗಳು, 26 ತರಹದ ಜ್ವರ, 8 ತರಹ ಕಾಮಾಲೆ ರೋಗಗಳನ್ನು ಗುರುತಿಸಿ, ಮೃತದೇಹದಿಂದ ದೇಹ ಅಧ್ಯಯನ ಮಾಡಿದನು.

**ಮುಖ್ಯವಾದ ಶಸ್ತ್ರಚಿಕಿತ್ಸೆಗಳು:–**

1. **ಮೂಗನ್ನು ಸ್ವರೂಪಗೊಳಿಸುವ ಶಸ್ತ್ರಚಿಕಿತ್ಸೆ (RHINOPLASTY)**
   - ವೈದ್ಯಕೀಯ ಕ್ಷೇತ್ರದಲ್ಲಿ **‘ಮೂಗಿನ ಸ್ವರೂಪ ಶಸ್ತ್ರಚಿಕಿತ್ಸೆಯ’** ಮೂಲಕ **‘PLASTIC SURGERY’** ಯನ್ನು ಜಗತ್ತಿಗೆ ಪರಿಚಯಿಸಿದ ಖ್ಯಾತಿ ಸುಶ್ರೂತನಿಗೆ ಸಲ್ಲುತ್ತದೆ.



**ವಿಧಾನ:–**

- ಮೂಗಿನ ಪ್ರಮಾಣದ ಎಲೆಯನ್ನು ರೋಗಿಯ ಹಣೆ ಮೇಲೆ ಇಟ್ಟು ಎಲೆಯಷ್ಟೇ ಪ್ರಮಾಣದ ಚರ್ಮವನ್ನು ಕತ್ತರಿಸಿ ತೆಗೆಯಬೆಕು. ಈ ಚರ್ಮವನ್ನು ಅದೇಸಮಯದಲ್ಲಿ ಸರಿಯಾದ ಜಾಗದಲ್ಲಿ ಹೊಂದಿಸುವುದು.
- ಇದು **‘ಭಾರತೀಯ ರೈನೊಪ್ಲಾಸ್ಟೀ’** ಎಂದು ಪ್ರಸಿದ್ಧವಾಗಿದೆ.

**2. ಕರುಳಿನ ಶಸ್ತ್ರಚಿಕಿತ್ಸೆ:–**

- ರೋಗಿಯ ದೊಡ್ಡಕರುಳಿನಲ್ಲಿ ಮಲವಿಸರ್ಜನೆಗೆ ಅಡ್ಡಿಯಾಗಿ ಕರುಳು ಛಿದ್ರವಾಗುವ ಸಾದ್ಯತೆಗಳು ಹೆಚ್ಚಿರುತ್ತವೆ.

**ನಿವಾರಣೆ ವಿಧಾನ:–**

- ರೋಗಿಯನ್ನು ಬೆವರುವಿಕೆಗೆ ಒಳಪಡಿಸಿ, ನಾಭಿಯ ಕೆಳಗೆ ಉದರವನ್ನು ಒಂದು ಅಂಗುಲ ಸೀಳಿ, ಕರುಳನ್ನು ಹೊರತೆಗೆದು ಕಲ್ಲು, ಕೂದಲು, ಘನ ದ್ರವ ತ್ಯಾಜ್ಯಗಳ ಸಮೇತ ಮಲನಿವಾರಣೆ ಮಾಡಲಾಗುತ್ತದೆ. ನಂತರ ಜೇನುತುಪ್ಪದಿಂದ ಕರುಳನ್ನು ಸವರಿ, ಮತ್ತೆ ಮೂಲಸ್ಥಾನದಲ್ಲಿಟ್ಟು ಹೊಲೆಯಬೇಕು.

**3. ನೇತ್ರ ಶಸ್ತ್ರಚಿಕಿತ್ಸೆ:–**

- ಸುಶ್ರೂತನ್ನು ಕಣ್ಣಿನ ಪೊರೆಯನ್ನು ತೆಗೆಯುವ ವಿಧಾನ ಪರಿಚಯಿಸಿದರು.

**4. ಗರ್ಭಕೋಶ ಚಿಕಿತ್ಸೆ:–**

- ಗರ್ಭಕೋಶದಿಂದ ಭ್ರೂಣವನ್ನು ಹೊರತೆಗೆಯುವ ಮೂಲಕ ತುರ್ತು ಪರಿಸ್ಥಿತಿಯಲ್ಲಿ ತಾಯಿಯ ಜೀವ ಉಳಿಸಿವ ಶಸ್ತ್ರಚಿಕಿತ್ಸೆ.

**5. ಮೂತ್ರಕೊಶದ ಕಲ್ಲುಗಳ ನಿವಾರಣೆ:–**

- ಪುರುಷರಿಗಿಂತ ಸ್ತೀಯರಲ್ಲಿ ಚಿಕಿತ್ಸೆಯು ಸ್ವಲ್ಪ ಮಟ್ಟಿಗೆ ಕಠಿಣವಾಗಿದ್ದು ಮೂತ್ರಕೋಶದ ಬದಿಯಲ್ಲಿ ಗರ್ಭಕೋಶವಿರುವದರಿಂದ, ಅದಕ್ಕೆ ತಾಗದಂತೆ ಚಿಕಿತ್ಸೆ ಮಾಡಬೆಕು.

ಹಿಂಗೆ ನಮ್ಮ ಹಲವಾರು ಪ್ರಮುಖ ಶಸ್ತ್ರಚಿಕಿತ್ಸೆಗಳ ಮೂಲಕ ಕ್ರಿ. ಪೂ ೬ ನೇ ಶತಮಾನದಲ್ಲಿಯೇ ಜಗತ್ತಿಗೆ **'ಶಸ್ತ್ರಚಿಕಿತ್ಸೆ'** & ರೈನೊಪ್ಲಾಸ್ಟಿಯನ್ನು ಪರಿಚಯಿಸಿ, ವೈದ್ಯಕೀಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿರುವ ಕೀರ್ತಿ ಪ್ರಾಚೀನ ಭಾರತೀಯರಿಗೆ ಸಲ್ಲಬೇಕು.

**ವಾಸ್ತುಶಾಸ್ತ್ರ:–**

- ಪ್ರಾಚೀನ ಭಾರತದಲ್ಲಿ ಕಟ್ಟಡವೊಂದರ ಮೂದಲು ನಿರ್ಮಾಣ ಆಗಿದ್ದು ಕ್ರಿ.ಪೂ 7000 **'ಮೆಹ್ರಘರ್'**ನಲ್ಲಿ, ಪ್ರಭುದ್ಧವಾಗಿ ಬೆಳೆದದ್ದು ಕ್ರಿ. ಪೂ 2500 ರಲ್ಲಿ
- ಸಿಂದೂ ನಾಗರಿಕತೆಯ ಕಾಲದಲ್ಲಿ ವಾಸದ ಮನೆಗಳ ಆಕರ್ಷಕ ನಿರ್ಮಾಣದಲ್ಲಿ ಜನರು ಹೆಚ್ಚು ಆಸಕ್ತಿಯುಳ್ಳವಾಗಿದ್ದರು.
- ವೇದಗಳ ಕಾಲದಲ್ಲಿ ಅಥರ್ವಣ ವೇದವು **'ಶಾಲಾಸೂಕ್ತ"** ರಲ್ಲಿ ಶಾಶ್ವತ ಕಟ್ಟಡದ ಕುರಿತು ಸಾಕಷ್ಟು ತಿಳಿಸಿದೆ.

- ಸಿಂಧೂ ನಾಗರಿಕತೆಯಲ್ಲಿ ಕಟ್ಟಡಗಳ ಉದ್ದ: ಅಗಲ : ಎತ್ತರದ ಅನುಪಾತವು 4:2:2 ಆಗಿದ್ದು, ಅತ್ಯಂತ ದೀರ್ಘಾವಧಿ ಬಾಳಿಕೆ ಬರುವ **'ಬೇಯಿಸಿದ ಇಟ್ಟಿಗೆ'** ಗಳನ್ನು ಕಟ್ಟಡ ನಿರ್ಮಾಣಕ್ಕೆ ಬಳಸುತ್ತಿದ್ದರು. ಬ್ರಿಟಿಷರು ಮುಲ್ತಾನ–ಲಾಹೋರ್ ರೈಲು ಮಾರ್ಗಕ್ಕೆ ಈ ಇಟ್ಟಿಗೆಗಳನ್ನು ಬಳಸಿದ್ದು ಅಂದಿನ ನಾಗರಿಕತೆಯ ವಾಸ್ತುಶಿಲ್ಪದ ಉನ್ನತಿಯನ್ನು ತಿಳಿಸುತ್ತದೆ.

**ವಾಸ್ತುಶಾಸ್ತ್ರ**

**ದೇವಾಲಯ** | **ಸ್ತೂಪಗಳು** | **ಗುಹಾಲಯಗಳು** | **ನಗರ ಯೋಜನೆ**

**1. ದೇವ**

- ಗರ್ಭಗುಡಿಯ ಪ್ರಧಾನ ಮೂರ್ತಿಗೆ ಮೃಧುವಾದ ಕಪ್ಪು, ಗ[illegible] ಹಳದಿ ಬಣ್ಣದ ಶಿಲೆ ಬಳಸಬೇಕು.
- ದೇವಾಲಯದ ಆವರಣದಲ್ಲಿನ ಯಜ್ಞಸ್ತಂಬಕ್ಕೆ ಮರಳುಗಲ್ಲನ್ನು ಬಳಸಬೇಕು
- ಸಾಧ್ಯವಾದಷ್ಟು ಮಿಶ್ರಲೋಹಗಳ ವಿಗ್ರಹಗಳ ನಿರ್ಮಾಣಕ್ಕೆ ಉತ್ತೇಜನ.

**2. ಸ್ತೂಪಗಳು:–**



- **ಬುದ್ಧನ ಅವಶೇಷಗಳ** ಮೆಲೆ ನಿರ್ಮಾಣ
- ದುಂಡನೆಯ ತಳಹದಿಯನ್ನು ಹೊಂದಿದ್ದು, ವೃತ್ತಾಕಾರವಾಗಿ ಮೇಲೇರಿ, ನಡುವೆ ಛತ್ರಿಯಾಕಾರದ ಗುಮ್ಮಟ ಉದಾ: **ಸಾಂಚಿ, ಅಮರಾವತಿ,** ಇತ್ಯಾದಿ

**3. ಗುಹಾಲಯಗಳು:–**

- ಬಂಡೆಗಳನ್ನು ಕೊರೆದು ನಿರ್ಮಾಣವಾದ ಗುಹೆಗಳು
- ಇವುಗಳನ್ನು ಗೋಡೆಗಳನ್ನು ಪಾಲಿಷನಿಂದ ಮೆರಗುಗೊಳಸಿ ಪ್ರಾಚೀನರು ತಮ್ಮ ಕುಶಲತೆಯನ್ನು ಮೇರೆದಿದ್ದಾರೆ. ಉದಾ: **ಅಜಂತಾ, ಎಲಿಫೆಂಟಾ ಗುಹೆಗಳು.**

**4. ನಗರ ಯೋಜನೆ:–**

- ನಗರ ಯೋಜನೆಗೆ ಮುನ್ನ ನೀಲನಕ್ಷೆ ತಯಾರಿಸುವ ಸಂಪ್ರದಾಯವಿತ್ತು.

- ರಥಬೀದಿಗಳು 4 ದಂಡದಷ್ಟು ಅಗಲ & ರಸ್ತೆಯು ಇಕ್ಕೆಲಗಳಲ್ಲಿ ಇಳಿಜಾರಾಗಿದ್ದು ಮಗ್ಗುಲಲ್ಲಿ ನೀರು ಹರಿದು ಹೋಗುವ ವ್ಯವಸ್ಥೆ ಇತ್ತು.
- ನಗರ ರಚನೆಯು **'ಸ್ವಸ್ತಿಕ'** ವಿನ್ಯಾಸದಲ್ಲಿತ್ತು.
- ಗುಡ್ಡಗಾಡು ಪ್ರದೇಶಗಳಲ್ಲಿ ರಸ್ತೆ ನಿರ್ಮಾಣವಾಯಿತು.

**ಲೋಹಶಾಸ್ತ್ರ:-**

- ಸಿಂಧೂ ನಾಗರಿಕತೆಯ **ಹೊಳಪಿರುವ ಮಡಿಕೆಗಳು** & ತಾಮ್ರ ಹಾಗೂ ಹಿತ್ತಾಳೆಯ ಕಲಾಕೃತಿಗಳು ಪ್ರಾಚೀನ ಭಾರತೀಯ ಲೋಹಶಾಸ್ತ್ರದ ಪ್ರಭುದ್ದತೆಯನ್ನು ತೋರಿಸುತ್ತದೆ.
- ಪೂರ್ವದೇಶಗಳ ನಡುವಿನ ವಾಣಿಜ್ಯ ವಹಿವಾಟಿನಲ್ಲಿ ಭಾರತದ ಲೋಹಗಳ ಪ್ರಮಾಣ ಅಧಿಕವಾಗಿತ್ತು
- ಕ್ರಿ. ಶ 4 ನೇ ಶತಮಾನದಲ್ಲಿ ಮೌರ್ಯವಂಶದಿಂದ ನಿರ್ಮಾಣವಾದ **'ದೆಹಲಿಯ ಕಬ್ಬಿಣ ಸ್ತೂಪ'** ವು ಲೋಹಶಾಸ್ತ್ರದಲ್ಲಿ ಪ್ರಾಚೀನರ ಕುಶಲತೆಯನ್ನು ತೋರಿಸುತ್ತದೆ.
- ರಾಜಸ್ಥಾನದ ಉದಯಪುರದಲ್ಲಿ ದೊರೆತಿರುವ ಸತುವಿನ ತಯಾರಿಕಾ ಘಟಕಗಳ ಅವಶೇಷಗಳಿಂದ ಪ್ರಾಚೀನ ಭಾರತದಲ್ಲಿ, ಭಟ್ಟಿ ಇಳಿಸುವಿಕೆಯಿಂದ ಸತುವಿನ ತಯಾರಿಕೆಯಿತ್ತು ಎಂಬುದಕ್ಕೆ ಪುರಾವೆಯಿದೆ.
- ಮಹರ್ಷಿ ಭಾರದ್ವಾಜರ **'ಬೃಹದ್ ವಿಮಾನಶಾಸ್ತ್ರ'** ದಲ್ಲಿ ಶುದ್ಧ ಲೋಹಗಳ ಕರಗಿಸುವಿಕೆ & ವರಾಹಮಿಹಿರನ ಬೃಹತ್ ಸಂಹಿತೆಯ ಅಂಟುದ್ರವಗಳ ಬಗ್ಗೆಉಲ್ಲೇಖವಿದೆ.
- ಇಂದಿಗೂ ಅಳಿಸದ ಅಜಂತಾ ಗುಹೆಗಳ ಮೇಲಿನ ಚಿತ್ರಗಳಲ್ಲಿ ಬಳಸಲದ ಬಣ್ಣಗಳೂ ಸಹ ಲೋಹಶಾಸ್ತ್ರದ ಕುಶಲತೆಗೆ ಉದಾಹರಣೆಯಾಗಿವೆ.
- ಪ್ರಸಿದ್ಧವಾದ **ಡಮಾಸ್ಕಸ್ ಖಡ್ಗಗಳ** ತಂಯಾರಿಕೆಗೆ ಬಳಸಿದ್ಧ **"ವೂಟ್ಸ್ ಸ್ಟೀಲ್"** ಭಾರತದಿಂದ ರಪ್ತಾಗುತಿತ್ತು.

## ಕಲೆ (ಕರ್ನಾಟಕ ಹೊರತುಪಡಿಸಿ)

### 1. ಮೌರ್ಯ& ಗುಪ್ತರ ಕಾಲದ ಕಲೆ

**ಮೌರ್ಯರು:-** ಭಾರತೀಯ ಕಲಾ ಪರಂಪರೆಯಲ್ಲಿ ಮೌರ್ಯರ ಕಲೆಗೆ ಮಹತ್ವದ ಸ್ಥಾನವಿದೆ. ಕ್ರಿ ಪೂ ೪ ರಿಂದ ಕ್ರಿ.ಪೂ ೨ ರವರೆಗೆ ಮೌರ್ಯರ ಕಾಲದಲ್ಲಿ ಬೆಳೆದ ಕಲೆ ಇದಾಗಿದ್ದು, ನಿಜವಾದ ಭಾರತದ ಕಲೆಗೆ ನಾಂದಿಯಾಗಿದ್ದರು. ಮೌರ್ಯರ ಪೂರ್ವದಲ್ಲಿ ಮರದಿಂದ ಸ್ಮಾರಕ ನಿರ್ಮಾಣ ಮಾಡುತಿದ್ದರಿಂದ ಯಾವುದೆ ಸ್ಮಾರಕಗಳು ಇಂದಿನವರೆಗೂ ಜೀವಂತವಾಗಿರುದಿಲ್ಲ. **ಮರದ ಬದಲು ಕಲ್ಲಿನ ಸ್ಮಾರಕಕ್ಕೆ ನಾಂದಿ ಮಾಡಿದವರು ಸಾಮ್ರಾಟ ಅಶೋಕ**. ಮೌರ್ಯರ ಕಾಲದಲ್ಲಿ ಬೌದ್ಧ ಕಲೆಯು ಪ್ರಗತಿಯ ಔನ್ಯತ್ಯವನ್ನು ಪ್ರದರ್ಶಿಸಿತು.

**ಮೌರ್ಯರ ಕಾಲದ 4 ಬಗೆಯ ಕಲಾಸ್ಮಾರಕಗಳು:–**

1. **ಸ್ತೂಪಗಳು**
2. **ಸ್ತಂಭಗಳು**
3. **ಅರಮನೆಗಳು**
4. **ಗುಹೆಗಳು**

1. **ಸ್ತೂಪಗಳು**

- ಬುದ್ಧ ಮತ್ತು ಬುದ್ಧನ ಶಿಷ್ಯರ ಅವಶೇಷಗಳ ಮೇಲೆ ನಿರ್ಮಿಸಿರುವ ಸ್ಮಾರಕಗಳೆ ಸ್ತೂಪಗಳು.

**ಆಕಾರ:–**



- ದುಂಡನೆಯ ತಳಹದಿಯನ್ನು ಹೊಂದಿದ್ದು, ವೃತ್ತಾಕಾರವಾಗಿ ಮೇಲೇರಿ, ನಡುವೆ ಛತ್ರಿಯಾಕಾರದ ಗುಮ್ಮಟ
- ಇವುಗಳನ್ನು ಮರ ಇಟ್ಟಿಗೆ & ಕಲ್ಲುಗಳಿಂದ ನಿರ್ಮಿಸಲಾಗಿದೆ
- ಅಶೋಕನ ಕಾಲದಲ್ಲಿ 84,000 ಸ್ತೂಪಗಳು ನಿರ್ಮಾಣವಾಗಿದ್ದು ಸಾಂಚಿ& ಬಾಹರತ್ ಸ್ತೂಪಗಳ ಪ್ರಸಿದ್ಧ
- ಅಶೋಕನಿಂದ ನಿರ್ಮಿತವಾದ $77\frac{1}{2}$ ಅಡಿ ಎತ್ತರ& $121\frac{1}{2}$ ಸುತ್ತಳತೆಯ ಸಾಂಚಿ ಬೌದ್ಧ ಸ್ತೂಪವು ವಿಶ್ವಪ್ರಸಿದ್ಧ

**ಸ್ತಂಭಗಳು:–**

- ಸ್ತಂಭಗಳ ನಿರ್ಮಾಣವು **ಆಕಮೇನಿಯಾ ಸಾಮ್ರಾಜ್ಯದ** ಕಾಲದಿಂದಲೂ ಅಸ್ತಿತ್ವದಲ್ಲಿದಲ್ಲಿದ್ದು, ಮೌರ್ಯರ ಸ್ತಂಭಗಳು ಅಕಮೇನಿಯಾ ಸ್ತಂಭಗಳಿಗಿಂತ ಬಿನ್ನವಾಗಿವೆ.
- ಮೌರ್ಯ ಕಾಲದ ಸ್ತಂಭಗಳನ್ನು, ಬಂಡೆಗಳನ್ನು ಕತ್ತರಿಸಿ ನಿರ್ಮಿಸಿದ್ದರಿಂದ, ಇವು ಶಿಲ್ಪಿಯ ಕೌಶಲ್ಯತೆಯ ಪ್ರತೀಕವಾದರೆ, ಆಕಮೇನಿಯಾ ಸ್ತಂಭಗಳನ್ನು ಬಂಡೆಯ ಚೂರುಗಳಿಂದ ನಿರ್ಮಿಸಲಾಗುತಿತ್ತು.



- ಏಕಶಿಲೆಯಿಂದ ನಿರ್ಮಾಣ
- ಪ್ರತಿ ಸ್ತಂಬವು 40 ರಿಂದ 50 ಅಡಿ ಎತ್ತರ ಮತ್ತು 50 ಟನ್ ತೂಕ
- **ತಳಭಾಗ, ನಡುಭಾಗ & ಶಿರೋಭಾಗದಲ್ಲಿ ಆನೆ, ವೃಷಭ ಕುದುರೆ & ಸಿಂಹ ಪ್ರಾಣಿಗಳನ್ನು ಕೆತ್ತಲಾಗಿದೆ.**

**ಸಾರಾನಾಥ ಸ್ತಂಭ:–**

ಬುದ್ಧನು ಮೊದಲ ಪ್ರವಚನ ನೀಡಿದ ಸ್ಮರಣಾರ್ಥ ಅಶೋಕನು ನಿರ್ಮಿಸಿದ ಸಾರಾನಾಥ ಸ್ತಂಭವು ಅತ್ಯದ್ಭುತ ಕಲಾತ್ಮಕ ಸೃಷ್ಠಯಾಗಿದ್ದು ಭಾರತದ ರಾಷ್ಟ್ರೀಯ ಲಾಂಛನವಾಗಿದೆ.

**ಸಾರಾನಾಥ ಸ್ತಂಭದ 5 ಪ್ರಮುಖ ಘಟಕಗಳು**

- ಕಾಂಡಭಾಗ
- ತಲೆಕೆಳಗಾದ ಗಂಟೆಯಾಕಾರದ ಕಮಲ
- ಧರ್ಮಚಕ್ರದ ನಡುವೆ ಚಿತ್ರಿಸಿರುವ ಆನೆ, ವೃಷಭ, ಕುದುರೆ& ಸಿಂಹ
- ಬೋದಿಗೆ ಮೇಲೆ 4 ದಿಕ್ಕುಗಳಿಗೆ ಮುಖ ಮಾಡಿದ 4 ಸಿಂಹಗಳು.

**<u>ಅರಮನೆಗಳು:–</u>**

- ಪಾಟಲಿಪುತ್ರದಲ್ಲಿರುವ ಪರ್ಷಿಯನ್ ಮಾದರಿಯ ಚಂದ್ರಗುಪ್ತ ಮೌರ್ಯನ ಮನೆ 8 ಸಾಲು ಹಾಗೂ 80 ಕಂಬಗಳಿಂದ ನಿರ್ಮಿತವಾಗಿತ್ತು. ಆದರೆ ಇದು ಮರದಿಂದ ನಿರ್ಮಾಣವಾದ್ದರಿಂದ ನಶಿಸಿಹೋಯಿತು.
- **ಪಾಟಲಿಪುತ್ರದ ಅಶೊಕನ ಅರಮನೆಯು ಮಾನವ ನಿರ್ಮಿತ, ಆದರೆ ಫಾಹಿಯಾನ್ ಇದನ್ನು ದೇವನಿರ್ಮಿತ ಎಂದು ಹೊಗಳಿದ್ದಾನೆ.**

**ಗುಹಾಲಯಗಳು:–**



- ಜೈನ & ಬೌದ್ಧ ಸನ್ಯಾಸಿಗಳಿಗೆ ವಾಸಮಾಡಲು ಗಯಾ ಸಮಿಪ **ಬರಾಬರ್** & **ನಾಗಾರ್ಜುನ** ಗುಡ್ಡಗಳಲ್ಲಿ ನಿರ್ಮಾಣ. ಇದನ್ನು 'ವಿಹಾರ' ಗಳೆಂದೂ ಕರೆಯುತ್ತಾರೆ.
  - ಬರಾಬರ್‌ನಲ್ಲಿ 4 & ನಾಗಾರ್ಜುನದಲ್ಲಿ 3 ಗುಹೆ
  - **ಸುಧಾಮಗುಹೆ** & **ಲೋಮಷ ಗುಹೆ** ಪ್ರಸಿದ್ಧ
  - ಗೋಡೆಗಳು ಹೊಳಪು ಬರುವಂತೆ ಮೆರಗುಗೊಳಿಸಿ, ಪಾಲಿಷ ಮಾಡಿ ಶಿಲ್ಪಿಗಳು ತಮ್ಮ ಕುಶಲತೆ ಜಾನ್ಮೆಯನ್ನು ಮೆರೆದಿದ್ದಾರೆ.
- ಈ ಕಾರಣಗಳಿಂದ "ಅಶೊಕನ ಕಾಲದ ಕಲೆಯು ನಿಸ್ಸಂದೇಹವಾಗಿ ಶ್ರೇಷ್ಠತೆಯ ಮಟ್ಟವನ್ನು ತಲುಪಿತ್ತು" ಎಂದು ವಿ. ಎ ಸ್ಮಿತ್ ಬರೆದಿದ್ದಾರೆ.

**ಶಿಲ್ಪಕಲೆ:–**

- ಅಶೋಕ ಸ್ತಂಭಗಳು & ಅದರ ಸಿಂಹಶೀರ್ಷಿಕೆ, ಧರ್ಮಚಕ್ರ ಗಂಟೆಯಾಕಾರದ ಕಮಲ ಗೋಡೆಗಳ ಮೇಲಿನ ಯಕ್ಷ–ಯಕ್ಷಿಣಿಯರು ಅವರ ಶಿಲ್ಪಕಲೆಗೆ ಉತ್ತಮ ಸಾಕ್ಷಿಗಳಾಗಿವೆ
- ಉತ್ತರ ಪ್ರದೇಶದ ಯಕ್ಷ–ಪರ್ಕಮ್, ಮಧ್ಯಪ್ರದೇಶದ ಪವಾಯ, ಬಿಹಾರದ ಯಕ್ಷಿಣಿ ದಿದರ್ಗಂಜ್ ಪ್ರಸಿದ್ಧ.

**ಕುಂಬಾರಿಕೆ ( ಮಡಿಕೆ ತಯಾರಿಕೆ):–**

- Northen Black Polished ware (NBP) ಹೊಳಪಿರುವ ಕಪ್ಪುಬಣ್ಣದ ಮಡಿಕೆಗಳು ಮೌರ್ಯರ ಕಾಲದ ಪ್ರಸಿದ್ಧ ತಂತ್ರಜ್ಞಾನದಲ್ಲಿ ಒಂದು.
- ನುಣುಪಾದ ಮೆಕ್ಕಲು ಮಣ್ಣಿನಿಂದ ನಿರ್ಮಾಣ
- ಕಡುಕಪ್ಪು ಬಣ್ಣದಿಂದ ಬೂದಿ ಬಣ್ಣದವರೆಗೂವಿಧಗಳು.



**ಗುಪ್ತರ ಕಾಲದ ಕಲೆ:–**

ಶ್ರೀಗುಪ್ತನಿಂದ ರಚಿತವಾಗಿ 320 ದಿಂದ 550 AD ವರೆಗೆ ಭಾರತವನ್ನಾಳಿದ ಗುಪ್ತರು ಬಹುತೇಕ ಭಾರತವನ್ನು ತಮ್ಮ ವ್ಯಾಪ್ತಿಯಲ್ಲಿ ಹಿಡಿದಿಟ್ಟುಕೊಂಡು, ತಮ್ಮ ರಾಜ್ಯದಲ್ಲಿ ಶಾಂತಿ & ಸುವ್ಯವಸ್ಥೆಯನ್ನು ಸ್ಥಾಪಿಸಿ, ನಾಗರಿಕರಲ್ಲಿ ವೈಜ್ಞಾನಿಕ & ಸಾಂಸ್ಕೃತಿಕ ಸಂಶೋಧನೆಗಳಿಗೆ ನೆರವಾದರು.

ಕಲಾಪ್ರಿಯರಾದ ಗುಪ್ತರು, ಪ್ರಾಚೀನ ಭಾರತೀಯ ಭವ್ಯ ಸಂಸ್ಕೃತಿಯ ಪುನರ್ ಸ್ಥಾಪನೆಗೆ ನೆರವಾದರು ಅವರ ಪ್ರೋತ್ಸಾಹದಿಂದ ಕಲೆ ಸಾಹಿತ್ಯ ವಿಜ್ಞಾನ, ಚಿತ್ರಕಲೆ, ಮೂರ್ತಿಶಿಲ್ಪದಲ್ಲಿ ಅಧ್ಭುತ ಪ್ರಗತಿ ಕಂಡುಬಂದಿತು. ಆದ್ದರಿಂದಲೇ ಇವರ ಕಾಲವನ್ನು **ಭಾರತೀಯ ಇತಿಹಾಸದ ಸುವರ್ಣ ಯುಗ** ಎಂದು ಕರೆದಿದ್ದಾರೆ.

**ಗುಪ್ತರ ಕಲೆಯ ಪ್ರಮುಖ ಲಕ್ಷಣಗಳು:–**

- ಮೂಲತಃ ಬ್ರಾಹ್ಮಣ ಧರ್ಮವಾಗಿದ್ದರೂ ಜೈನ& ಬೌದ್ಧ ದರ್ಮಗಳಿಗೆ ಸಹಿಷ್ಣುವಾಗಿದ್ದರು.
- ಭಾರತೀಕರಣ – ವಿದೇಶಿ ಅಂಶಗಳಿಂದ ಹೊರತಾದ ಸಂಪೂರ್ಣ ಭಾರತೀಯ ಕಲಾ ನೈಪುಣ್ಯತೆ
- ಬಾಹ್ಯ ಆಡಂಬರದ ಬದಲು ಆದ್ಯಾತ್ಮಿಕ & ಧಾರ್ಮಿಕ ಭಾವನೆಗಳ ಪ್ರತಿಬಿಂಬನೆ
- ಗುಪ್ತರಕಲೆಯಲ್ಲಿ ಸಾಮರಸ್ಯ, ಸರಳತೆ, ನೈಜತೆ, ಸೌಂದರ್ಯ ಅಂಶಗಳು ಮೇಳೈಸಿವೆ.
- ಗುಹಾಲಯಗಳ ಜೊತೆಗೆ ದೇವಾಲಯಗಳ ನಿರ್ಮಾಣ
- ನಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣ
- ವಿಷ್ಣು ಭಕ್ತರು– ಉತ್ತರ ಮದ್ಯ ಭಾರತ
- ಶೈವ ಭಕ್ತರು– ದಕ್ಷಿಣ ಭಾರತ
- ಶಕ್ತಿ – ಬಂಗಾಳಿ & ಪೂರ್ವ ಭಾರತ

**ಗುಪ್ತರಕಾಲದ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳು**

- ವಿದೇಶ ಪ್ರಭಾವದಿಂದ ಮುಕ್ತ.
- ದೇವಾಲಯಗಳನ್ನು ಎತ್ತರದ ಜಗಲಿಯ ಮೇಲೆ ನಿರ್ಮಾಣ
- ಇಟ್ಟಿಗೆ ಬದಲು ಕಲ್ಲಿನ ಬಳಕೆ
- ದೇವತಾಮೂರ್ತಿಯುಳ್ಳ ಗರ್ಭಗುಡಿ & ಪ್ರದಕ್ಷಿಣೆ ಪಥದ ನಿರ್ಮಾಣ

- ದೇವಾಲಯದ ನಾಲ್ಕು ಮೂಲೆಗಳಲ್ಲಿ ಸುಂದರ ಕೆತ್ತನೆಗಳುಳ್ಳ ಕಂಬಗಳ ನಿರ್ಮಾಣ
- ಕಂಬಗಳನ್ನು ಸುಂದರವಾದ ಹೂಬಳ್ಳಿಗಳಿಂದ ಅಲಂಕಾರ
- ಚೌಕಾಕಾರದ ಸಭಾಂಗಣ

**ಗುಪ್ತರಕಾಲದ 3 ವಿವಿಧ ಸ್ಮಾರಕಗಳು**

1. ದೇವಾಲಯಗಳು
2. ಸ್ತೂಪಗಳು
3. ಗುಹಾಲಯಗಳು

**1. ದೇವಾಲಯಗಳು;-**

- ಗುಪ್ತರ ಶೈಲಿಯ **ಕುಶಾನ, ಮಥುರಾ, ಗಾಂಧಾರ** ಶೈಲಿಗಳಿಂದ ಪ್ರೇರಿತರಾಗಿ ದೇವಾಲಯದ ಮುಂದೆ **T ಆಕಾರದ ಬಾಗಿಲುಗಳು,** ಆಕರ್ಷಕ ಕೆನ್ನೆಗಲ್ಲುಗಳ ನಿರ್ಮಾಣ
- ಗುಪ್ತರ ಕಾಲದಿಂದ ದೇವಾಲಯಗಳಲ್ಲಿ ವಿಗ್ರಹಾರಾಧನೆ ರೂಢಿಗೆ ಬಂದಿತು



**ಇವರ ಕಾಲದ ಪ್ರಮುಖ ದೇವಾಲಯಗಳು.**

- ದೇವಘರ- ದಶಾವತಾರ ದೇವಾಲಯ
- ಭೀಟರಗಾಂ- ಇಟ್ಟಿಗೆ ದೇವಾಲಯ
- ನಲಂದ-ಬೌದ್ಧ ದೇವಾಲಯ
- ಸಾಂಚಿ-ಶಿವ ದೇವಾಲಯ

- ದೇವಾಲಯದ ಕುರಿತು ವರ್ಸಿಬ್ರೌನ್ ಹೇಳಿರುವಂತೆ "ಅಪೂರ್ವ ಮೂರ್ತಿಶಿಲ್ಪಗಳ ರಚನೆ, ಕುಸುರಿ ಕೆಲಸಗಳು& ಕ್ರಮಬದ್ಧ ರಚನೆಯಿಂದ ಅಸಾಧಾರಣವಾದುದು ಎಂದಿದ್ದಾರೆ.

**೨. ಸ್ತೂಪಗಳು:-**

- ಗುಪ್ತರು ಅನೇಕ ಸ್ತೂಪಗಳು, ವಿಹಾರಗಳು& ಚೈತ್ಯ ಗುಹೆಗಳನ್ನು ನಿರ್ಮಿಸಿದ್ದಾರೆ.
- ಗಯಾದ ಬೌದ್ದವಿಹಾರವು ವಾಸ್ತುಶಿಲ್ಪಕ್ಕೆ ಉತ್ತಮ ನಿದರ್ಶನ

- ನಳಂದ ಬೌದ್ಧಸ್ತೂಪವು 300 ಅಡಿ ಎತ್ತರವಿದ್ದು ಅದನ್ನು ನರಸಿಂಹ ಬಲಾದಿತ್ಯನು ನಿರ್ಮಿಸಿದನು.

**೩. ಗುಹಾಲಯಗಳು:–**

- ಅಜಂತಾದ 1, 2, 10, 16, 17 & 19 ನೇ ಗುಹೆಗಳು ಉದಯಗಿರಿಯ ಅಮೃತ ಗುಹಾಲಯಗಳು ಪ್ರಮುಖ ಗುಹೆಗಳು.

- **ಗುಪ್ತರ ಶಿಲ್ಪಕಲೆ:–**

  - **ಆದ್ಯಾತ್ಮ & ಭಾವನೆಗಳುಳ್ಳ ಮಾನವ ಪ್ರತಿಮೇಯ ನಿರ್ಮಾಣ ಇವರ ಅದ್ಭುತ ಕೌಶಲ್ಯತೆ.**
  - ಗುಪ್ತರು ಶಿಲ್ಪಕಲೆಗೆ ಶ್ರೇಷ್ಠ ಕೊಡುಗೆ ನೀಡಿದ್ದು 'ಗಾಂಧಾರ ಕಲೆಯು ಹಿನ್ನಡೆದು **'ಮಥುರಾ ಕಲೆ'ಯು ಪ್ರಾಮುಖ್ಯತೆಗೆ ಬಂದಿತು** ಸಂಪೂರ್ಣ ಭಾರತೀಯ ಹೃದಯದಿಂದ ತುಂಬಿದ ಶಿಲ್ಪಕಲೆಯಾಗಿತ್ತು.
  - ಕುಶಾನರ ಕಾಲದ ಬಾಹ್ಯ ಆಡಂಬರವನ್ನು ಕೈಬಿಟ್ಟು **'ಆದ್ಯಾತ್ಮಿಕತೆ'** ಗೆ ಪ್ರಾಶಸ್ತ್ಯ ಕೊಟ್ಟರು.
  - ಇವರ ಶಿಲ್ಪಕಲೆಯು ಮಾನವ ಸಂಬಂದಗಳಿಗೆ ಹೆಚ್ಚು ಮಹತ್ವ ಕೊಟ್ಟಿತು.

**<u>ಪ್ರಮುಖ ಬೌದ್ಧ ಶಿಲ್ಪಕಲೆಗಳು.</u>**

೧. ಸಾರಾನಾಥದಲ್ಲಿ ಪದ್ಮಾಸನದಲ್ಲಿ ಕುಳಿತ ಭಂಗಿಯ ಬುದ್ಧನ ವಿಗ್ರಹ

೨. ಮಥುರಾದ ನಿಂತ ಭಂಗಿಯ ಬುದ್ಧ & ಮಹಾವೀರನ ವಿಗ್ರಹ

**<u>ಪ್ರಮುಖ ಹಿಂದೂ ಶಿಲ್ಪಕಲೆಗಳು</u>**

೧. ದೆಹಲಿಯ ಮಹನ್ರೌಲಿಯ ಕಬ್ಬಿಣ ಸ್ತಂಭ

೨. ಮಥುರಾದ ವಿಷ್ಣುವಿಗ್ರಹ

೩. ಕಾಶಿಯ ಕಾರ್ತಿಕೇಯ ವಿಗ್ರಹ

**ಗುಪ್ತರ ಚಿತ್ರಕಲೆ:–**

- ಗುಪ್ತರ ಚಿತ್ರಕಲೆಯು **ಸರ್ವಧರ್ಮ ಸಮಾನತೆಯನ್ನು** ಮೂಲಭೂತ ಲಕ್ಷಣವಾಗಿ ಒಳಗೊಂಡಿತ್ತು.
- ಗುಪ್ತರ ಕಾಲದಲ್ಲಿ ರಚಿತವಾದ **"ವಿಮುಧರ್ಮೋತ್ತರ"** ಕೃತಿಯಲ್ಲಿ ಗುಪ್ತರ ಚಿತ್ರಕಲೆ, ಶೈಲಿಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ.

- ಗುಪ್ತರ ಚಿತ್ರಕಲೆಯು ಅರಮನೆ ದೃಶ್ಯಗಳು, ಯುದ್ಧ ದೃಶ್ಯಗಳು, ಬುದ್ಧ& ಬೋಧಿಸತ್ವರು ಹಾಗೂ ಜಾತಕ ಕಥೆಗಳಿಗೆ ಸಂಭಂದಿಸಿದೆ.
- ಅಜಂತಾ ಎಲ್ಲೊರಾ, ಬಾಘ್, ಸಿಲೋನ್ನಲ್ಲಿ ಇವರ ಚಿತ್ರಕಲೆಗಳನ್ನು ಕಾಣಬಹುದು.

**ಅಜಂತಾ:-**

- ಅಜಂತಾ ಗುಹೆಗಳ ಗೋಡೆಗಳು ಹಾಗೂ ಮೇಲ್ಛಾವಣಿ ಮೇಲೆ ಭಿತ್ತಿಚಿತ್ರಗಳನ್ನು ಬಿಡಿಸಲಾಗಿದೆ.
- ಕಿ. ಪೂ.2 ರಿಂದ ಕ್ರಿ.ಶ. 7 ನೇ ಶತಮಾನದ ನಡುವೆ ನಿರ್ಮಾಣವಾಗಿದ್ದು, ಇವು ಭಾರತದ ನೈಜಕಲೆಯ ಅತ್ಯುನ್ನತಿಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಅಜಂತಾವನ್ನು **'ಏಷ್ಯಾದ ಕಲೆಯ ತೊಟ್ಟಿಲು'** ಎಂದು ಕರೆಯುತ್ತಾರೆ.

**<u>ಅಜಂತಾದ ಪ್ರಮುಖ ಚಿತ್ರಕಲೆ ದೃಶ್ಯಗಳೆಂದರೆ:</u>**





- 1 ನೇ ಗುಹೆ- 2 ನೇ ಪುಲಕೇಶಿ ರಾಯಭಾರಿ ಖುಸ್ರೋವನ್ನು ಆಹ್ವಾನಿಸುತ್ತಿರುವ ದೃಶ್ಯ
- 2 ನೇ ಗುಹೆ- ಬುದ್ಧನ ಜೀವನ
- 10 ನೇ ಗುಹೆ ಬುದ್ಧನ ಜನನ & ಜಾತಕ ಕಥೆಗಳ ಚಿತ್ರಗಳು
- 16 ನೇ ಗುಹೆ - ಬುದ್ಧನು ಸುಜಾತಳಿಂದ ಭಿಕ್ಷಾನ್ನ ಪಡೆಯುತ್ತಿರುವ ಚಿತ್ರಗಳಿವೆ.
- 17 ನೇ ಗುಹೆ – ಯಶೋಧರಾ ರಾಹುಲನನ್ನು ಬುಧ್ಧನಿಗೆ ಅರ್ಪಿಸುತ್ತಿರುವ ತಾಯಿ & ಮಗು ಚಿತ್ರವು 'ಏಷ್ಯಾದಲ್ಲೇ ಅದ್ವಿತೀಯ ಚಿತ್ರ' ವಾಗಿದೆ.
- 19 ನೇ ಗುಹೆ- ಬುದ್ಧನು ಗುರುವಾಗಿ ಕಪಿಲವಸ್ತುವಿಗೆ ಹಿಂತಿರುಗುವ ಚಿತ್ರ ದೃಶ್ಯ
- ಅಜಂತಾ ಚಿತ್ರಕಲೆಗಳು ಸಂಪೂರ್ಣ ಭಾರತೀಯ ಜೀವನದ ಚಿತ್ರಣವನ್ನು ಬಿಂಬಿಸುತ್ತದೆ.

**ಅಜುರಾಹೋ ದೇವಾಲಯಗಳು:-**



- ಮಧ್ಯಪ್ರದೇಶದಲ್ಲಿ ಕ್ರಿ.ಶ 900 ರಿಂದ 1130 ರ ಒಳಗೆ ಚಾಂದೇಲ ಅರಸರಿಂದ ನಿರ್ಮಾಣವಾದ ಖಜುರಾಹೋ ದೇವಾಲಯಗಳು' ಮಧ್ಯಯುಗದ ಅತ್ಯುನ್ನತ ವಾಸ್ತುಶಿಲ್ಪಕ್ಕೆ ಜೀವಂತ ನಿದರ್ಶನಗಳಾಗಿವೆ
- 9 ಚದರ ಕಿ ಮಿ ವ್ಯಾಪ್ತಿಯಲ್ಲಿ 85

ಕ್ಕೂ ಅಧಿಕ ಹಿಂದೂ & ಜೈನ ದೇವಾಲಯಗಳ ಸಂಕೀರ್ಣವಿದ್ದು, ಪ್ರಸ್ತುತ 25 ದೇವಾಲಯಗಳು ಮಾತ್ರ ಉಳಿದಿವೆ.

- ಚರ್ಮಕಲೆ ಮತ್ತು ವಾಸ್ತುಶಿಲ್ಪದ ಅದ್ಭುತದಿಂದ **'ಖಜುರಾಹೋ'** ಚಾಂದೇಲರ ಧಾರ್ಮಿಕ & ಸಾಂಸ್ಕೃತಿಕ ರಾಜಧಾನಿಯಾಗಿತ್ತು. ಕಲಾಶ್ರೀಮಂತಿಕೆಯಿಂದ **'ವಿಶ್ವ ಪಾರಂಪರಿಕ ತಾಣ'**ವಾಗಿ ಗುರುತಿಸಿಕೋಂಡಿದೆ

**ಖಜುರಾಹೊ ದೇವಾಲಯಗಳ 3 ಘಟಕಗಳು**

1. ಮಹಾಮಂಟಪ (ಪ್ರವೇಶದ್ವಾರ)
2. ಮಂಟಪ (ಸಭಾಂಗಣ)
3. ಗರ್ಭಗೃಹ

- ನಾಗರ ಶೈಲಿಯಲ್ಲಿ ನಿರ್ಮಾಣ.

**ಖಜುರಾಹೋ ದೇವಾಲಯಗಳನ್ನು ೩ ಭಾಗಗಳಾಗಿ ವಿಂಗಡಿಸಲಾಗಿದೆ.**

**1**. ಪಶ್ಚಿಮ ದೇವಾಲಯ ಸಮುಚ್ಚಯ:–
   ಉದಾ:– ಲಕ್ಷಣ, ಮಾತಂಗೇಶ್ವರ

**2**. ಪೂರ್ವ ದೇವಾಲಯ ಸಮುಚ್ಚಯ:–
   ಉದಾ:– ಬ್ರಹ್ಮ, ವರುಣ, ಜವರಿ

**3**. ದಕ್ಷಿಣ ದೇವಾಲಯ ಸಮುಚ್ಚಯ:–
   ಉದಾ:– ಮಹಾದೇವ, ಚತುರ್ಭುಜ

- ಗೋಡೆಗಳ ಮೇಲೆ ಕೆತ್ತಿರುವ ದೇವ ದೇವತೆಗಳ ಚಿತ್ರಗಳು ಅಂದು ಆರಾಧನೆಯಲ್ಲಿನ ದೇವರುಗಳು ಯಕ್ಷ–ಯಕ್ಷಿಣಿಯರ ಸಂಪೂರ್ಣ ಚಿತ್ರಣವನ್ನು ನೀಡುತ್ತದೆ.
- ದೇವಾಲಯಗಳು ಆವರಣದಿಂದ ಸುತ್ತುವರೆಯಲ್ಪಟ್ಟಿದ್ದು, ಶಿಖರದ ಸುತ್ತ ಚಿಕ್ಕ ಶಿಖರಗಳನ್ನು ಅಳವಡಿಸಿದೆ.

- **ಒರಿಸ್ಸಾ ದೇವಾಲಯಗಳು:–**

**1**. **ಕೋನಾರ್ಕ ದೇವಾಲಯ:–**

- ಧಾರ್ಮಿಕತೆ & ಕಲಾ ನಿಪುಣತೆಯಿಂದ ಭಾರತೀಯ ದೇವಾಲಯಗಳ್ಳಿಯೆ ಅಗ್ರಸ್ಥಾನ ದಲ್ಲಿ ನಿಲ್ಲುವುದು. 13 ನೇಶತಮಾನದಲ್ಲಿ ಗಂಗರ ಅರಸ 1 ನೇ ನರಸಿಂಹದೇವ ನಿಂದ ನಿರ್ಮಿತವಾದ ಒರಿಸ್ಸಾದ ಪುರಿ ಜಿಲ್ಲೆಯ ಕೋನಾರ್ಕ ದೇವಾಲಯ, ರಥದ ಆಕಾರದಲ್ಲಿ ನಿರ್ಮಿತವಾಗಿದ್ದು 24 ಬೃಹತ್ ಚಕ್ರಗಳಿಂದ ನಿರ್ಮಿಸಲಾದ ಈದೇವಾಲಯವನ್ನು ಸೂರ್ಯನಿಗೆ ಅರ್ಪಿಸಲಾಗಿದೆ.



- ರಥದ ಮುಂಭಾಗದಲ್ಲಿ 7 ಕುದುರೆಗಳನ್ನು ದೇವಾಲಯದ 4 ಕಡೆಯಲ್ಲಿ 4 ಮಹದ್ವಾರಗಳಿವೆ.
- ಗರ್ಭಗುಡಿಯ ಮೇಲಿರುವ 3 ಸೂರ್ಯ ವಿಗ್ರಹಗಳಿದ್ದು ಅವುಗಳನ್ನು ಸೂರ್ಯೋದಯ, ಮದ್ಯಾಹ್ನ & ಸೂರ್ಯಾಸ್ತ ಕಾಲದಲ್ಲಿ ಅವುಗಳ ಮೆಲೆ ಸೂರ್ಯ ಕಿರಣಗಳು ಬೀಳುವಂತೆ ನಿರ್ಮಿಸಲಾಗಿದೆ.
- ಯೂರೊಪಿಯನ್ನ ನಾವಿಕರಿಗೆ ಈ ದೇವಾಲಯವು ಒಂದು ಹೆಗ್ಗುರುತು ಆಗಿದ್ದರಿಂದ ಇದನ್ನು **'ಬ್ಲಾಕ್ ಪಗೋಡ'** ಎಂದಿದ್ದಾರೆ

**ಭುವನೇಶ್ವರ:–**

- ಕ್ರಿ. ಶ 1000 ರಲ್ಲಿ ಭುವನೇಶ್ವರದ ಲಿಂಗರಾಜ ದೇವಾಲಯವನ್ನು **ಬಂಗಾಳದ ಪಾಲ ರಾಜನು** ನಿರ್ಮಿಸಿದನು.
- ಈ ದೇವಾಲಯದ ಗರ್ಭಗುಡಿಯ ಗೋಪುರವು **'ನಾಗರ ಶೈಲಿಯಲ್ಲಿ** 'ನಿರ್ಮಿತವಾಗಿದ್ದು **ಭಾರತದ ಅತ್ಯಂತ ಬೃಹತ್ ಗೋಪುರವಾಗಿದ್ದು** ದೇವಾಲಯವು ಭಾರತದ ಅತ್ಯಂತ ದೊಡ್ಡ ಹಾಗೂ ಸುಂದರ ದೇವಾಲಯಗಳಲ್ಲಿ ಒಂದಾಗಿದೆ.
- ದೇವಾಲಯವು $520 \times 465 \times 180$ ಅಡಿ ವಿಸ್ತೀರ್ಣದಲ್ಲಿ ನಿರ್ಮಿತವಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗ, ಪಾರ್ವತಿ, ಗಣೇಶ, ತ್ರಿಭುವನೇಶ್ವರ ವಿಗ್ರಹಗಳಿವೆ.
- ದೇವಾಲಯದ ಹೊರ ಗೊಡೆಯ ಮೇಲೆ ಹಿಂದೂ ದೇವತೆಗಳು, ಶಿವ ಪಾರ್ವತಿಯ ದೃಶ್ಯಗಳು, ಬೇಟೆಯ ದೃಶ್ಯಗಳು, ಕಾಮ ಪ್ರಚೋದಕವಾಗುವಂತಹ ದಂಪತಿಯ ದೃಶ್ಯಗಳನ್ನು ಕೆತ್ತಲಾಗಿದೆ.
- 8 ಕೈಗಳುಳ್ಳ **'ಕಪಾಲಿನಿ'** ಎಂದೆ ಕರೆಯಲಾಗುವ 'ಚಾಮುಂಡಿ ದೇವಿಯ ಕೆತ್ತನೆ ವಿಶೇಷ

**ಪುರಿಯ ಜಗನ್ನಾಥ ದೇವಾಲಯ:–**

- ಕ್ರಿ. ಶ 1030 ರಲ್ಲಿ **'ಗಂಗರಸ ನರಸಿಂಹದೇವ'**ನಿಂದ ನಿರ್ಮಾಣ
- $650 \times 630 \times 192$ ಅಡಿ ವಿಸ್ತೀರ್ಣ
- ವಿಷ್ಣು ದೇವಾಲಯವಾಗಿದ್ದು ಹಿಂದೂಗಳ ಪವಿತ್ರ

❖ **ಪಲ್ಲವ, ಚೋಳ ಹಾಗೂ ಪಾಂಡ್ಯರ ಕೊಡುಗೆಗಳು:–**

- ಪಲ್ಲವರು:– ಧಕ್ಷಿಣ ಭಾರತದ ಪ್ರಖ್ಯಾತ ವಾಸ್ತುಶಿಲ್ಪ ದ್ರಾವಿಡ ಶೈಲಿಯು ದ್ರಾವಿಡ ಶೈಲಿ ಪಲ್ಲವರ ಸಮಯದಲ್ಲಿ ಪ್ರಸಿದ್ದಿಗೆ ಬಂದಿತು.

**ದ್ರಾವಿಡ ಶೈಲಿಯು ಬೆಳೆದುಬಂದ 4 ಹಂತಗಳು**

**1. ಮಹೇಂದ್ರವರ್ಮನ ಶೈಲಿ ( ಕ್ರಿ.ಶ 600-625):-**

- ಗುಹಾಂತರ ದೇವಾಲಯಗಳ ನಿರ್ಮಾಣ
- ದೇವಾಲಯಗಳ ಬದಲಿಗೆ 'ಮಂಟಪ' ಶಬ್ದ ಗಳ ಬಳಕೆ
- ಯಾವುದೇ ವಿನೂತನ ದೇವಾಲಯಗಳ ಶೈಲಿ ಬೆಳೆಯಲಿಲ್ಲ



2. **ನರಸಿಂಹವರ್ಮನ ಶೈಲಿ ಅಥವಾ ಮಾಮಲ್ಲ ಶೈಲಿ:–**

- ಅಲಂಕಾರಿತ ಗುಹಾಂತರ ದೇವಾಲಯಗಳ ನಿರ್ಮಾಣ
- ಕಲ್ಲಿನ ರಥಗಳ ನಿರ್ಮಾಣ
- ಮಹಾಬಲಿಪುರದಲ್ಲಿ ಒಂದೇ ಗುಹೆಯಲ್ಲಿ 8 ರಥಗಳ ನಿರ್ಮಾಣ.
- ಧರ್ಮರಾಯ ರಥ ಅತೀ ದೊಡ್ಡದಾದರೆ ದ್ರೌಪದಿ ರಥ ಚಿಕ್ಕದಾಗಿದೆ.



3. **ರಾಜಸಿಂಹ ಶೈಲಿ**

- ರಚನಾತ್ಮಕ ದೇವಾಲಯಗಳ ವಿನ್ಯಾಸದಲ್ಲಿ ಉತ್ತಮ ಪ್ರಗತಿ, ಕಲ್ಲಿನಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ **'ಜಾಲಂಧ್ರ'** ಗಳ ವ್ಯವಸ್ಥೆ. ದೇವಾಲಯಗಳ ನಿರ್ಮಾಣಕ್ಕೆ ಕಲ್ಲು & ಗಾರೆ ಬಳಕೆ
- ಗರ್ಭಗುಡಿ, ಅಂತರಾಳ, ಸ್ತಂಭ ಮಂಟಪ & ಸಭಾಮಂಟಪಗಳ ಬೆಳವಣಿಗೆ
- ಗುಪ್ತರ ಕಾಲಕ್ಕಿಂತಲೂ ಸುಂದರವಾದ ಶಿಲ್ಪಕಲೆ
  ಉದಾ: – ಕಂಚಿಯ ಕೈಲಾಸನಾಥ ದೇವಾಲಯ



4. **ನಂದಿವರ್ಮನ ಶೈಲಿ:–**



- ದ್ರಾವಿಡ ಶೈಲಿಯ ಎಲ್ಲಾ ಲಕ್ಷಣಗಳನ್ನೂ ಒಳಗೊಂಡಿತ್ತು
- ಶಿಖರಗಳ ನಿರ್ಮಾಣದಲ್ಲಿ ಇದು ವ್ಯಕ್ತವಾಗಿದೆ.

. **ಚೋಳರ ಕಲೆ (10-11 ನೇ ಶತಮಾನ)**

- ದ್ರಾವಿಡ ಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು, ಈ ಶೈಲಿಯನ್ನು ಪೋಷಿಸಿ ಬೆಳೆಸಿದರು.
- ದೇವಾಲಯಗಳ ಆವರಣದಲ್ಲಿ ಮಹಾದ್ವಾರವನ್ನು ಹೊಂದಿದ ಎತ್ತರದ ಗೋಪುರಗಳ ರಚನೆ
- ಅರ್ಧಮಂಟಪ, ವಿಮಾನ, ಗರ್ಭಗುಡಿ, ಅಂತರಾಳ, ಸಭಾಮಂಟಪ ಮುಖ್ಯ ರಚನೆಗಳು
- **'ಕಲಶ'** ಗಳನ್ನು ಹೊಂದಿದ ಶಿಖರಗಳು.



- ಉದಾ:– ತಂಜಾವೂರಿನ **'ಬೃಹದೇಶ್ವರ'** & **ಗಂಗೈಕೊಂಡ ಚೋಳಪುರಂ** ನ ದೇವಾಲಯಗಳು
- ಇವರ ಕಾಲದಲ್ಲಿ ತಮಿಳು ಸಾಹಿತ್ಯ ವಿಫುಲವಾಗಿ ಬೆಳೆಯಿತು. ತಮಿಳು ಸಾಹಿತ್ಯದ **'ತ್ರಿರತ್ನ'ರಾದ** ಕಂಬನ್, ಒಟ್ಟುಕುಟ್ಟನ್ & ಪುಗಳೆಂದಿರು ಚೋಳರ ಆಶ್ರಯದಲ್ಲಿದ್ದರು.
- 5 ನೇ ವೇದನೇಂದು ಕರೆಯುವ ನಾಯನಾರ & ಆಳ್ವಾರರ ಬರಹಗಳಾದ **'ತಿರುಮಲೈ'** ರಚನೆ
- ಅದ್ವಿತಿಯ **'ನಟರಾಜ ವಿಗ್ರಹ'** ಇವರ ಕಾಲದ್ದು

೩. **ಪಾಂಡ್ಯರ ಕಲೆ:–**



- ಚಿಂದಂಬರಂನ ಶಿವಾಲಯ & ಶ್ರೀರಂಗಂನ ರಂಗನಾಥ ದೇವಾಲಯಗಳ ವಿಸ್ತರಣೆ ಹಾಗೂ ಇವುಗಳ ಗೊಪುರಗಳನ್ನು ಚಿನ್ನದ ತಗಡುಗಳಿಂದ ಅಲಂಕರಿಸಿದರು.
- **ಇವರ ವಾಸ್ತುಶಿಲ್ಪದ ವಿಶೇಷತೆಯಲ್ಲಿ ಬೃಹತ್ ಬಾಗಿಲ ಗೋಪುರಗಳು ಪ್ರಮುಖ**

- ಗೋಪುರಗಳಲ್ಲಿ & ದೇವಾಲಯದ ಸ್ತಂಬಗಳಲ್ಲಿ ಶಿಲ್ಪಕಲೆಯನ್ನು ಕಾಣಬಹುದು
- ಉದಾ:– ಮಧುರೈ ಮೀನಾಕ್ಷಿ ದೇವಾಲಯ

**ಮೊಘಲರ ವಾಸ್ತುಶಿಲ್ಪ**

ಪರ್ಶಿಯನ್ ಶೈಲಿಯನ್ನು ಅಳವಡಿಸಿಕೊಂಡಿದ್ದ ಮೊಘಲರ ವಾಸ್ತುಶಿಲ್ಪದ ಮೇಲೆ ಭಾರತೀಯ ಪ್ರಭಾವ ಉಂಟಾಗಿ 'ಇಂಡೋ–ಪರ್ಶಿಯನ್' ಅಥವಾ **'ಇಂಡೋ–ಸಾರ್ಸೆನಿಕ್'** ಶೈಲಿ ಪ್ರಸಿದ್ಧಿಯಾಯಿತು.

**'ಇಂಡೋ–ಸಾರ್ಸೆನಿಕ್' ಶೈಲಿಯ ಲಕ್ಷಣಗಳು:–**



1. ದುಂಡಾದ ಗುಮ್ಮಟಗಳು, ಎತ್ತರವಾದ ಮಿನಾರ್‌ಗಳು, ವಿಶಾಲವಾದ ಒಳಾಂಗಣ ನಿರ್ಮಾಣ
2. ಕಮಾನು & ಗುಮ್ಮಟಗಳ ನಿರ್ಮಾಣಕ್ಕೆ **'ಗಾರೆ'** ಬಳಕೆ
3. ಕಟ್ಟಡಗಳ ಮೇಲೆ ಮಾನವರ ಶಿಲ್ಪಗಳನ್ನು ನಿಲ್ಲಿಸಿದರು.
4. ಕಟ್ಟಡಗಳ ಮುಂದೆ ಈಜುಕೋಳ, ತೊಟಗಳ ನಿರ್ಮಾಣ
5. ಮೊಘಲರು ವ್ಯಕ್ತಿಗಳ ಸಮಾಧಿ & ಮಸೀದಿಯನ್ನು ನಿರ್ಮಿಸಿರುವುದು ವಿಶೇಷ
6. ಕೆಂಪು ಮರಳುಗಳಲ್ಲಿನ ಬಳಕೆ
7. ಹೂದೋಟಗಳನ್ನು **'ಚಾರ್‌ಬಾಗ್'** ಶೈಲಿಯಲ್ಲಿ ನಿರ್ಮಾಣ
8. **ಅರಬಿಸ್ಕೂ** ಶೈಲಿಯಲ್ಲಿ ಸೂಕ್ಷ್ಮಾಲಂಕಾರ

**ಕ್ಯಾಥಡ್ರಲ್ ವಾಸ್ತುಶಿಲ್ಪ**



**ಬಾಮ್ ಜೀಸಸ್:– ಹಳೆಯ ಗೋವಾ (1605)**

- ಸಂತ ಪ್ರಾನ್ಸಿಸ್ ಕ್ಸೇವಿಯರ್‌ನ ಅವಶೇಷಗಳನ್ನು ಹೊಂದಿದೆ
- **ವಿಶ್ವ ಪಾರಂಪರಿಕ** ಪಟ್ಟಿಯಲ್ಲಿ ಸೇರ್ಪಡೆ

- ಬಾಮ್ ಜೀಸಸ್ ಎಂದರೆ **ಒಳ್ಳೆಯ ಜೀಸಸ್** ಎಂದರ್ಥ
- **'ಬರೋಕಿ'** ವಾಸ್ತುಶಿಲ್ಪದಲ್ಲಿ ರಚನೆ
- ನೆಲಹಸಿನ ಅಮೃತಶಿಲೆಯಲ್ಲಿ ಸೆಂಟ್ ಪ್ರಾನ್ಸಿಸ್ನ ಜೀವನ ದೃಶ್ಯಗಳಿವೆ.

**ಸೇಂಟ್ ಪಾಲ್ಸ– ಕಲ್ಕತ್ತಾ (1850)**



- **ಪಾಶ್ಚಾತ್ಯ ಗೋಥಿಕ್** ಶೈಲಿಯಲ್ಲಿ ನಿರ್ಮಾಣ
- ನಿರ್ಮಾಣಕ್ಕೆ **ಸುಟ್ಟ ಇಟ್ಟಿಗೆಗಳ** ಬಳಕೆ
- ಪ್ರೊಟೆಸ್ಟಂಟ ಕ್ರಿಶ್ಚಿಯನ್ನರಿಗೆ ಪವಿತ್ರ ಯಾತ್ರಾಸ್ಥಳ

**ಸೇಂಟ್ ಥಾಮಸ್– ಚೆನ್ನೈ**



- ಜೀಸಸ್ ನ 12 ಶಿಷ್ಯರಲ್ಲಿ ಒಬ್ಬರಾದ ಸೇಂಟ್ ಥಾಮಸ್‌ನ ಸ್ಮಾರಕವಾಗಿ ನಿರ್ಮಾಣ
- ರೋಮನ್ ಕ್ಯಾಥೊಲಿಕ್ರ ಪವಿತ್ರ ಸ್ಥಳ
- **'ನವಗೋಥಿಕ್'** ಶೈಲಿಯಲ್ಲಿ ನಿರ್ಮಾಣ
- 2006 ರಲ್ಲಿ **'ರಾಷ್ಟ್ರೀಯ ಸ್ಮಾರಕ'**

**ಅಜಂತಾದ ತೈಲಚಿತ್ರಗಳು:–**



- ವರ್ಣಗಳನ್ನು ನೀರಿನಲ್ಲಿ ಮಿಶ್ರಣ ಮಾಡಿ, ಸೂಕ್ತ ಬಂದಕಗಳ ಸಹಾಯದಿಂದ ಚಿತ್ರಿಸಲಾಗುತಿತ್ತು.
- ಮೊದಲು ಕೆಂಪು ಅಥವಾ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ಚಿತ್ರಿಸಿ, ನಂತರ ಸುಣ್ಣವನ್ನು ಬಳೆಯಲಾಗುತಿತ್ತು.
- ಚಿತ್ರಕಲೆಯಲ್ಲಿ ಆಕಾರ ಕಾಣುವವರೆಗೂ, ಅದಕ್ಕೆ ಸುಣ್ಣದ ಮೆರಗು ಕೊಡಲಾಗುತಿತ್ತು. ನಂತರ ಕುಂಚದಿಂದ ಇನ್ನುಳಿದ ಕಲೆಯನ್ನು ಪೂರ್ಣಗೊಳಿಸಲಾಗುತಿತ್ತು.
- ಸಸ್ಯಗಳು, ಖನಿಜಗಳು ಮತ್ತು ಕೀಟಗಳಿಂದ ಬಣ್ಣಗಳನ್ನು ತೆಗೆಯಲಾಗುತಿತ್ತು.

❖ **ಮೊಘಲರ ಚಿತ್ರಕಲೆ:–**

- ಮೊಘಲರ ಚಿತ್ರಕಲೆಯ ಮೇಲೆ ಭಾರತೀಯ, ಪರ್ಶಿಯನ್& ಯುರೋಪಿಯನ್ ಶೈಲಿಯ ಪ್ರಭಾವ ಹೆಚ್ಚಿದೆ.

- ಹುಮಾಯೂನ್ ಭಾರತಕ್ಕೆ ಆಗಮಿಸಿದಾಗ, ತನಗೆ ಪ್ರಭಾವ ಬೀರಿದ ಸೈಯದ್ ಅಲಿ & ಅಬ್ದುಲ್ ಸಮದ್ ಎಂಬ ಅದ್ವಿತೀಯ ಚಿತ್ರಕಾರರನ್ನು ತಂದಿದ್ದನು. ಇವರ ಚಿತ್ರಕಲೆ ಪರ್ಶಿಯನ್ ಶೈಲಿಯದ್ದಾಗಿತ್ತು
- ಅರಮನೆಯ ಗೋಡೆಗಳ ಮೇಲೆ ಯುದ್ದ & ಬೇಟೆಯ ದೃಶ್ಯಗಳು, ಪ್ರಾಕೃತಿಕ ಅಂಶಗಳು, ಸ್ತ್ರೀಯರ ಚಿತ್ರಗಳನ್ನು ಚಿತ್ರಿಸಲಾಗಿತ್ತು

❖ **ಅಕ್ಬರನ ಚಿತ್ರಕಲೆ**

- ಇವನ ಕಾಲದಲ್ಲಿ **ಇಂಡೋ ಪರ್ಶಿಯನ್** ಚಿತ್ರಕಲೆಯ ಬೆಳವಣಿಗೆ.
- **ಚಿತ್ರಕಲೆಗಾಗಿ ಪ್ರತ್ಯೇಕ ಇಲಾಖೆ** ಸ್ಥಾಪನೆ
- ಆಸ್ಥಾನದಲ್ಲಿ ೧೭ ಚಿತ್ರಕಾರರಿದ್ದು, ಇವರಿಂದ **'ರಾಷ್ಟ್ರೀಯ ಚಿತ್ರಶಾಲೆ'** ಯ ಅಭಿವೃದ್ಧಿ
- ಪ್ರಸಿದ್ಧ ಚಿತ್ರಕಾರರು– ಅಬ್ದುಲ್ ಸಮರ್, ದಶ್ವಂತ್, ಬಸವಾನ್
- **ಮೂರು ಆಯಾಮದ (3D)** ಚಿತ್ರಗಳು ಇವನ ಕಾಲದಲ್ಲಿ ಪ್ರಸಿದ್ದಿಯಾದವು.

❖ **ಜಹಾಂಗೀರನ ಚಿತ್ರಕಲೆ:–**

- ಇವನ ಕಾಲದಲ್ಲಿ ಚಿತ್ರಕಲೆ ಉನ್ನತ ಮಟ್ಟಕ್ಕೇರಿತು ಆದ್ದರಿಂದ ಇವನ ಕಾಲವು ಚಿತ್ರಕಲೆಯ **'ಸುವರ್ಣ ಯುಗ'** ವಾಗಿತ್ತು.
- ಇವನು ಪ್ರಕೃತಿ ಪ್ರೇಮಿಯಾಗಿದ್ದರಿಂದ ಪಕ್ಷಿಗಳು, ನದಿಗಳು, ಪ್ರಾಣಿಗಳು, ಹೂವುಗಳ ಚಿತ್ರಕಲೆಯನ್ನು ಹೆಚ್ಚು ಮೆಚ್ಚುತಿದ್ದನು.
- ಇವನ **'ತುಜಕ್–ಇ–ಜಹಂಗೀರಿ'** ಗ್ರಂಥ ಚಿತ್ರಕಲೆಯ ಅಂಶವನ್ನು ಅತ್ಯುತ್ತಮವಾಗಿ ಚಿತ್ರಿಸಿದೆ
- ಪ್ರಸಿದ್ದ ಚಿತ್ರಕಾರರು – ಉಸ್ತಾದ್ ಮನ್ಸೂರ್, ಗೋವರ್ಧನ್ ತುಳಸಿ, ಅಬ್ದುಲ್ ಹಸನ್.

❖ ರಜಪೂತರ ಚಿತ್ರಕಲೆ:–

- 16 ನೇ ಶತಮಾನದಲ್ಲಿ ಪ್ರಸಿದ್ದಿಯಾಯಿತು
- ಮನುಷ್ಯರ ಚಿತ್ರಗಳಿಗಿಂತ, **ಪ್ರಾಕೃತಿಕ ಅಂಶಗಳ ಒಲವು** ಇವರ ಚಿತ್ರಕಲೆಯಲ್ಲಿ ಅಪಾರವಾಗಿದೆ. ಉದಾ:– ಹೂವುಗಳಿಂದ ತುಂಬಿದ ಕೊಳ, ನಲಿದಾಡುವ ಪ್ರಾಣಿಗಳು.
- 3 ಹಂತದ ಬೆಳವಣಿಗೆ

1. 1 ನೇ ಹಂತ – 16 ನೇ ಶತಮಾನ
   - ಸರಳವಾದ ಭಿತ್ತಿ ಚತ್ರಗಳ ಬೆಳವಣಿಗೆ.
2. 2 ನೇ ಹಂತ – 17 ನೇ ಶತಮಾನದ ಪೂರ್ವಾರ್ಧ
   - ನಿಜಜೀವನ & ಪೌರಾಣಿಕ ವಸ್ತುಗಳನ್ನೊಳಗೊಂಡ ಅತ್ಯಾಧುನಿಕ ಚಿತ್ರಕಲೆ
3. 3 ನೇ ಹಂತ – 17 ರಿಂದ 18 ನೇ ಶತಮಾನ)
   - ಸ್ತ್ರೀ ಸೊಬಗಿಗೆ ಮುಖ್ಯ ಪ್ರಾಶಸ್ತ್ಯ

- ಮೊಘಲರ ಪ್ರಭಾವ ಹೆಚ್ಚಾಗಿತ್ತು
- ಮನುಷ್ಯನ ಆಂಗಿಕ ಸೌಂದರ್ಯಕ್ಕೆ ಹೆಚ್ಚು ಒತ್ತು.
- ಮೇವಾರ, ಕಿಷನ್‌ಗಜ್, ಕಾಂಗ್ರಾ, ಜೈಪುರ, ಮಾರ್ವಾರ್, ಗುಲೇರ್, ಬುಂದಿ, ಬಿಕೇನೆರ್ ಚಿತ್ರಕಲೆಗಳು, ರಜಪೂತ ಶೈಲಿಯ ವಿಧಗಳು

- **ಶಾಸ್ತ್ರೀಯ ಸಂಗೀತ**

| ಕರ್ನಾಟಕ ಶಾಸ್ತ್ರೀಯ ಸಂಗೀತ | ಹಿಂದೂಸ್ತಾನಿ ಸಂಗೀತ |
|---|---|
| ➢ ಪುರಂದರದಾಸರು ಸ್ಥಾಪಕರು<br>➢ ಸಂಪೂರ್ಣ ದೇಶಿಯ ಶೈಲಿ<br>➢ 'ತಾಳ' ಆಧಾರದ ಮೇಲೆ ನಿಂತಿದೆ<br>➢ ಬದಲಾವಣೆಗೆ ಅವಕಾಶವಿಲ್ಲ<br>➢ ಆದ್ಯಾತ್ಮಿಕ ಸಂಗೀತ<br>➢ ಗರಣಗಳು ಇರುವುದಿಲ್ಲ<br>➢ ದಕ್ಷಿಣ ಭಾರತದಲ್ಲಿ ಪ್ರಚಲಿತ<br>➢ ಗಾಯನದ ಮೇಲೆ ಹೆಚ್ಚು ಗಮನ<br>➢ ಉಪಯೋಗಿಸುವ ವಾದ್ಯಗಳು– ವೀಣೆ, ಮೃದಂಗ, ಮ್ಯಾಂಡೋಲಿನ್. | ➢ ಅಮೀರ್ ಖುಸ್ರೋ ಸ್ಥಾಪಕ<br>➢ ಪರ್ಶಿಯನ್, ಅರೆಬಿಕ್ ಪ್ರಭಾವ<br>➢ 'ರಾಗ' ಆಧಾರ<br>➢ ಮಾರ್ಪಾಡುಗಳ ಸ್ವಾತಂತ್ರ್ಯವಿದೆ<br>➢ ಭಾವನಾತ್ಮಕ ಸಂಗೀತ<br>➢ ಗರಣಗಳು ಮುಖ್ಯವಾದವು<br>➢ ಪಶ್ಚಿಮ & ಉತ್ತರ ಭಾರತದಲ್ಲಿ ಪ್ರಚಲಿತ.<br>➢ ವಾದ್ಯಗಳ ಮೇಲೆ ಹೆಚ್ಚು ಗಮನ<br>➢ ತಬಲ, ಸಾರಂಗಿ, ಸಿತಾರ್ ಪ್ರಮುಖ ವಾಗ್ಯಗಳು |

❖ **ಶಾಸ್ತ್ರೀಯ ನೃತ್ಯಗಳು**

- ಭಾರತೀಯ ಶಾಸ್ತ್ರೀಯ ನೃತ್ಯಕ್ಕೆ ಭರತಮುನಿಯ **'ನಾಟ್ಯ ಶಾಸ್ತ್ರ'** ಮೂಲ
- **'ನಾಟ್ಯ ವೇದ'** ವನ್ನು 5 ನೇ ವೇದ ಎನ್ನುಲಾಗುತ್ತದೆ.
- ಅಸ್ತಿತ್ವದಲ್ಲಿರುವ 4 ವೇದಗಳಿಂದ ಒಂದೊಂದು ಅಂಶವನ್ನು ತೆಗೆದುಕೊಂಡು 'ನಾಟ್ಯವೇದ' ರಚನಯಾಯಿತು.

- **ಋಗ್ವೇದ – ಪದಗಳು**
- **ಯಜುರ್ವೇದ– ಅಭಿನಯ**
- **ನಾಮವೇದ –ಸಂಗೀತ**
- **ಅಥರ್ವಣ ವೇದ–ಭಾವನೆಗಳು**

❖ **ಸಂಗೀತಕ್ಕೆ ಮೊಘಲರ ಕೊಡುಗೆಗಳು**

- ಮೊಘಲರ ಚರ್ಕವತ್ರಿಗಳಲ್ಲಿ ಔರಂಗಜೆಬನನ್ನು ಬಿಟ್ಟು ಉಳಿದವರೆಲ್ಲರೂ ಸಂಗೀತ ಪ್ರಿಯರೂ, ಸಂಗೀತ ಪೋಷಕರಾಗಿದ್ದರು.

- ಇವರ ಕಾಲದಲ್ಲಿ ಸಂಗೀತವನ್ನು ಯಾವುದೇ ಸಾಂಕೇತಿಕ ವ್ಯವಸ್ಥೆ ಇಲ್ಲದೆ ಮೌಖಿಕವಾಗಿ ಹಾಡಲಾಗುತ್ತಿತ್ತು
- **'ಹಿಂದೂಸ್ಥಾನಿ ಸಂಗೀತದ ಪಿತಾಮಹ'** ಎಂದೇ ಖ್ಯಾತಿಯಾದ **ತಾನಸೇನ್**ನು ಈ ಕಾಲದ ಪ್ರಸಿದ್ಧ ಗಾಯಕ
- **'ಪ್ರಾಚೀನ ದ್ರುಪದ'** ಸಂಗೀತವು ಅಕ್ಬರನ ಕಾಲದಲ್ಲಿ ಅತ್ಯಂತ ಪ್ರಸಿದ್ಧಿ
- ಅಕ್ಬರ ಸ್ವತಃ ಸಂಗೀತಗಾರನಾಗಿದ್ದನು. ಶಾಸ್ತ್ರೀಯ ಸಂಗೀತಕ್ಕೆ ವಿಷೇಶ ಪ್ರೋತ್ಸಾಹ ನೀಡಿದನು. ಇವನ ಆಸ್ಥಾನದಲ್ಲಿ 36 ಪ್ರಸಿದ್ಧ ಸಂಗೀತಗಾರರಿದ್ದರು
- ಷಾಹಜಹಾನ್ ಕಾಲದಲ್ಲಿಯೂ ಸಂಗೀತಕ್ಕೆ ವಿಶೇಷ ಪ್ರೋತ್ಸಾಹ ಸಿಕ್ಕಿದ್ದು, ಜಗನ್ನಾಥ, ರಾಮ್ದಾಸ, ಸುಖಸೇನ್ ಇವನ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಸಂಗೀತಗಾರರು.

ಭಾರತೀಯ ಶಾಸ್ತ್ರೀಯ ನೃತ್ಯಗಳು

1. ಭರತನಾಟ್ಯ 2. ಕೂಚಿಪುಡಿ 3. ಕಥಕ್ಕಳಿ 4. ಮೋಹಿನಿಯಟ್ಟಂ 5. ಒಡಿಸ್ಸಿ 6. ಮಣಿಪುರಿ 7. ಕಥಕ್ 8. ಸಾಟ್ರಿಯಾ

1. **ಭರತನಾಟ್ಯ:–**



- ಭಾವ, ರಾಗ, ತಾಳ & ನಾಟ್ಯ ಪ್ರಧಾನ ಅಂಶಗಳು
- ದಕ್ಷಿಣ ಬಾರತದಲ್ಲಿ ಉಗಮ
- ದೇವದಾಸಿ ಸಂಪ್ರದಾಯದಿಂದ ಉಗಮ
- ಕರ್ನಾಟಕ ಸಂಗೀತಕ್ಕೆ ನೃತ್ಯ
- 'ತಾಂಡವ & ಲಾಸ್ಯ' 2 ಅಂಶಗಳನ್ನು ಒಳಗೊಂಡಿದೆ
- ಭಕ್ತಿಯ ಅಭಿವ್ಯಕ್ತಿ
- ಯಾಮಿನಿ ಕೃಷ್ಣಮೂರ್ತಿ, ಲೀಲಾ ಸ್ಯಾಮಸ್‌ನ್ ಮುಂತಾದವರು ಪ್ರಮುಖ ನೃತ್ಯಗಾರ್ತಿಯರು.

2. **ಕೂಚಿಪುಡಿ:–**



- ಆಂದ್ರಪ್ರದೇಶದಲ್ಲಿ ಉಗಮ
- ಪ್ರಾರಂಬಿಕ ಹಂತದಲ್ಲಿ **'ಭಾಗವತರು'** ಎನ್ನುವ ಪುರುಷರ ಗುಂಪಿನಿಂದ ಮಾಡುತಿದ್ದರು
- ಭರತನಾಟ್ಯದ ಜೊತೆ ಸಾಕಷ್ಟು ಹೋಲಿಕೆ
- ಕೃಷ್ಣನ ಜೀವನ & ಆತನ ಮೇಲಿರುವ ಭಕ್ತಿ

ವ್ಯಕ್ತಪಡಿಸಲು ಇರುವ ನೃತ್ಯ

- ನೃತ್ಯಗಾರ್ತಿಯರೆ ಗಾಯಕರಾಗಿರುತ್ತಾರೆ.
- ಇಂದ್ರಾಣಿ ರೆಹಮಾನ್, ಯಾಮಿನಿ ಕೃಷ್ಣಮೂರ್ತಿ ಪ್ರಸಿದ್ದ.

3. **ಕಥಕ್ಕಳಿ:–**

- ಕೇರಳದಲ್ಲಿ ಉಗಮ
- ಪೌರಾಣಿಕ ಕಥೆ ಪ್ರಧಾನ ಅಂಶ
- ಮುಖದ ಭಾವಗಳು ಮುಖ್ಯ
- ದೇವರು & ಅಸುರರ ನಡುವಿನ ಕಾಳಗದ ದೃಶ್ಯ
- ಕರ್ನಾಟಕ ಸಂಗೀತವನ್ನು ಒಳಗೊಂಡಿದ್ದು, ರಾತ್ರಿ ನೃತ್ಯ ಶುರುವಾದರೆ ಬೆಳಿಗ್ಗೆ ಮುಗಿಯುತ್ತದೆ.
- ಬಯಲಿನಲಿ ನಡೆಯುತ್ತದೆ
- ಮಾಧವನ್, ಮುರಳಿ ಪ್ರಸಿದ್ಧ ನೃತ್ಯಗಾರರು.



www.shutterstock.com · 386615851

. **ಕಥಕ್:–**

- ಕಥಕ್ ಇದರ ಅರ್ಥವು 'ಕಥೆ ಹೇಳುವವ' ಎಂದರ್ಥ
- ಉತ್ತರ ಭಾರತದಲ್ಲಿ ಉಗಮ
- ಮಹಾಕಾವ್ಯಗಳ ವಸ್ತು ವಿಷಯಗಳನ್ನು ಸಂಗೀತ ನೃತ್ಯಗಳ ಮೂಲಕ ಅಭಿವ್ಯಕ್ತಿಸುವ ಕಲೆ
- ಇಸ್ಲಾಂ ಸಂಸ್ಕೃತಿಯ ಪ್ರಭಾವ ಹೆಚ್ಚಿದೆ
- ಕಾಲ್ಚಳಕವು ವಿಶೇಷವಾಗಿದ್ದು, ನೃತ್ಯಗಾರರು & ತಬಲ ವಾದ್ಯದ ನಡುವಿನ ಸನ್ನಿವೇಷಗಳು ಮನೋಹರ
- ರಾಧಾ–ಕೃಷ್ಣ ಲೀಲೆಯ ಅಂಶಗಳು ಬಹುಪ್ರಧಾನವಾಗಿವೆ.



5. **ಮೋಹಿನಿಯಟ್ಟಂ:–**

- ಮಹಿಳೆಯರಿಂದ ಮಾತ್ರ ನೃತ್ಯ
- ಪ್ರೀತಿ & ಭಕ್ತಿ ಪ್ರಧಾನ ಅಂಶಗಳು
- ಭರತನಾಟ್ಯ & ಕಥಕ್ಕಳಿಯ ಪ್ರಭಾವ ಬೀರಿದೆ
- ಸರಳವಾದ ಉಡುಗೆ & ಸೌಂದರ್ಯ
- ಚಿನ್ನದ ಆಭರಣಗಳನ್ನು ಬಳಸಲಾಗುತ್ತದೆ.
- ಮಾಧವಿ ಅಮ್ಮ ಪ್ರಸಿದ್ಧ



6. ಒಡಿಸ್ಸಿ:–

- ಒರಿಸ್ಸಾದಲ್ಲಿ ಉಗಮ
- ಕಳಿಂಗ ಅರಸರಿಂದ ಆಶ್ರಯ
- ಜಯದೇವನ 'ಗೀತಗೋವಿಂದ' ದಿಂದ ಪ್ರೇರಣೆ ಪಡೆದು ದೇವಾಲಯ ಸಂಗೀತ ನೃತ್ಯವಾಗಿ ಮಾರ್ಪಟ್ಟಿದೆ
- 'ತ್ರಿಭಂಗಿ' ನೃತ್ಯ ಆಕರ್ಷಕವಾಗಿದೆ
- ಒಡಿಸ್ಸಿ ಸಂಗೀತ ಬಳಕೆ
- ರಾಧಾಕೃಷ್ಣರ ಪ್ರೇಮ, ದಶಾವತಾರ, ಜಗನ್ನಾಥನ ತತ್ವಶಾಸ್ತ್ರಗಳು ಪ್ರಧಾನ ಅಂಶಗಳು
- ಸೋನಲ್ ಮಾನಸಿಂಗ್ ಪ್ರಸಿದ್ಧ



. **ಮಣಿಪುರಿ:–**

- ಮಣಿಪುರದಲ್ಲಿ ಉಗಮ
- ಹಿಂದೂ ಮಹಾಕಾವ್ಯಗಳು & ಪುರಾಣಗಳು ಮುಖ್ಯ ವಿಷಯಗಳು
- ವೈಷ್ಣವ ಪಂಥದಿಂದ ಪ್ರಭಾವಕ್ಕೊಳಗಾಗಿದೆ.
- ಮುಖದ ಭಾವಗಳಿಗಿಂತ ಸೂಕ್ಷ್ಮವಾದ ಕಾಲ್ಚಳಕ ಮೇಲೆ ಹೆಚ್ಚು ಗಮನ
- ರವಿಂದ್ರನಾಥ್ ಠಾಗೋರರು ತಮ್ಮ 'ಶಾಂತಿ ನೀಕೆತನ'ದಲ್ಲಿ ಮಣಿಪುರಿಯನ್ನು ಪ್ರೋತ್ಸಾಹಿಸಿದರು
- ಜಾವೇಲಿ ಸಹೋದರರು& ರೀಟಾದೇವಿ ಪ್ರಮುಖ ಕಲಾವಿದರು



೮. ಸಾಟ್ರಿಯಾ:–

- ಅಸ್ಸಾಂ ನಲ್ಲಿ ಉಗಮ
- ಪುರುಷ ಸನ್ಯಾಸಿಗಳಿಂದ ದೈನಂದಿನ ಧಾರ್ಮಿಕ ಆಚರಣೆಯಾಗಿ ಪ್ರದರ್ಶನ
- ಸಂತ ಶಂಕರದೇವರಿಂದ ಪ್ರೋತ್ಸಾಹ
- ಭಕ್ತಿ ಗೀತೆಗಳ ಬಳಕೆ



❖ ತಾಂಡವ & ಲಾಸ್ಯ ಎರಡೂ ಅಂಶಗಳನ್ನು ಒಳಗೊಂಡಿರುತ್ತದೆ.

**ಭಾರತೀಯ ಜನಪದ ಕಲೆಗಳು:–**

1. **ಮಧುಬನಿ ಚಿತ್ರಕಲೆ**
   - **ಬಿಹಾರದ** ಮಿಥಿಲಾ ಪ್ರಾಂತ್ಯದಲ್ಲಿ ಉಗಮ
   - ಪ್ರಧಾನ ಅಂಶಗಳು– ಹಿಂದೂ ದೇವತೆಗಳು, ಪುರಾಣ, ವಿವಾಹ, ಹಬ್ಬ, ಶೃಂಗಾರದ ದೃಶ್ಯಗಳು
   - ಮಹಿಳೆಯರಿಂದ ಬರೆಯಲಾದ ಚಿತ್ರಕಲೆ
   - ಎರಡು ಆಯಾಮದ ಚಿತ್ರಕಲೆ ((2D)
   - ವಸ್ತುಗಳಿಗೆ ಬದಲಾಗಿ ಸಂಕೇತ ಬಳಕೆ
   - ಸೀತಾದೇವಿ ಪ್ರಸಿದ್ಧರು
2. **ಪಟ್ಟಚಿತ್ರ:–**
   - **ಒರಿಸ್ಸಾದ** ಸಾಂಪ್ರದಾಯಿಕ ಚಿತ್ರಕಲೆ
   - ಜಗನ್ನಾಥ, ವೈಷ್ಣವ ಪಂಥ & ಪುರಾಣಗಳ ಪ್ರಭಾವ ಇದೆ.
   - ನೈಸರ್ಗಿಕವಾಗಿ ದೊರಕುವ ಬಣ್ಣಗಳ ಬಳಕೆ.
   - **ಉದಯಗಿರಿ,** ಕೊನಾರ್ಕ ದೇವಾಲಯಗಳಲ್ಲಿ ಈ ಕಲೆ ಕಾಣಬಹುದು.
3. **ಕಲಾಂಕಾರಿ:–**
   - ಲೇಖನೀಯ ಬಳಕೆ
   - **ಮಚಲೀಪಟ್ಟಣ ಶೈಲಿ** & **ಶ್ರೀ ಕಾಳಹಸ್ತಿ ಶೈಲಿ** ಎಂಬ 2 ವಿಧಗಳು
   - ಮಚಲಿಪಟ್ಟಣ ಶೈಲಿಯ ಇಸ್ಲಾಮಿಕ್ ಸೌಂದರ್ಯದಿಂದ ಪ್ರಭಾವಿತವಾಗಿದೆ. ಮಾಗಿದ ಹಣ್ಣುಗಳನ್ನು ಬಣ್ಣಗಳಿಗೆ ಬಳಸಲಾಗುತ್ತದೆ.
   - ಶ್ರೀಕಾಳ ಹಸ್ತಿ ಶೈಲಿಯ ಹಿಂದೂ ಪುರಾಣಗಳಿಂದ ಪ್ರಭಾವಿತರಾಗಿದ್ದು ಹಸಿ ಹಣ್ಣುಗಳನ್ನು ಬಣ್ಣಗಳಿಗೆ ಬಳಕೆ
4. **ವಾರ್ಲಿ ಚಿತ್ರಕಲೆ:–**
   - **ಮಹಾರಾಷ್ಟ್ರದ** ಬುಡಕಟ್ಟು ಚಿತ್ರಕಲೆ
   - ಹೆಚ್ಚಾಗಿ ಕಲ್ಲು & ಬಂಡೆಗಳ ಮೇಲೆ ಬರೆಯಲಾಗುತಿತ್ತು ಹಸುವಿನ ಸಗಣಿ & ಭತ್ತದ ಹೊಟ್ಟನ್ನು ಬಳಸಾಲುತಿತ್ತು.
5. **ಮಂಜೂಷಾ ಚಿತ್ರಕಲೆ:–**
   - **ಬಿಹಾರದ ಬಾಗಲ್ಪುರ** ಪ್ರಾಂತ್ಯದಲ್ಲಿ ಉಗಮ
   - ಸರ್ಪಗಳು ಪ್ರಧಾನ ಅಂಶ
   - ಸೆಣಬು & ಕಾಗದವನ್ನು ಬಳಸಲಾಗುತಿತ್ತು

**ವಿದೇಶಗಳಲ್ಲಿ ಭಾರತೀಯ ಸಾಂಸ್ಕೃತಿಕ ವಿಸ್ತರಣೆ:–**

ಭಾರತದ ಸಾಂಸ್ಕೃತಿಕ ವಿಸ್ತರಣೇಯು, ಯಾವುದೇ ಕದನಗಳು, ಆಕ್ರಮಣಗಳಿಂದ ಆಗದೇ, ವಿದೇಶಿಯರು ಸ್ವಯಂ ಇಚ್ಚೆಯಿಂದ ಭಾರತದ ಧಾರ್ಮಿಕ& ಸಾಸ್ಕೃತಿಕ ಮೌಲ್ಯಗಳನ್ನು ಸ್ವಿಕರಿಸಿ ಹರಡಿರುವುದಾಗಿದೆ. ಪ್ರಪಂಚದ ಯಾವುದೇಇತರ ಧರ್ಮವು ಈರೀತಿಯ ಅಹಿಂಸೆಯಿಂದ ಸಾಂಸ್ಕೃತಿಕ ವಿಸ್ತರಣೆ ಮಾಡಿರುವುದಿಲ್ಲ.

ಪ್ರಾಚೀನ ಭಾರತೀಯರು ಬಹುಪುರಾತನ ಕಾಲದಿಂದಲೂ,ಯೂರೋಪ್, ಮಧ್ಯ,ಪಶ್ಚಿಮ, ಹಾಗೂ ಆಗ್ನೇಯ ಎಷ್ಯಾಗಳೊಂದಿಗೆ ಸಾಂಸ್ಕೃತಿಕ ಹಾಗೂ ವಾಣಿಜ್ಯ ಸಂಭದಗಳನ್ನು ಹೊಂದಿದ್ದರು. ಗ್ರೀಸ್,ರೋಮ್, ಈಜಿಪ್ಟ, ಇರಾನ್, ಇರಾಕ್, ಚೀನ, ಟಿಬೆಟ್, ಬರ್ಮಾ, ಸಿಲೋನ್, ಕಾಂಬೋಡಿಯಾ, ಮೊದಲಾದ ದೇಶಗಳೊಡನೆ ಭಾರತವು ಸಾಂಸ್ಕೃತಿಕ, ವ್ಯಾಪಾರ ಸಂಭಂದವನ್ನು ಹೋಂದಿತ್ತು.

ಹೀಗೆ ಎಷ್ಯಾದಲ್ಲಿ ಭಾರತೀಯ ಸಂಸ್ಕೃತಿ, ನಾಗರೀಕತೆ ಹಾಗೂ ವಸಾಹತು ವಿಸ್ತರಣೆ 'ಬೃಹತ್ ಭಾರತ' ಎಂದು ಕರೆಯುತ್ತಾರೆ.

- **ಬೃಹತ್ ಭಾರತದ ಸಾಂಸ್ಕೃತಿಕ ವಿಸ್ತರಣೆಗೆ ಕಾರಣಗಳೇನೆಂದರೆ:–**

1. ಸತ್ಯ, ಅಹಿಂಸೆ, ಸೊದರತ್ವಗಳಂತಹ ವಿಶಾಲ ಆದರ್ಶಗಳನ್ನು ಹೊತ್ತಿರುವ ಭಾರತದ ಸಂಸ್ಕೃತಿಗೆ ವಿಶ್ವಮಾನ್ಯತೆ ಇದ್ದು, ಈ ಆದರ್ಶಗಳಿಗೆ ಆಗ್ನೇಯ ಎಷ್ಯಾದ ಬುಡಕಟ್ಟು ಜನ ಆಕರ್ಷಿತರಾದರು.

2. ಗ್ರೀಸ್, ರೋಮ್ & ಏಷ್ಯಾದ ದೇಶಗಳೋಡನೆ ವ್ಯಾಪಾರ ಸಂಪರ್ಕ ಹೊಂದಿದ್ದ ಭಾರತೀಯ ವರ್ತಕರು ಅಲ್ಲ ನೆಲೆನಿಂತು ಭಾರತೀಯ ಸಂಸ್ಕೃತ ಪ್ರಚಾರ ಮಾಡಿದರು.

3. ವಿದೇಶಗಳ ಯಾತ್ರೆ ಕೈಗೊಂಡ ಮತಪ್ರಚಾರಕರು ಮತ್ತು ಬೌದ್ಧ ಭಿಕ್ಷುಗಳು ' ಸಾಂಸಕೃತಿಕ ರಾಯಭಾರಿಗಳಾಗಿ ಕೆಲಸ ಮಾಡಿದ್ದು.

4. ಅನ್ವೇಷಣಾ ಗುಣ ಹೋಂದಿದ್ದ ನಾವಿಕರಿಂದ

**<u>ಮದ್ಯಏಷ್ಯಾದಲ್ಲಿ ಭಾರತೀಯ ಸಂಸ್ಕೃತಿ ವಿಸ್ತರಣೆ</u>**

- ಕ್ರಿ.ಪೂ. 2 ನೇ ತಮಾನದಿಂದ ಭಾರತವು ಚೀನಾ, ಮಧ್ಯಏಷ್ಯಾ, ದೇಶಗಳೋಡನೆ ವಾಣಿಜ್ಯ ಸಂಪರ್ಕವನ್ನು ಹೊಂದಿತ್ತು.
- ಚೀನಾದಿಂದ ಪ್ರಾರಂಭವಾಗುವ **'ರೇಷ್ಮೆ ಮಾರ್ಗ'** ದೊಡನೆ ಭರತೀಯ ಭೂ ಮಾರ್ಗಗಳು ಸಂಪರ್ಕವನ್ನು ಹೊಂದಿ ಕ್ಯಾಸ್ಪಿಯನ್ ಸಮುದ್ರದವರೆಗೂ ಹಬ್ಬಿತ್ತು.
- ಇಂಡೊ ಗ್ರೀಕರು, ಪಲ್ಲವರು, ಯೂಚಿಗಳು, ಬ್ಯಾಕ್ಟ್ರಿಯಾ, ಎಲ್ಲರೂ ಹಿಂದೂ ಸಂಸ್ಕೃತಿಯಿಂದ ಪ್ರಭಾವಿತರಾದರು.
- ಬ್ಯಾಕ್ಟ್ರಿಯಾದ ಪ್ರಸಿದ್ಧ ದೊರೆ **'ಮಿನಾಂದರ'** ಭೌದ್ಧ ಧರ್ಮಕ್ಕೆ ಮತಾಂತರವಾಗಿ 'ಮಿಲಿಂದ ಪನ್ಹೊ ಎಂಬ ಪ್ರಸಿದ್ಧ ಗ್ರಂಥ ಬರೆದಿದ್ದಾನೆ.

- ಕ್ರಿ ಶ. 5 & 7 ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ **ಫಾಹಿಯಾನ್** & **ಹ್ಯೂಯೆನ್‌ತ್ಸಾಂಗ್** ಭಾರತೀಯ ಸಂಸ್ಕೃತಿ & ಬೌದ್ಧ ಧರ್ಮಗಳ ಮೇಲೆ ಗ್ರಂಥಗಳನ್ನು ಬರೆದು ಪ್ರಚಾರ ಮಾಡಿದರು.

**ಭಾರತ ಮತ್ತು ಅಫಘಾನಿಸ್ತಾನ:–**

- ಮೌರ್ಯ, ಕುಶಾನರ ಕಾಲದಲ್ಲಿ ಪ್ರಾರಂಭ
- ಬೌದ್ಧ ಧರ್ಮದ ಪ್ರಭಾವ ಹೆಚ್ಚು. ಇತ್ಯಾದಿ. ಸ್ತೂಪ ವಿಹಾರಗಳ ನಿರ್ಮಾಣ
- ಗಾಂಧಾರದಲ್ಲಿ ವಿನೂತನ **'ಗಾಂಧಾರ ಶಿಲ್ಪ' ಕಲೆಗೆ** ನಾಂದಿ

**ಭಾರತ& ಚೀನಾ:–**

- ಕ್ರಿ. ಪೂ 2 ನೇ ಶತಮಾನದಿಂದ ಭಾರತ & ಚೀನಾದ ನಡುವಿನ ವ್ಯಾಪಾರ ಮಾರ್ಗವು ಮದ್ಯ ಏಷ್ಯಾ, ಮತ್ತು ಬರ್ಮಾ ದೇಶಗಳ ಮೂಲಕ ಸ್ಥಾಪಿತವಾಯಿತು.
- ಕುಶಾನರ ಕನಿಷ್ಕ & ಬೌದ್ಧ ಧರ್ಮವು ಚೀನಾದ ಮೇಲೆ ಅಪಾರ ಪ್ರಭಾವ ಬೀರಿತು.
- ಕ್ರಿ.ಶ. 67 ರಲ್ಲಿ ಚೀನಿದೊರೆ **ಮಿಂಗ್** ನಿಂದ ಆಹ್ವಾನಿತರಾದ **ಕಶ್ಯಪ ಮಾತಂಗ** ಮತ್ತು **ಧರ್ಮರಕ್ಷಿತ** ಎಂಬ ಸನ್ಯಾಸಿಗಳಿಂದ, ಭಾರತ& ಚೀನಾ ನಡುವೆ ಪಂಡಿತರ ವಿನಿಮಯ ಹೆಚ್ಚಾಯಿತು.
- ಭಾರತದಿಂದ ಚೀನಾಕ್ಕೆ ತೆರಳಿ ಭಾರತೀಯ ಸಂಸ್ಕೃತ ಪ್ರಚಾರ ಮಾಡಿದವರಲ್ಲಿ ಬೋದಿದರ್ಮ ಪ್ರಮುಖವಾದವನು.ಇವರು **'ಯೋಗ'** ವನ್ನು ಪ್ರಚಾರ ಮಾಡಿ ಚೀನಿಯರಿಂದ ಪೂಜಿಸಲ್ಪಡುತ್ತಾರೆ.
- ಅನೇಕ ಸ್ತೂಪ, ವಿಹಾರ ಗುಹಾಲಯಗಳು ಚೀನಾದಲ್ಲಿ ನಿರ್ಮಾಣವಾದವು.

**ಭಾರತ & ಟಿಬೆಟ್:–**

- ಕ್ರಿ. ಶ 2 ನೇ ಶತಮಾನದಲ್ಲಿ ಬೌದ್ಧಧರ್ಮ **'ಟಿಬೆಟ್'** ನಲ್ಲಿ ಕಾಲಿಟ್ಟರು.
- ಟಿಬೆಟನ ರಾಜ ಸ್ರಾಂಗ್‌ಸ್ಸಾನ್ ಗಾಂಪೂನು ಬೌದ್ಧ ಮತಾವಲಂಬಿಯಾಗಿ ಟಿಬೆಟನಲ್ಲಿ ಭಾರತೀಯ ವರ್ಣಮಾಲೆ ಆಚರಣೆಗೆ ತಂದನು.
- ಪದ್ಮ ಸಂಭವ, ಶಾಂತಿ ರಕ್ಷಿತ ಎಂಬ ಬೌದ್ಧ ಸನ್ಯಾಸಿಗಳು ಬೌದ್ಧ ಸಂಘವನ್ನು ಸ್ಥಾಪಿಸಿದರು.
- ವಿದ್ಯಾರ್ಥಿಗಳಿಗೆ ವಿಕ್ರಮಶೀಲ & ನಲಂದಾ ವಿಶ್ವವಿದ್ಯಾಲಯಗಳು ಜ್ಞಾನಾರ್ಜನೆಯ ಕೆಂದ್ರಗಳಾಗಿದ್ದವು.
- **ಟಿಬೆಟ್ ನಲ್ಲಿ ಮಹಾಯಾನ ಸಂಘ ಜನಪ್ರೀಯವಾಯಿತು.**

**ಭಾರತ ಮತ್ತು ಕೋರಿಯಾ**

- ಕ್ರಿ ಶ 372 ರಲ್ಲಿ ಬೌದ್ಧದರ್ಮ ಕೊರಿಯಾದಲ್ಲಿ ಪ್ರಚಾರವಾಗಿ, ಕ್ರಿ ಶ 10 ನೇ ಶತಮಾನದ ವರೆಗೂ ಪ್ರಚಲಿತದಲ್ಲಿತ್ತು.
- **ಕೊರಿಯಾದಲ್ಲಿ 'ತ್ರಿರತ್ನ ಸಿದ್ಧಾಂತ'ವನ್ನು ಭೋದಿಸಲಾಗಿತ್ತು.**

**ಭಾರತ ಮತ್ತು ಜಪಾನ:–**

- ಇತಿಹಾಸದ ಆಧಾರಗಳ ಮೂಲಕ ಕ್ರಿ.ಶ. 522 ರಲ್ಲಿ ಕೊರಿಯಾ ಚಕ್ರವರ್ತಿಯು ಒಂದು ಬುದ್ಧನ ವಿಗ್ರಹ ಹಾಗೂ ಅನೇಕ ಬೌದ್ಧ ಗ್ರಂಥಗಳನ್ನು ಜಪಾನಿನ ರಾಜನಿಗೆ ನೀಡುವುದರ ಮೂಲಕ, ಜಪಾನಿನಲ್ಲಿ ಬೌದ್ಧ ದರ್ಮದ ವಿಸ್ತರಣೆಗೆ ನಾಂದಿಯಾಯಿತು.
- **'ಮಹಾಯಾನ'** ಬೌದ್ಧ ಪಂಥವು ಹೆಚ್ಚು ಪ್ರಚಾರವಾಗಿ, ಜಪಾನಿನ ರಾಜ ಶೊಟುಕು ಬೌದ್ಧ ಧರ್ಮವನ್ನು ತನ್ನ ರಾಜ್ಯಧರ್ಮವೆಂದು ಸಾರಿದನು.
- **'ಸಂಸ್ಕೃತ ಭಾಷೆಯನ್ನು ಪವಿತ್ರ ಭಾಷೆ'** ಎಂದು ಅಂಗೀಕರಿಸಿದರು. ಅನೇಕ ಬೌದ್ಧ ಗ್ರಂಥಗಳು ಮೂಲತಃ ಸಂಸ್ಕೃತ ಭಾಷೆಯಲ್ಲಿರುವುದರಿಂದ ಜಪಾನಿಯರಿಗೆ ಸಂಸ್ಕೃತ ಭಾಷೆ ಕಲಿಯುವ ಆಸಕ್ತಿ ಇಂದಿಗೂ ಹೆಚ್ಚಿದೆ.

**ಆಗ್ನೇಯ ಏಷ್ಯಾದಲ್ಲಿ ಭಾರತೀಯ ಸಾಂಸ್ಕೃತಿಕ ವಿಸ್ತರಣೆ:–**

- ಆಗ್ನೇಯ ಏಷ್ಯಾದ ದೇಶಗಳು ಮಸಾಲ ಪದಾರ್ಥಗಳು, ಖನಿಜಗಳು & ಲೋಹಗಳಿಂದ ಶ್ರೀಮಂತವಾದ್ಧರಿಂದ ಪ್ರಾಚೀನ ಭಾರತೀಯರು ಅವುಗಳನ್ನು ಸುವರ್ಣ ಭೂಮಿ ಎಂದು ಕರೆಯುತ್ತಿದ್ದರು.
- ಬರ್ಮಾ, ಶ್ರೀಲಂಕಾ,ಸುಮಾತ್ರ,ಜಾವ,ಮಲಯಾ,ಕಾಂಬೋಡಿಯಾ, ಚಂಡಾ, ಬೋರ್ನಿಯಾ ಆಗ್ನೇಯ ಏಷ್ಯಾ ರಾಷ್ಟ್ರಗಳಾಗಿವೆ.

**ಭಾರತ & ಬರ್ಮಾ**

- ಬುದ್ಧನ ಜೀವತಾವಧಿಯಲ್ಲೇ ಬರ್ಮಾದಲ್ಲಿ ಬೌದ್ಧ ದರ್ಮ ಪ್ರಚಾರವಾಗಿತ್ತು.
- ಪ್ರಾಚೀನ ಕಾಲದಲ್ಲಿ 'ಕಳಿಂಗ ರಾಜ್ಯದ ಮೂಲಕ ಬರ್ಮಾದೊಂದಿಗೆ ವಾಣಿಜ್ಯ ಸಂಪರ್ಕವಿತ್ತು.
- ಅಶೋಕನು ಬೌದ್ಧಧರ್ಮ ಪ್ರಚಾರಕ್ಕೆ ಮಹೇಂದ್ರ & ಸಂಘಯಾತ್ರೇಯನ್ನು ಬರ್ಮಾಕ್ಕೆ ಕಳುಹಿಸಿಸದನು.
- ಈ ಎಲ್ಲಾ ಕಾರಣಗಳಿಂದ ಹಿಂದೂಧರ್ಮ & ಸಂಸ್ಕೃತ ಬರ್ಮಾದಲ್ಲಿ ಇಂದಿಗೂ ಜೀವಂತವಾಗಿದೆ.

**ಭಾರತ & ಶ್ರೀಲಂಕಾ:–**

- ರಾಮನು ಸೀತೆಯನ್ನು ಲಂಕಾವನ್ನು ಆಕ್ರಮಿಸಿ, ರಾವಣನ ಸಂಹಾರ ಮಾಡಿದ ಕಾಲದಿಂದ ಭಾರತ & ಲಂಕಾದ ಸಂಭಂದ ಪ್ರಾರಂಭವಾಗಿ ಅಲ್ಲಿ ಆರ್ಯ ಸಂಸ್ಕೃತಿ ಪ್ರಾರಂಭವಾಯಿತು.
- ಅಶೊಕನ ಮಕ್ಕಳು ಶ್ರೀಲಂಕಾದಲ್ಲಿ ಬೌದ್ಧ ದರ್ಮಪ್ರಚಾರಕ್ಕೆ ಪ್ರಸಿದ್ಧ **'ಭೋದಿ ವೃಕ್ಷ'** ವನ್ನು ನೆಟ್ಟು ಬಹುಸಂಕ್ಯಾತರು ಬೌದ್ಧಧರ್ಮ ಸ್ವೀಕರಿಸಲು ಕಾರಣರಾದರು.
- **'ತ್ರಿಪಿಟಕಗಳು'– ಸಿಂಹಳಿಯ ಭಾಷೆಯಲ್ಲಿವೆ**
- ಪಲ್ಲವ ದೊರೆ ನರಸಿಂಹವರ್ಮನು, ಶ್ರೀಲಂಕಾದ ದೊರೆ ಮಾನವರ್ಮನ' ರಾಜ್ಯ ಸ್ಥಾಪನೆಗೆ ನರವಾಯ

**ಭಾರತ & ಕಾಂಬೊಡಿಯಾ:–**

- ಭಾರತದಿಂದ ಕಾಂಬೊಡಿಯಾ ಹೋಗಿ ನೆಲೆನಿಂತ ಕಂಬುಸ್ವಯಂಭು' ಎಂಬ ಶಿವಭಕ್ತನಿಂದ ಕಾಂಬೊಡಿಯಾ ರಾಜ್ಯ ಸ್ಥಾಪನೆಯಾಯಿತು.
- ಸಂಸ್ಕೃತ ಇವರ ರಾಜ್ಯಭಷೆಯಾಗಿತ್ತು.
- ರಾಜ್ಯದಲ್ಲಿ ಶೈವ, ವೈಷ್ಣವ, & ಬೌದ್ಧ ಮತಗಳಿದ್ದವು
- ಕಾಂಬೊಡಿಯಾದ ರಾಜಧಾನಿ **"ಅಂಕೂರವಾಟ್"** ಹಿಂದೂ ವಾಸ್ತುಶಿಲ್ಪದಿಂದ ಪ್ರೇರಿತವಾಗಿದ್ದು, ಇಲ್ಲನ ವಿಷ್ಣು ದೇವಾಲಯ ಪೂರ್ಣ ದ್ರಾವಿಡ ಶೈಲಯಲ್ಲಿದೆ.

**ಭಾರತ & ಬೋರ್ನಿಯಾ:–**

- ಸುಮಾತ್ರದ ಪೂರ್ವದ ನೆಲೆಸಿರುವ ದ್ವೀಪ
- 'ಬ್ರಾಹ್ಮಣ' ಧರ್ಮ ವಿಸ್ತರಿಸಿತ್ತು.

**ಭಾರತ & ಬಾಲಿ:–**

- ಬಾಲಿಯಲ್ಲಿ **'ಹಿಂದೂ ಧರ್ಮ'** ಕ್ರಿ ಶ 2 ನೇ ಶತಮಾನದಲ್ಲಿ ನೆಲೆಸಿದ್ದು, ಅಲ್ಲಿಯ ಜನ ಶಿವ, ವಿಷ್ಣು & ಬ್ರಹ್ಮರನ್ನು ಪೂಜಿಸುತಿದ್ದರು ಎಂದು ಕ್ರಿ. ಶ ೫ ನೇ ಶತಮಾನದಲ್ಲಿ ಭೆಟಿ ನೀಡಿದ್ದ ಫಾಹಿಯಾನ್ ತಿಳಿಸಿದ್ದಾನೆ.

**ಭಾರತ & ಚಂಪಾ**

- ಕ್ರಿ ಶ 2 ರಿಂದ 15 ನೇ ಶತಮಾನದವರೆಗೆ ಅನೇಕ ಹಿಂದೂ ರಾಜ ಸಂತತಿಗಳು ಆಳಿದವು.
- ಅನೇಕ ಹಿಂದೂ & ಬೌದ್ಧ ದೇವಾಲಯಗಳಿವೆ
- ಶೈವ ಪಂಥ ಪ್ರಸಿದ್ಧ ಪಂಥ

**ಪಶ್ಚಿಮ ಏಷ್ಯಾದಲ್ಲಿ ವಿಸ್ತರಣೆ:–**

**ಗ್ರೀಸ್ ರೋಮ್:–**

- ಪ್ರಾಚೀನ ಕಾಲದಲ್ಲಿ ಪಶ್ಚಿಮ ಏಷ್ಯಾದ ಜೊತೆಗೆ ನಡೆಯುತಿದ್ದ ವ್ಯಾಪಾರ ಸಂಪರ್ಕದಿಂದ ಭಾರತೀಯ ಜನರ ಜೀವನ & ಧಾರ್ಮಿಕ ದರ್ಶನವು ಪ್ರಸಿದ್ಧವಾಯಿತು.
- ಅಲೆಕ್ಸಾಂಡರ್ ದಾಳಿ ಮಾಡಿದಾಗ, ಅವನೊಂದಿಗೆ ಬಂದಿದ್ದ ಗ್ರೀಸ್ ವಿದ್ವಾಂಸರು ಭಾರತೀಯ ಸಂಸ್ಕೃತಿಗೆ ಮಾರುಹೋದರು.
- ಗ್ರೀಕ್ ವಿದ್ವಾಂಸರು ಅನೇಕ ಸಂಸ್ಕೃತ ಗ್ರಂತಗಳನ್ನು ಗ್ರೀಕ್ ಭಾಷೆಗೆ ಅನುವಾದ ಮಾಡಿದರು ಅದರಲ್ಲಿ ಪ್ರಸಿದ್ಧವಾದುದು **'ಪಂಚತಂತ್ರ'.**

❖ **ಭಾರತೀಯ ಧರ್ಮಗಳು**

**1. ಹಿಂದೂ ಧರ್ಮ:–**

ಸಾಮಾನ್ಯ ಲಕ್ಷಣಗಳು & ಸಾಮಾನ್ಯ ನಂಬಿಕೆಗಳು

ಅತ್ಯಂತ ಪುರಾತನವದ ಹಿಂದೂ ಧರ್ಮವು, ವಿಶ್ವದಾದ್ಯಂತ ೧ ಬಿಲಿಯನ್ ಅನುಯಾಯಿಗಳನ್ನು ಹೊಂದಿದ್ದು, ಕ್ರಿಶ್ಚಿಯನ್ & ಇಸ್ಲಾಂ ನಂತರ ೩ ನೇ ದೊಡ್ಡ ಧರ್ಮವಾಗಿದೆ. ವ್ಯಕ್ತಿಯ ನಡೆ–ನುಡಿ, ಆಚಾರ –ವಿಚಾರ, ರೀತಿ–ನೀತಿಗಳ ಸಂಕೇತವೇ ಹಿಂದೂ ಪರಂಪರೆಯಾಗಿದ್ದರೆ. **'ಸಹೋದರತ್ವ'** & **ವಸುದೈವ ಕುಟುಂಬಕಂ'** ಹಿಂದೂ ಧರ್ಮದ ಮುಖ್ಯ ಧ್ಯೇಯಗಳಾಗಿದ್ದು. ಹಿಂದೂ ಸಂಸ್ಕೃತಿಯನ್ನು ವಿಶ್ವದೆಲ್ಲೆಡೆ ಪ್ರಸಾರ ಮಡುವುದೆ ಇದರ ಆಶಯವಾಗಿದೆ.

**ಸಾಮಾನ್ಯ ಲಕ್ಷಣಗಳು:–**

- ಹಿಂದೂ ಧರ್ಮಕ್ಕೆ ಯಾವುದೇ ಒಬ್ಬ ಧರ್ಮಸ್ಥಾಪಕ ಇರುವುದಿಲ್ಲ. ಆದರ್ಶಗಳ ಮೂಲಕ ಬೆಳೆದ ಧರ್ಮ
  - ಅತ್ಯಂತ ಪುರಾತನ
  - ಪರಧರ್ಮ ಸಹಿಷ್ಣುತೆ.
  - ಮೂರ್ತಿ ಆರಾಧನೆ
  - ಯಾವುದೇ ನಿರ್ಧಿಷ್ಟ ಪವಿತ್ರಗ್ರಂಥ ಇರುವುದಿಲ್ಲ
- ಭಾರತೀಯ ಜನಾಂಗವು ಮಂಗೋಲಿಯನ್, ಆಸ್ಟ್ರೇಲಿಯನ್, ದ್ರಾವಿಡಿಯನ್ ನಿಗ್ರೋ, ನಾರ್ಡಿಕ್ & ಮೆಡಿಟರೆನಿಯನ್ ಎಂಬ 6 ಜನಾಂಗಗಳ ಸಂಗಮವಾಗಿದೆ.

ಸಾಮಾನ್ಯ ನಂಬಿಕೆಗಳು:–

- ಧರ್ಮ
- ಪಾಪ ಪುಣ್ಯಗಳೆಂಬ ಕರ್ಮಗಳು
- ಮೋಕ್ಷ
- ಹಲವಾರು ಯೋಗಗಳ & ಆಚರಣೆಗಳು

ಹಿಂದೂ ಧಮದ ತತ್ವಗಳು :–

1. ದೇವರು ಇರುವನು ಪರಬ್ರಹ್ಮನನ್ನು ನಿರೂಪಿಸುವ **'ಓಂ'** ವರ್ಣ & **'ಶುಭ'** ಚವ ವನ್ನು ಸಂಕೇತಿಸುವ ಸ್ವಸ್ತಿಕ್ ಚಿಹ್ನೇಗಳನ್ನು ಒಳಗೊಂಡಿರುವ.
2. ಎಲ್ಲಾ ಮಾನವರು ದೈವಾಂಗ ಸಂಭೂತರು
3. ಪ್ರೀತಿಯಿಂದ ಪರರನ್ನು ಗೆಲ್ಲುವುದು
4. ಧಾರ್ಮಿಕ ಸಾಮರಸ್ಯ

5 ಗಂಗಾ (ಪವಿತ್ರ ನದಿ), ಭಗವದ್ಗೀತಾ (ಪವಿತ್ರ ಗ್ರಂಥ), ಗಾಯತ್ರಿ(ಪವಿತ್ರ ಮಂತ್ರ)

**ಹಿಂದೂ ಧರ್ಮ: ವಿವಿಧ ಪಂಥಗಳ ಒಕ್ಕೂಟ**

| ಶೈವ | ವೈಷ್ಣವ | ಶಾಕ್ತ | ಭಾಗವತ |
|---|---|---|---|
| ➢ **ಶಿವನೇ** ಸರ್ವೋಚ್ಛ ದೈವ<br>➢ ಚಿಹ್ನೆ –ಲಿಂಗ<br>➢ ಲಿಂಗವು ಅಜ್ಞಾನವನ್ನು ನಿವಾರಿಸಿ ಆತ್ಮವನ್ನು ಬೆಳಗಿಸುವ ಜ್ಯೋತಿ<br>➢ ಶೈವ, ಲಕುಲ, ಪಾಶುಪಥ, ಕಾಳಾಮುಖ, ಎಂಬ ೪ ಓಳ ಪಂಥಗಳಿವೆ | ➢ **ವಿಷ್ಣು** ಸರ್ವೋಚ್ಚ ದೈವ<br>➢ ದೇವತೆಗಳಲ್ಲಿ ವಿಷ್ಣುವೇ ಅಗ್ರಗಣ್ಯ, ಮಾನವ ಜನಾಂಗವನ್ನು ಕಾಪಾಡಲು ದಶಾವತಾರ ಎತ್ತಿದ ಎಂಬ ನಂಬಿಕೆ ಇದೆ ಉದಾ:– ಕೃಷ್ಣ, ರಾಮ<br>➢ ಈ ಪಂಥದವರು ತೀವ್ರ ಭಕ್ತಿಮಾರ್ಗವನ್ನು ಅನುಸರಿಸುತ್ತಾರೆ. | ➢ **ಶಕ್ತೀ** ಅಥವಾ ದೇವಿಯೇ ಸರ್ವೋಚ್ಛ ದೈವ<br>➢ ಹಲವಾರುದೇವಿ ರೂಪಗಳಿವೆ<br>➢ ಶಕ್ತಿಯು, ತಮಸ್, ರಜಸ್ & ಸಾತ್ವಿಕ ಎಂಬ ೩ ಗುಣಗಳನ್ನು ಹೊಂದಿದೆ | ➢ **ವೈಷ್ಣವ** ಪಂಥದ ಮತ್ತೊಂದು ರೂಪ<br>➢ ಸಾತ್ವಿಕ ಧರ್ಮ ಎಂದು ಪ್ರಸಿದ್ಧಿ<br>➢ ಏಕ ದೇವತಾರಾಧನೆ & ದೈವ ಸಾಕ್ಷಾತ್ಕಾರಕ್ಕೆ ಭಕ್ತಿ ಎನ್ನುವುದು ಇವರ ತತ್ವ<br>➢ ಕೃಷ್ಣನನ್ನು ದೇವರೆಂದು ಭಾವಿಸಿ ಪೂಜಿಸುತ್ತಾರೆ. |

❖ **ಜೈನ ಧರ್ಮ:–**

ಮಹಾವೀರನ ಭೋದನೆಗಳು

- ➢ ಜೈನ ಧರ್ಮದ ೩ ಪ್ರಮುಖ ತತ್ವಗಳು( ತ್ರೀರತ್ನಗಳು)

1. ಸಮ್ಯಕ್ ಜ್ಞಾನ
2. ಸಮ್ಯಕ್ ನಂಬಿಕೆ
3. ಸಮ್ಯಕ ಚಾರಿತ್ರ್ಯ

- ➢ ಪಂಚಶೀಲ ತತ್ವಗಳುಯ

1. ಸತ್ಯ 2. ಅಹಿಂಸೆ 3. ಆಸ್ತೇಯ 4. ಅಪರಿಗ್ರಹ ೫. ಬ್ರಹ್ಮಚರ್ಯ

- ➢ ಅಹಿಂಸೆ :– 'ಅಹಿಂಸಾ ಪರಮೋಧರ್ಮ' ವನ್ನು ಸ್ವೀಕರಿಸಿದರು.
- ➢ ಮಹಾವೀರನಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇರಲಿಲ್ಲ ಆದರೆ ಆತ್ಮದ ಆಸ್ತಿತ್ವದಲ್ಲಿ ನಂಬಿಕೆ ಇತ್ತು.
- ➢ ಜಾತಿ ಪದ್ದತಿ & ಪ್ರಾಣಿ ಬಲಿಯ ಖಂಡನೆ
- ➢ ನಿರ್ವಾಣಕ್ಕಾಗಿ ಸನ್ಯಾಸತ್ವ & ಕಠಿಣ ತಪಸ್ಸಿನ ಪ್ರತಿಪಾದನೆ

- ವೇಧಗಳು & ಬ್ರಾಹ್ಮಣ ಧರ್ಮಗಳು ಅಸಮಾನತೆ ಭೋದಿಸುವುದರಿಂದ ಅವುಗಳ ತಿರಸ್ಕಾರ
- ಸ್ತ್ರೀ ಸ್ವಾತಂತ್ರ್ಯ & ಸಮಾನತೆಗೆ ಒತ್ತು ಹಾಗೂ ಮಹಿಳೇಯೂ ಮೋಕ್ಷಗಳಿಸಲು ಅರ್ಹ ಎಂದರು.
- ಆತ್ಮವು ಕರ್ಮಭಂದನಕ್ಕೆ ಸಿಲುಕಿ ಪದೇ ಪದೇ ಜನ್ಮತಾಳುತ್ತದೆ ಎಂದರು.

❖ ಜೈನ ದರ್ಮದ ಪಂಥಗಳು

| ದಿಗಂಬರ | ಶ್ವೇತಾಂಬರ |
|---|---|
| ➢ ಬಟ್ಟೆ ಧರಿಸದೇ ನಗ್ನರಾಗಿರುತ್ತಾರೆ<br>➢ ಕಾಡುಗಳಲ್ಲಿ ಎಕಾಂಗಿಯಾಗಿ ಅಥವಾ ಸಣ್ಣ ಗುಂಪುಗಳಲ್ಲಿ ಬದುಕುತ್ತಾರೆ.<br>➢ ಮಹಾವೀರನ ಅನುಯಾಯಿಗಳು<br>➢ ಮಳೆಗಾಲದಲ್ಲಿ ಕೀಟಗಳಿಗೆ ಜೀವಹಾನಿಯಾಗಬಾರದೆಂದು ಒಂದೆ ಸ್ಥಳದಲ್ಲಿ ೩ ತಿಂಗಳು ವಾಸಿಸುತ್ತಾರೆ. | ➢ ಬಿಳಿ ಬಟ್ಟೆ ಧರಿಸುತ್ತಾರೆ<br>➢ ಸಮುದಾಯಗಳಲ್ಲಿ ಜೀವನ<br>➢ ಪಾರ್ಶ್ವನಾಥನ ಅನುಯಾಯಿಗಳು<br>➢ ಪುರುಷರು & ಮಹಿಳೆಯರು ಇಬ್ಬರೂ ಪಾಲಿಸುತ್ತಾರೆ |

❖ **ಬೌದ್ಧ ಧರ್ಮ**

ಅರಿವಿನದಾರಿ ಕಾಣದೆ ಜನರು ಕಂಗಾಲಾದಾಗ ಅಜ್ಞಾನದಿಂದ ಸುಜ್ಞಾನದ ಕಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ತೆಗೆದುಕೊಂಡು ಹೋಗಲು ಬೌದ್ಧ ಧರ್ಮದ ಉಗಮ ಭಾರತೀಯ ಸಮಾಜದ ಧಾರ್ಮಿಕ ಕಂದಾಚಾರಗಳು ಶೋಷಣೇ ಜಾತಿಯತೆ ಮೂಢನಂಬಿಕೆಗಳನ್ನು ನಿವಾರಿಸುವುದು ಈ ಧರ್ಮದ ಮುಖ್ಯ ಉದ್ದೇಶವಾಗಿತ್ತು

❖ 4 ಶ್ರೇಷ್ಠ ಸತ್ಯಗಳು

1. ಜೀವನವು ದುಃಖದಿಂದ ಕೂಡಿದೆ
2. ಆಸೇಯೆ ದುಃಖಕ್ಕೆ ಮೂಲ
3. ಆಸೆ ತೋರೆದರೆ ಮಾತ್ರ ದುಃಖದ ನಿವಾರಣೆ
4. ಆಸೆ ತೋರೆಯಲು ಸನ್ಯಾಸ ಮಾರ್ಗ ಅನುಸರಿಸಬೆಕು.

❖ ಅಷ್ಟಾಂಗ ಮಾರ್ಗ:–

- ಇದು ಒಳ್ಳೇಯ ನಂಬಿಕೆ ಒಳ್ಳೆಯ ಆಲೋಚನೆ, ಓಳ್ಳೆಯ ಪ್ರಯತ್ನ, ಒಳ್ಳೆಯ ವಿಚಾರ, ಉತ್ತಮ ದ್ಯಾನ ವನ್ನು ಒಳಗೊಂಡ ೮ ಮಾರ್ಗಗಳಿಂದ ಜೀವನದ ಕಷ್ಟ–ಕಾರ್ಪಣ್ಯಗಳಿಂದ ಮುಕ್ತರಾಗಿ ಮೋಕ್ಷ ಪಡೆಯಬಹುದು ಎಂದು ಹೇಳುತ್ತದೆ.

❖ ಭುದ್ದನ ಬೋದನೆಗಳು:–

- ➢ ಆತ್ಮಗಳ ಅಸ್ತಿತ್ವವನ್ನು ವಿರೋಧಿಸಿದವನು
- ➢ ಜಾತಿ ಪದ್ದತಿಯನ್ನು ವಿರೋಧಿಸಿದರು
- ➢ ದೇವರ ಇರುವಿಕೆಯನ್ನು ಬುದ್ದನು ಒಪ್ಪಲಿಲ್ಲ
- ➢ ಜ್ಞಾನೋದಯದಿಂದ ನಿರ್ವಾಣ ಸಾಧ್ಯ, ವಹಿಕ ಸುಖ ಅನುಭವಿಸುವವರಿಗೆ ಮುಕ್ತಿ ಲಭಿಸುವುದಿಲ್ಲ ಎಂದನು
- ➢ ಅಸಮಾನತೆಯ ಮೂಲವೇಂದು ವೇದಗಳನ್ನು ಖಂಡಿಸಿದರು
- ➢ ಧರ್ಮಾಚರಣೆ & ಪ್ರಾಣಿ ಬಲಿಗಳನ್ನು ವಿರೋಧಿಸಿದರು.

| ಮಹಾಯಾನ | ಹೀನಯಾನ |
|---|---|
| • ಬುದ್ಧನನ್ನು ದೇವರೆಂದು ಪೂಜೆಮಾಡುತಿದ್ದರು<br>• ಬುದ್ಧನ ಮೂರ್ತಿ ಪೂಜೆ<br>• ದ್ಯಾನ & ನಿರಂತರವಾಗಿ ದೇವಾಲಯಗಳ ಬೇಟಿ<br>• ವಿವಾಹದಲ್ಲಿ ನಂಬಿಕೆ ಇರಲಿಲ್ಲ<br>• ವೈದಿಕ ಧರ್ಮದ ಪ್ರಭಾವ ಹೆಚ್ಚಿತ್ತು<br>• ಬುದ್ಧನ ಪುನರ್ಜನ್ಮವನ್ನು ಸ್ವೀಕರಿಸಿದರು.<br>• ಮೋಕ್ಷಕ್ಕೆ ಭಕ್ತಿ ಮಾರ್ಗವನ್ನು ಅನುಸರಣೆ<br>• ಪರರ ಉದ್ಧಾರಕ್ಕಾಗಿ ಶ್ರಮಿಸಬೆಕೆಂದರು<br>• ಗ್ರಂಥಗಳು ಸಂಸ್ಕೃತ ಭಾಷೆ | • ಬುದ್ದನ ತತ್ವಗಳನ್ನೆ ದೈವತ್ವದ ರೂಪದಲ್ಲೆ ಪೂಜೆ<br>• ಬುದ್ದನ ಮೂರ್ತಿ ಪೂಜೆ ನಿಷೇಧ<br>• ವಿವಾಹದಲ್ಲಿ ನಂಬಿಕೆ ಹೊಂದಿದ್ದರು.<br>• ಬುದ್ಧನ ಪುನರ್ಜನ್ಮ ಸ್ವೀಕರಿಸಲಿಲ್ಲ.<br>• ಮೋಕ್ಷಕ್ಕೇ ಕರ್ಮಮಾರ್ಗ ಅನುಸರಣೇ<br>• ವೈಯುಕ್ತಿಕ ಉದ್ಧಾರಕ್ಕಾಗಿ ಶ್ರಮಿಸಬೇಕು.<br>• ಪಾಳಿ ಭಾಷೆಯಲ್ಲಿ ಗ್ರಂಥಗಳು. |

❖ **ಕ್ರೈಸ್ತ ಧರ್ಮ :–**

- ➢ ಯೇಸು ಕ್ರಿಸ್ತನಿಂದ ಉಗಮವಾದ ಧರ್ಮವು, ಪ್ರಪಂಚದಲ್ಲಿ ೧/೩ ರಷ್ಟು ಧರ್ಮಾನುಯಾಯಿಗಳನ್ನು ಹೊಂದಿದು, ವಿಶ್ವದಲ್ಲೆ ಪ್ರಮುಖ ಧರ್ಮವಾಗಿದೆ.
- ➢ ಯೇಸು ಕ್ರೀಸ್ತನು ಜೆರುಸಲೆಂ ಬಳಿಯ ಬೆತ್ಲಹ್ಯಾಮ್ ನಲ್ಲಿ ಜನಿಸಿದರು ಸಾಂಪ್ರದಾಯಿಕ ಯೆಹೂದಿ ನಿಯಮಗಳನ್ನು ಪ್ರಶ್ನಮಾಡಿ, ತಮ್ಮ ಆಧ್ಯಾತ್ಮಿಕ ಬೋಧನೆಗಳಿಂದ ಜನರನ್ನು ಆಕರ್ಷಿಸಿದರು.
- ➢ ಕ್ರಿಸ್ತನ ಭೋದನೆಗಳು
    - ಏಕದೇವರ ಅಸ್ತಿತ್ವವನ್ನು ಪ್ರತಿಪಾದಿಸಿದರು.
    - ದೇವರೇ ಸಕಲ ಜಗತ್ತಿನ ಸೃಷ್ಟಿಕರ್ತ

- ಪ್ರತಿಯೊಬ್ಬರು ಅಹಿಂಸೆ, ಸತ್ಯ, ಪ್ರೇಮ, ತ್ಯಾಗ, ಸದಾಚಾರದ ತತ್ವಗಳನ್ನು ಪಾಲಿಸಬೆಕು.
- ವೆಹಿಕ ಸುಖವನ್ನು ತ್ಯಜಿಸಿದರೆ ಮಾತ್ರ ಆಧ್ಯಾತ್ಮಿಕ ಪ್ರಗತಿ ಎಂದರು
- ಯೇಸುವು ತಮ್ಮ "ಪರ್ವತ ಪ್ರವಚನೆ"ಯಲ್ಲಿ 'ದುಃಖಿಗಳೆ ಭಾಗ್ಯಶಾಲಿ'ಗಳು ಏಕೆಂದರೆ ಅವರು ದೇವರಿಂದ ಸಂತೈಸಲ್ಪಡುತ್ತಾರೆ.
- ಧರ್ಮಕ್ಕೆ ವಿರುದ್ದವಾದ ಕಳ್ಳತನ, ಸುಲಿಗೆ, ವಂಚನೆ, ವ್ಯಭಿಚಾರ ಮಾಡಬಾರದು ಎಂದಿದ್ದಾರೆ.
- ದೇವರ ರಾಜ್ಯದಲ್ಲಿ ಬಡವ– ಶ್ರೀಮಂತ, ಉಚ್ಛ–ನೀಚನೆಂಬ ಬೇಧವಿಲ್ಲ. ಎಂದರು.
- ಜನಸೇವೆ& ಕ್ಷಮಾಗುಣ ಇದ್ದವರು ಭಗವಂತನಿಗೆ ಹತ್ತಿರ ಎಂದರು

❖ **ಕ್ರೈಸ್ತ ಧರ್ಮದ ಪಂಗಡಗಳು:–**

| ರೋಮನ್ ಕ್ಯಾಥೊಲಿಕ್ | ಪ್ರೋಟೆಸ್ಟಂಟ | ಪ್ರಾಚ್ಯ ಸಾಂಪ್ರದಾಯಿಕ ಚರ್ಚಗಳು |
|---|---|---|
| ➢ ಜನರಿಗೆ ಮುಕ್ತಿ ಮಾಗವನ್ನು ತೋರಿಸಲು ಜೀಸಸ್ ಅವತರಿಸಿದ್ದಾರೆ ಎಂಬುದು ಇವರ ಪ್ರಮುಖ ತತ್ವ<br>➢ ಪೊಪ್‌ನ ಮಾತು ವೇದವಾಕ್ಯ ಎಂದು ಪರಿಗಣಿಸಿದರು<br>➢ ಭೋದನೆಯ ಜೊತೆಗೆ ಮತ ಸಂಸ್ಕರಣ ಕಾರ್ಯ ಮುಖ್ಯ<br>➢ ಪಶ್ಚಿಮ ಯುರೊಪ್ ರೋಮ ನಲ್ಲಿ ಪ್ರಬಲವಾಗಿದೆ | ➢ ರೋಮನ್ ಕ್ಯಾಥೊಲಿಕ್ ತತ್ವದ ವಿರುದ್ಧ ಸಿಡಿದೆದ್ದು ರಚನೆಯಾದ ಪಂಥ<br>➢ ಮಾರ್ಟಿನ ಲೂಥರ್ ಕಿಂಗ್ ಅವರ ಧಾರ್ಮಿಕ ಸುಧಾರಣೆಯ ತತ್ವದ ಮೇಲೆ ನಿಂತಿದೆ<br>➢ ಇದು ಚರ್ಚಗಳ ಒಂದೂ ಚಳುವಳಿಯಾಗಿತ್ತು<br>➢ ಇವರು ದೇವರನ್ನು ಒಪ್ಪಿಕೊಂಡರೂ, ಬೈಬಲ್‌ನ್ನು ನಿರಪೇಕ್ಷಗೊಳಿಸಿದರು.<br>➢ ಮದ್ಯ ಯುರೋಪ್, ಜರ್ಮನಿ& ಸ್ವಿಟ್ಜರ್‌ಲ್ಯಾಂಡನಲ್ಲಿ ಪ್ರಬಲ | ➢ ರೋಮನ್ ಕ್ಯಾಥೋಲಿಕ ಚರ್ಚನಿಂದ ಬೇರ್ಪಟ್ಟ ಪಂಥ<br>➢ ಚರ್ಚನಲ್ಲಿ ಪೋಪ್ ಇರುವುದಿಲ್ಲ<br>➢ ಒಬ್ಬ ವ್ಯಕ್ತಿಗಿಂತ, ಚರ್ಚನ ಅನುಯಾಯಿಗಳೆಲ್ಲ ಒಟ್ಟಾರೆ ಸೇರಿ ನಿರ್ಣಯ ತೆಗೆದುಕೊಳ್ಳುತ್ತಾರೆ.<br>➢ 30 ಕೊಟಿಗೂ ಅಧಿಕ ಅನುಯಾಯಿಗಳು<br>➢ ರಷ್ಯಾ, ಜಾರ್ಜಿಯಾ, ಬಲ್ಗೇರಿಯಾ, ಗ್ರೀಸ್, ಮುಂತಾದ ದೇಶಗಳಲ್ಲಿ ಇವು ಪ್ರಬಲವಾಗಿವೆ. |

**ಭಾರತದಲ್ಲಿ ಕ್ರೈಸ್ತ ಮಿಷಿನರಿಗಳ ಚಟುವಟಿಕೆಗಳು:–**

ಜೀಸ್‌ನ್‌ನ ಶಿಷ್ಯನಾಗಿದ್ದ ಸೇಂಟ್ ಥಾಮಸ್‌ನಿಂದ 2000 ವರ್ಷಗಳ ಹಿಂದೇಯೆ ಕ್ರೈಸ್ತ ಧರ್ಮ ಭಾರತಕ್ಕೆ ಪರಿಚಯವಾಗಿತ್ತು ಎಂಬ ನಂಬಿಕೆ ಇದೆ. ಆದರೆ 15 ನೇ ಶತಮಾನದ ನಂತರ ಯೂರೋಪಿಯನ್ನರ ಆಗಮನದಿಂದ ಕ್ರೈಸ್ತ ಧರ್ಮದ ಬೇರುಗಳು ಭಾರತದಲ್ಲಿ ಗಟ್ಟಿಯಾಗಿ ನೇಲೆಯೂರಿದವು. ಪೋರ್ಚುಗೀಸರು ಗೋವಾವನ್ನು ವಶಪಡಿಸಿಕೊಂಡು ಕರಾವಳಿ ಪ್ರಾಂತ್ಯದಲ್ಲಿ ಕ್ರೈಸ್ತ ಧರ್ಮದ ತತ್ವಗಳನ್ನು ಪ್ರಚಾರ ಮಾಡಿದರು. 1765 ನಂತರ ಬಂಗಾಳ ಪ್ರಾಂತದ ಸುತ್ತಮುತ್ತ ಮಿಷಿನರಿ ಚಟುವಟಿಕೆಗಳು ಗರಿಗೆದರಿದವು. ಅಂತಿಮವಾಗಿ 1813 ಅಧಿಕೃತವಾಗಿ ಅನುಮತಿ ನೀಡಿತು.

**ಕ್ರೈಸ್ತ ಮಿಷಿನರಿಗಳ ಅನುಕೂಲಗಳು:–**

- ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ಪದ್ದತಿ, ಬಾಲ್ಯವಿವಾಹ, ಅಸ್ಪೃಶ್ಯತೆ, ಸತಿಪದ್ದತಿಗಳನ್ನು ವಿರೋಧಿಸಿ ಜನರನ್ನು ಅವುಗಳ ವಿರುದ್ದ ಜಾಗೃತಿ ಮಾಡಿದರು.
- ಇಂಗ್ಲಿಷ ಶಿಕ್ಷಣ
- ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ& ಮುದ್ರಣ
- ವೈದ್ಯಕೀಯ ಕ್ಷೇತ್ರದಲ್ಲಿ ಅಪಾರ ಸೇವೆ.

**ಅನಾನುಕೂಲಗಳು:–**

- ಶೋಷಿತ ವರ್ಗದವರು & ಬುಡಕಟ್ಟು ವರ್ಗದವರಿಗೆ ಹಣದ ಆಮಿಷ ನೀಡಿ ಮತಾಂತರ ಮಾಡಿದರು.

❖ **ಇಸ್ಲಾಂ ಧರ್ಮ:–**

- ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾದ ಇಸ್ಲಾಂ ಮಹಮದ್ ಪೈಗಂಬರ್‌ನಿಂದ ಸ್ಥಾಪಿತವಾಯಿತು.
- ವಿಗ್ರಹಾರಾಧನೆ, ಬಹುದೇವತಾರಾಧನೆ & ಪ್ರಾಣಿಬಲಿ ಮೊದಲಾದ ಕಂದಾಚಾರಗಳಿಂದ ಕಲುಷಿತವಾಗಿದ್ದ ಇಸ್ಲಾಂ ಧರ್ಮವನ್ನು ಪವಿತ್ರವಾಗಿ ಒಂದುಗೂಡಿಸಿದ್ದು **'ಮೆಕ್ಕಾದ ಕಾಬಾ ಶಿಲೆ'**
- ಮಹಮದ್ ಪೈಗಂಬರರು 'ಅಲ್ಲಾ ಒಬ್ಬನೇ ದೇವರು, ಮಹಮದ್ ಆತನ ಪ್ರವಾದಿ'ಎಂದು ಘೋಷಿಸಿ, ದೇವರ ಇಚ್ಛೇಗೆ ಶರಣಾಗುವವರನ್ನು 'ಮುಸ್ಲಿಂ'ರು ಎಂದರು.
- ಪೈಗಂಬರ್ ಅವರ ಬಹದೇವತಾರಾಧನೆ ವಿರೋಧದಿಂದ, ಮೆಕ್ಕಾದಲ್ಲಿ ನಡೆಯುತಿದ್ದ 360 ಕ್ಕೂ ದೇವಾಲಯಗಳ ಪೂಜೆಯ ಆದಾಯ ಕುಂಠಿತವಾಗಿದ್ದರಿಂದ ಜನರು ಇವರ ವಿರೋಧಿಗಳಾಗಿ ಕೊಲ್ಲಲು ಪ್ರಯತ್ನಿಸಿದಾಗ, ಪೈಗಂಬರ್ ಜೀವ ಉಳಿಸಿಕೊಳ್ಳಲು ಮೆಕ್ಕಾದಿಂದ ಮದಿನಾಕ್ಕೆ ಪ್ರಯಾಣ ಮಾಡಿದರು. ಈ ವರ್ಷವನ್ನು (ಕ್ರಿ ಶ 622) ನ್ನು **'ಹಿಜರಾ ಶಕೆ'** ಎನ್ನಲಾಗುತ್ತದೆ.

➢ 'ವಿಶ್ವ ಭಾತೃತ್ವ ಮಹಿಳೆಯರನ್ನು & ಮಕ್ಕಳನ್ನು ಗೌರವಿಸುದಲ್ಲದೆ ಪ್ರಾಣಿದಯೆಯಂತಹ ಸಕಾರಾತ್ಮಕ ತತ್ವಗಳನ್ನು ಕುರಾನ್ ಪ್ರತಿಪಾದಿಸಿದೆ.

**ಇಸ್ಲಾಂನ ಪಂಚ ಕರ್ತವ್ಯಗಳು:–**

1. ನಮಾಜ್:– ದಿನಕ್ಕೆ 5 ಬಾರಿ ಮೆಕ್ಕಾದ ಕಡೆಗೆ ಮುಖ ಮಾಡಿ ಪ್ರಾರ್ಥಿಸಿ ಮನಸ್ಸನ್ನು ಶುದ್ಧಗೊಳಿಸುವುದು.
2. ಕಲಿಮಾ :– 'ದೇವರು ಒಬ್ಬನೆ ಅವನೇ ಅಲ್ಲಾ' ಮೊಹಮ್ಮದ್ ಅವನ ಪ್ರತಿನಿಧೀ
3. ಜಕಾತ್:– ಬಡವ –ಶ್ರೀಮಂತರ ಅಂತರ ಕಡಿಮೆ ಮಾಡಲು ಪ್ರತಿಯೊಬ್ಬರು ಗಳಿಕೆಯ 2.5 ರಷ್ಟು ಬಡವರಿಗೆ ದಾನ ನೀಡುವುದು.
4. ರೋಜಾ:– ರಂಜಾನ್ ತಿಂಗಳಲ್ಲಿ ಉಪವಾಸ ಮಾಡಿ, ಅಲ್ಲಾನ ಅರಮನೆಗೆ ಆತ್ಮವನ್ನು ಕೊಂಡೋಯ್ಯುವುದು.
5. ಹಜ್:– ಅಲ್ಲಾನ ಬಳಿ ಶರಣಾಗತಿ & ಜೀವನದ ಪರಿಪೂರ್ಣತೆಗಾಗಿ, ಕೈಗೋಳ್ಳುವ ಮೆಕ್ಕಾ ಯಾತ್ರೆ.

❖ **ಕರ್ನಾಟಕದ ಸೂಫಿಗಳು & ಪಂಥಗಳು:–**

ಮದ್ಯಕಾಲೀನ ಭಾರತದಲ್ಲಿ ಇಸ್ಲಾಂ ಧರ್ಮದ ಮೇಲೆ ಹಿಂದೂ ಧರ್ಮದ ಪ್ರಭಾವದ ಪರಿಣಾಮದಿಂದ ಸೂಫಿ ಪಂಥ ಉದಯಿಸಿತು. ಇದು ಹಿಂದೂ & ಮುಸ್ಲಿಂ ಧರ್ಮಗಳ ಅನೇಕ ಆಚರಣೆಗಳನ್ನು ಆಳವಡಿಸಿಕೊಂಡು ಸಾಮಾಜಿಕ ಸಮಾನತೆ, ಲಿಂಗ ಸಮಾನತೆ, ಧಾರ್ಮಿಕ ಸಾಮರಸ್ಯ, ಭಕ್ತಿಗಲನ್ನು ಭೊಧಿಸಿದರು.

➢ ಕರ್ನಾಟಕಕ್ಕೆ ಮೊದಲು ಆಗಮಿಸಿದವರು ಜಿಹಾದಿ ಸೂಫಿಗಳು

➢ ಬಹುಮನಿ ಸುಲ್ತಾನರು & ಬಿಜಾಪುರದ ಆದಿಲ್‌ಷಾಹಿಗಳ ಇಸ್ಲಾಂ ಸಾಮ್ರಾಜ್ಯದಿಂದ ಆಕರ್ಷಿತರಾಗಿ ಅನೇಕ ಧರ್ಮಗುರುಗಳು ಸೂಫಿಗಳು ಇಲ್ಲಿಗೆ ಆಗಮಿಸಿದರು

➢ ಕರ್ನಾಟಕಕ್ಕೆ ವಲಸೆ ಬಂದ ಸೂಫಿ ಸಂತರಲ್ಲಿ ಡೋಕ್ ಷಿಯಾಬುದ್ದಿನ, ಹಜರತ್ ಬಂದೇ ನವಾಜ್, ಷೇಕ್ ನವಾಜ ಪ್ರಮುಖರು

➢ ಗುಲ್ಬರ್ಗಾದ ಬಂದೇ ನವಾಜರು ಅತ್ಯಂತ ಪ್ರಸಿದ್ಧ ಸೂಪಿ ಸಂತರಾಗಿದ್ದರು ಗುಲ್ಬರ್ಗಾದ ಅವರ ಸಮಾಧಿ ಇಂದು ಯಾತ್ರಾ ಸ್ಥಳವಾಗಿದೆ.

➢ ಬಿಜಾಪುರದ ಆದಿಲ್‌ಷಾಹಿಗಳ ಆಶ್ರಯದಲ್ಲಿ ಚಿಸ್ತಿ ಪಂಥ ಪ್ರಸಿದ್ದಿಯಾಯಿತು.

| ಸುನ್ನಿ ಪಂಥ | ಶಿಯಾ ಪಂಥ |
|---|---|
| • ಇಸ್ಲಾಂ ಧರ್ಮದ ಮೊದಲ ೪ ಖಲಿಫರನ್ನು ಅನುಸರಿಸುವ ಬೃಹತ್ ಸಮುದಾಯ<br>• ವಿಶ್ವದ ಮುಸ್ಲಿಂರಲ್ಲಿ ೮೫ ಪ್ರತಿಶತ<br>• ಮೂಲ ಸಂಪ್ರದಾಯವಾದಿಗಳು | • ಮಹಮದನ ರಕ್ತ ಸಂಭದಿಗಳು& ಅಳಿಯ ಹಜರತ್ ಅಲಿಯ ಅನುಯಾಯಿಗಳು<br>• ವಿಶ್ವದ ಮುಸ್ಲಿಂರಲ್ಲಿ ೧೬ ಪ್ರತಿಶತ<br>• ಮೂಲ ಸಂಪ್ರದಾಯವಾದಿಗಳಲ್ಲ |

- ❖ **ಸಿಖ್ ಪಂಥ**
  - ➢ 16 ನೇ ಶತಮಾನದಲ್ಲಿ ಗುರುನಾನಕರಿಂದ ಸಿಖ್ ಪಂಥದ ಸ್ಥಾಪನೆ
  - ➢ ಗುರುನಾನಕ್‌ರು ಕಬೀರರ ಭೋದನೆಯಿಂದ ಪ್ರಭಾವಿತರಾಗಿ ಮಾನವ ಭ್ರಾತೃತ್ವವನ್ನು ಸಾರಿದರು. ಇವರ & ನಂತರ ಬಂದ ೯ ಗುರುಗಳ ಭೋದನೆಯನ್ನು ಒಳಗೊಂಡು ಸಿಖ್ ಧರ್ಮ ಬೆಳೆಯಿತು.

**ಸಿಖ್ ಧರ್ಮದ ಪ್ರಮುಖ ಲಕ್ಷಣಗಳು:–**

- ಏಕದೇವರಾಧನೆ
- ಯಜ್ಞ – ಯಾಗಾದಿಗಳಿಗಿಂತ, ಉತ್ತಮ ಕಾರ್ಯಗಳನ್ನು ಮಾಡಲು ಉತ್ತೇಜಿಸಿತು
- ಉತ್ತಮ ಜೀವನ ನಡೆಸಲು
  1. ಮನದಲ್ಲಿ ಸದಾಕಾಲ ದೇವರ ಆರಾಧನೆ
  2. ಪ್ರಾಮಾಣಿಕ ಜೀವನ
  3. ಎಲ್ಲರನ್ನು ಸಮಾನವಾಗಿ ನೋಡುವುದು ದುರ್ಬಲರ ಮೇಲೆ ಕರುಣೆ
  4. ದುರ್ಬಲರ ಮೇಲೆ ಕರುಣೆ
  5. ಸೇನಾ ಮನೋಭಾವಗಳ ಅವಶ್ಯಕತೆಯನ್ನು ಸಾರಿದೆ
- 'ಗುರುದ್ವಾರ' ಇವರ ಪವಿತ್ರ ಸ್ಥಳ
- 'ಗುರುಗ್ರಂಥ ಸಾಹೆಬ್' ಇದರ ಪವಿತ್ರ ಗ್ರಂಥ. ೧೦ ನೇ ಗುರು ಗೋವಿಂದ ಸಿಂಹರು ತಮ್ಮ ಮರಣಾನಂತರ ಈ ಗ್ರಂಥವೇ ಸಿಖ್ಖರಿಗೆ ಆದ್ಯಾತ್ಮಿಕ ಗುರು ಎಂದು ಹೇಳಿ ಹೋದರು ಅಂದಿನಿಂದ ಜೀವಂತ ಗುರುವಿಗೆ ಕೊಡುತ್ತಿದ್ದ ಗೌರವ & ಭಕ್ತಿಯನ್ನು ಸಿಖ್‌ರು ಈ ಗ್ರಂಥಕ್ಕೆ ಸಲ್ಲಿಸುತಿದ್ದಾರೆ.

ಘಟಕ–೨

ಪರಿವರ್ತನೆಯತ್ತ ಭಾರತೀಯ ಸಮಾಜ ಚಿಂತನೆಯ ಪ್ರಮುಖ ಮಾರ್ಗಗಳು, ಅಧುನಿಕ ಭಾರತದ ಇತಿಹಾಸ 19 ನೇ ಶತಮಾನ ಪ್ರಾರಂಭದಿಂದ ಸುಧಾರಣೆಗಳು & ಸುಧಾರಕರು

1. ಸಾಮಾಜಿಕ & ಧಾರ್ಮಿಕ ದೋಷಗಳ ನಿರ್ಮೂಲನೆ:–

ಭಾರತ ದೇಶದ ಇತಿಹಾಸವನ್ನು ಪ್ರಾಚೀನ, ಮದ್ಯಕಾಲಿನ & ಆಧುನಿಕ ಯುಗಗಳಾಗಿ ವರ್ಗಿಕರಿಸಬಹುದು. ತುರ್ಕರು, ಅಫ್ಘನ್ನರು, ಮೋಘಲರು ಹೀಗೆ ಅನೇಕ ವಿದೇಶೀ ದೊರೆಗಳು ಭಾರತವನ್ನು ಆಕ್ರಮಿಸಿ, ಭಾರತವನ್ನು ತಮ್ಮ ವಾಸಸ್ಥಾನವನ್ನಾಗಿ ಭಾವಿಸಿ ಆಡಳಿತ ನಡೆಸಿದರು. ಆದರೆ ಬ್ರಿಟಿಷರು ಕೊನೇಯವರೆಗೂ, ಭಾರತಕ್ಕೆ ಪರಕೀಯರಾಗಿಯೆ ಇದ್ದುಕೊಂಡು ಆಡಳಿತ ನಡೆಸಿದದರು.

**ಯುರೋಪ್‌ನ ಪುನರುಜ್ಜೀವನ & ಭಾರತದ ಮೇಲೆ ಅದರ ಪರಿಣಾಮ:–**

1450 ರ ನಂತರ ಯುರೋಪ್‌ನಲ್ಲಾದ 3 ಪ್ರಮುಖ ಬೆಳವಣಿಗೆಗಳು:–

1. ಮುದ್ರಣ ಯಂತ್ರದ ಸಂಶೋಧನೆ

2. ನವೋದಯದ ಉಗಮ & ಸುಧಾರಣೆಯ ಚಳುವಳಿಗಳು

3. ಹೋಸ ವ್ಯಾಪಾರ ಮಾರ್ಗಗಳ ಅನ್ವೇಶಣೆ.

ಭಾರತಕ್ಕೆ ಮೋದಲು ಬಂದ ಪೋರ್ಚುಗೀಸರು, ಡಚ್ಚರು, ಪ್ರೆಂಚರು, ಎಲ್ಲರನ್ನೂ ಮಣಿಸಿದ ಬ್ರೀಟಿಷರು ಭಾರತದ ಸರ್ವ ರಾಜಕೀಯ & ಆರ್ಥಿಕ ನಿಯಂತ್ರಣವನ್ನು ಪಡೆದುಕೊಂಡರು. ಇಂಗ್ಲೇಂಡನ ಕೈಗಾರಿಕಾ ಕ್ರಾಂತಿಗೆ ಭಾರತದ ಕಚ್ಚಾವಸ್ತುಗಳನ್ನು ಅತೀ ಕಡಿಮೆ ಬೆಲೆಗೆ ಖರಿದಿಸಿ, ತಯಾರಾದ ಸರಕುಗಳಿಗೆ ಭಾರತ ಮಾರುಕಟ್ಟೆಯಾಗಿ ಭಾರತದ ಆರ್ಥಿಕತೆ ಕುಸಿಯಿತು.

## 18 ನೇ ಶತಮಾನದಲ್ಲಿ ಭಾರತದಲ್ಲಿ ಆರ್ಥಿಕತೆ, ಸಮಾಜ & ಸಂಸ್ಕೃತಿ :–

ಆರ್ಥಿಕತೆ:– ಕೃಷಿ ಮುಖ್ಯ ಕಸುಬು & ರಾಜರು ಸದಾ ಯುದ್ದಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಕೃಷಿಯ ಅಭಿವೃದ್ಧಿ ಸಾದ್ಯವಾಗಲಿಲ್ಲ

- ವಿದೇಶಿ ವ್ಯಾಪಾರ ಸಮೃದ್ಧವಾಗಿತ್ತು
  ಆಮದು ವಸ್ತುಗಳು :– ಮುತ್ತುಗಳು, ಉಣ್ಣೆ, ಕಾಫಿ, ಜೇನುತುಪ್ಪ
  ರಫ್ತು ವಸ್ತುಗಳು:– ರೇಷ್ಮೇ, ನೀಲಿ, ಸಕ್ಕರೆ, ಮೆಣಸು, ಹತ್ತಿ ಬಟ್ಟೆ.

**ಸಾಮಾಜಿಕ ಸ್ಥಿತಿಗತಿ:–**

- ಸಾಮಾಜಿಕ & ಸಾಂಸ್ಕೃತಿಕ ಐಕ್ಯತೆಯ ಕೊರತೆ ಇತ್ತು.
- ಧರ್ಮ ಭಾಷೆ & ಜಾತಿಯ ಆಧಾರದ ಮೇಲೆ ಸಮಾಜ ವಿಭಜನೆಯಾಗಿತ್ತು
- ಜಾತಿ ಪದ್ಧತಿ, ಸತಿ ಪದ್ಧತಿ, ಮೂರ್ತಿಪೂಜೆ, ಬಾಲ್ಯವಿವಾಹ & ಮಹಿಳಾ ಶೋಷಣೆ ಅತಿಯಾಗಿತ್ತು.
- ಅಂತರ್ಜಾತಿ ವಿವಾಹವು ರೂಢಿಯಲ್ಲಿದ್ದಿಲ್ಲ. ಬಹುಪತ್ನಿತ್ವ ರೂಢಿಯಲ್ಲಿತ್ತು. ಮಹಿಳೆಯರಿಗೆ ಆಸ್ತಿಯ ಹಕ್ಕು & ವಿಚ್ಛೇದನದ ಹಕ್ಕು ಇದ್ದಿಲ್ಲ.

**ಹಿಂದೂ– ಮುಸ್ಲಿಂ ಸಂಬಧ:–**

- ಉತ್ತಮ ಸ್ನೇಹ ಸಂಭದವಿತ್ತು.
- ಧಾರ್ಮಿಕ ಸಹಿಷ್ಣುತೆ ರೂಢಿಯಲ್ಲಿತ್ತು.
- ಪರಸ್ಪರ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೋಳ್ಳುತಿದ್ದರು.
- ಮುಸ್ಲಿಂರು ಕೋಡ ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೋಂಡಿದ್ದರು.

**ಸಾಮಾಜಿಕ & ಧಾರ್ಮಿಕ ಸುಧಾರಕರು:–**

ಇಂಗ್ಲಿಷ್ ಶಿಕ್ಷಣವು ಭಾರತದಲ್ಲಿ ಪಾಶಿಮಾತ್ಯ ವಿಚಾರಗಳು & ಪ್ರಗತಿಪರ ವಿಚಾರಗಳನ್ನು ವಿದ್ಯಾವಂತ ಯುವಕರಲ್ಲಿ ಮಾಡಿಸಿತು. ವಿದ್ಯಾವಂತ ಯುವಕರು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಅನಿಷ್ಟ ಮತ್ತು ಕಂದಾಚಾರಗಲ ವಿರುದ್ಧ ಧ್ವನಿಯೆತ್ತಿದರು. ಕೈಗಾರಿಕಾ ಕ್ರಾಂತಿ & ವೈಜ್ಞಾನಿಕ ಕ್ರಾಂತಿಗಳು ಭಾರತದಲ್ಲಿ ಹೊಸ ಸಾಮಾಜಿಕ & ಧಾರ್ಮಿಕ ದೃಷ್ಠಿಕೋನಗಳಿಗೆ ಅವಕಾಶ ನೀಡಿದವು.

**1. ರಾಜಾರಾಮ್ ಮೋಹನ್‌ರಾಯ್:–**

- 1828 ರಲ್ಲಿ ಬಂಗಾಳದಲ್ಲಿ ಇವರಿಂದ ಸ್ಥಾಪಿತವಾದ **'ಬ್ರಹ್ಮ ಸಮಾಜವು'** ಭಾರತದ ಪುನರುಜ್ಜೀವನ ಚಳುವಳಿಯ ನಾಯಕತ್ವ ವಹಿಸಿತು.
- **ಬ್ರಹ್ಮ ಸಮಾಜದ ತತ್ವಗಳು:–**
    - ವಿಗ್ರಹಾರಾಧನೆಗೆ ವಿರೋಧ
    - ಏಕದೇವತಾರಾಧನೆ
    - ಮೂಢನಂಬಿಕೆ & ಅಂಧಾನುಕರಣೆಗೆ ವಿರೋಧಿ
    - ವಿಧವಾವಿವಾಹಕ್ಕೆ ಪ್ರೋತ್ಸಾಹ
    - ಯಜ್ಞ – ಯಾಗಾದಿಗಳ ವಿರೋಧ

- 1822 ರಲ್ಲಿ ಸ್ತ್ರೀಯರ ಶೋಷಣೆಯನ್ನು ಖಂಡಿಸುವ ಪ್ರಭಂಧ ಬರೆದು, ಸತಿಸಹಗಮನ ಪದ್ದತಿಯನ್ನು ತೀವ್ರವಾಗಿ ವಿರೋಧಿಸಿ ಇದರಬಗ್ಗೆ ಬ್ರೀಟಿಷರ ಗಮನಸೆಳೆದರು.
- ಭಾರತದಲ್ಲಿ ಇಂಗ್ಲೀಷ ಶಿಕ್ಷಣದ ವಿಸ್ತರಣೆಗೆ ಬ್ರೀಟಿಷರ ಮೇಲೆ ಒತ್ತಡ ಹೇರಿದರು
- ಬ್ರಹ್ಮ ಸಮಾಜದ ತತ್ವಗಳನ್ನುದೇಶದ ಎಲ್ಲಾಕಡೆ ಹರಡಿ **'ಆಧುನಿಕ ಭಾರತದ ಪಿತಾಮಹ'** ಎಂಧು ಖ್ಯಾತರಾಗಿದ್ಧಾರೆ

**2. ಪ್ರಾರ್ಥನಾ ಸಮಾಜ:–**

- ಆತ್ಮಾರಾಂ ಪಾಂಡುರಂಗ ಅವರಿಂದ 1867 ರಲ್ಲಿ ಮುಂಬೈನಲ್ಲಿ ಸ್ಥಾಪನೆ.
- ಪ್ರಮುಖ ತತ್ವಗಳು:–
  - ಅಂತರ್ಜಾತಿ ಭೋಜನ
  - ವಿಧವಾ ವಿವಾಹ
  - ಮಹಿಳೆಯರ & ಶೋಷಿತ ವರ್ಗದವರ ಉದ್ದಾರ

**3. ರಾಮಕೃಷ್ಣ ಮಿಷನ್:–**

- ಸ್ವಾಮಿ ವಿವೇಕಾನಂದರಿಂದ ಸ್ಥಾಪನೆ
- ಭಾರತೀಯ ಸಮಾಜದಲ್ಲಿ ವೇದಗಳು & ಉಪನಿಷತ್ತಗಳ ಮೌಲ್ಯವನ್ನ ತಿಳೀಸಿ, ಪರಮಹಂಸರ ತತ್ವಗಳನ್ನು ಪ್ರಚಾರ ಮಾಡುವುದು ಪ್ರಮುಖ ಉದ್ದೇಶ

**4. ಥಿಯೋಸೋಫಿಕಲ್ ಸೋಸೈಟಿ:–**

- ಹೆಚ್. ಪಿ. ಬ್ಲಾವಟ್ಸ್ಕಿ & ಹೆಚ್ ಎಸ್ ಆಲ್ಕಟ್‌ರಿಂದ ಸ್ಥಾಪನೆ
- ಪ್ರಾಚೀನ ಭಾರತದ ಧರ್ಮಗಳು & ತತ್ವಗಳನ್ನು ಅಧ್ಯಯನ ಮಾಡಿ ಪ್ರಚಾರ ಮಾಡುವುದು ಪ್ರಮುಖ ಉದ್ಧೇಶ.

**5. ಸರ್ವರಿಗೂ ವೇದಗಳು – ಜಾತ್ಯಾತೀತ ಸಮಾಜ:–**

- 1875 ರಲ್ಲಿ ಬೊಂಬಾಯಿಯಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರಿಂದ ಆರ್ಯ ಸಮಾಜದ ಸ್ಥಾಪನೆ
- **ಮುಖ್ಯ ಉದ್ದೇಶ:–** ಪ್ರಾಚೀನ ಸಂಸ್ಕೃತಿಯ ಪುನಶ್ಚೇತನ ಮಾಡುವುದರ ಮೂಲಕ, ಸಮಾಜದ ಅನಿಷ್ಟಗಳನ್ನು ನಿವಾರಿಸಿ, ವೇದಗಳ ಮಾದರಿಯಲ್ಲಿ ಸಮಾಜವನ್ನು ಸ್ಥಾಪಿಸುವುದು
- **'ವೇದಗಳಿಗೆ ಹಿಂತಿರುಗಿ'** ಇವರು ಜನರಿಗೆ ಕೊಟ್ಟ ಪ್ರಸಿದ್ಧ ಕರೆ

**ಆರ್ಯಸಮಾಜದ ತತ್ವಗಳು:–**

- ❖ ದೇವರು ಸರ್ವವ್ಯಾಪಿ
- ❖ ವೇದಗಳೆ ನಿಜವಾದ ಜ್ಞಾನದ ಆಕರ
- ❖ ಪರಮಾತ್ಮ, ಜೀವ & ಪ್ರಕೃತಿ ಈ ಮೂರು ಅನಾದಿ
- ❖ ಸಮಾಜದ ಮುಖ್ಯ ಕರ್ತವ್ಯ ಇಡಿ ಜಗತ್ತಿಗೆ ಒಳ್ಳೆಯದನ್ನು ಮಾಡುವುದು.
- ❖ ವರ್ಣಗಳನ್ನು ವ್ಯಕ್ತಿಗಳ ಗುಣಕರ್ಮ & ಯೋಗ್ಯತೆಯ ಆಧಾರದ ಮೇಲೆನಿರ್ಧರಿಸಬೇಕು
- ❖ ಮೂರ್ತಿಪೂಜೆ, ತೀರ್ಥಯಾತ್ರೇ, ಜಾತಿ ಪದ್ದತಿ , ಸತಿ ಪದ್ದತಿ, ಬಾಲ್ಯ ವಿವಾಹ & ಬಹುಪತ್ನಿತ್ವಕ್ಕೆ ವಿರೋಧ
- ❖ ಅಂತರ್ಜಾತಿ ವಿವಾಹ & ಸಹಭೋಜನಕ್ಕೆ ಪ್ರೋತ್ಸಾಹ

- ➢ ಇಸ್ಲಾಂ & ಕ್ರೀಶ್ಚಿಯನ್ ಧರ್ಮಕ್ಕೆ ಮತಾಂತರಗೋಂಡವರನ್ನು ಹಿಂದೂ ಧರ್ಮದ ತೆಕ್ಕೆಗೆ ಹಿಂದಕ್ಕೆ ಕರೆಸಿಕೊಳ್ಳಲು **'ಶುದ್ಧೀ ಚಳುವಳಿ'** ಯ ಪ್ರಾರಂಭ. ಇದು ರಾಷ್ಟ್ರೀಯವಾಗಿ, ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಭಾರತವನ್ನು ಒಂದುಗೂಡಿಸುವ ಆದರ್ಶರೂಪವಾಗಿತ್ತು.
- ➢ ಇದರ ನಂತರ ಆರ್ಯ ಸಮಾಜದ ತತ್ವಗಳನ್ನು ಲಾಲಾ ಲಜಪತರಾಯ್ ಮಹಾತ್ಮಾ ಹಂಸರಾಜ್, ಗುರುದತ್ ವಿದ್ಯಾರ್ಥಿ & ಸ್ವಾಮಿ ಶ್ರಧ್ಧಾನಂದರಂತಹ ಮಹಾನ್ ನಾಯಕರು ಪ್ರಚಾರ ಮಾಡಿದರು.

**ಭಾರತೀಯ ಸಮಾಜದ ಪರಿವರ್ತನೆ**

- ➢ ಇಂಗ್ಲಿಷ ಶಿಕ್ಷಣ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಧಾರ್ಮಿಕ ಸುಧಾರಕರ ತತ್ವ ಪ್ರಚಾರ ಮುಂತಾದ ಅಂಶಗಳಿಂದ ಭಾರತೀಯ ಸಮಾಜವು ಪರಿವರ್ತನೆಯಾಗುತ್ತಾ ಬಂದಿತು.
- ➢ ಭಾರತೀಯ ಸಮಾಜವು ಪ್ರಮುಖವಾಗಿ 'ಮಹಿಳೆ'& 'ಜಾತಿ' ವಿಷಯಗಳಲ್ಲಿ ಅಪಾರ ಪರಿವರ್ತನೆ ಒಳಪಟ್ಟಿತ್ತು.

| ಮಹಿಳೆ | ಜಾತಿ |
|---|---|
| ❖ ಹೆಣ್ಣು ಬ್ರೂಣ ಹತ್ಯೆ ನಿಷೇಧ – ವೆಲ್ಲೆಸ್ಲಿ.<br>➢ ಕಾಯ್ದೆ 1975 ಬಂಗಾಳ ರೆಗ್ಯುಲೆಷನ್ ಆಕ್ಟ<br>❖ ಸತಿ ಸಹಗಮನ ಪದ್ದತಿ – ವಿಲಿಯಂ ಬೆಂಟಿಕ್<br>➢ ಕಾಯ್ದೆ 1829 ರ ಕಾಯ್ದೆ<br>❖ ಬಾಲ್ಯ ವಿವಾಹ ನಿಷೇಧ<br>➢ ಬಾಲ್ಯವಿವಾಹ ನಿಷೆಧ ಕಾಯ್ದೆ ಸಾರ್ದಾ ಕಾಯ್ದೆ1930<br>❖ ಮಹಿಳಾ ಶಿಕ್ಷಣ<br>➢ ಬೇತೂನ ಶಾಲೆ ( ಈಶ್ವರಚಂದ್ರ ವಿದ್ಯಾಸಾಗರ)<br>➢ ವುಡ್ಸ ವರದಿ<br>➢ ಡಫರಿನ್ ಆಸ್ಪತ್ರೆ<br>➢ ಲೇಡಿ ಹಾರ್ಡಿಂಜ್ ವೈದ್ಯಕೀಯ ಶಾಲೆ<br>❖ ವಿಧವಾ ಮರುವಿವಾಹ<br>➢ ಈಶ್ವರ ಚಂದ್ರ ವಿದ್ಯಾಸಾಗರ<br>➢ ವಿಷ್ಣು ಶಾಸ್ತ್ರೀ ಪಂಡಿತ<br>➢ ಕರ್ವ | ❖ ವರ್ಣಾಶ್ರಮವು ಗುಣಕರ್ಮ & ಯೋಗ್ಯತೆಯ ಆಧಾರದ ಮೇಲೆಯೆ ಹೊರತು ಹುಟ್ಟಿನಿಂದಲ್ಲ– ಆರ್ಯ ಸಮಾಜ<br>❖ ಸತ್ಯಶೋಧಕ ಸಮಾಜ–ಜ್ಯೋತಿಬಾ ಫುಲೆ<br>➢ ಬ್ರಾಹ್ಮಣೆತರ ಆಂದೋಲನ (ಹಿಂದುಳಿದ ವರ್ಗಗಳ ಆಂದೋಲನ)<br>❖ ಅಂಬೆಡ್ಕರ್–'ದಲಿತ ಸ್ವಾಭಿಮಾನ ಆಂದೋಲನ' ದ ವಿಸ್ತರಣೆ<br>❖ ಇ ವ್ಹಿ ರಾಮಸ್ವಾಮಿ – ಸ್ವಾಭಿಮಾನ ಚಳುವಳಿ.<br>❖ ಶ್ರೀ ನಾರಾಯಣ ಗುರು ಅವರ 'ಮನುಕುಲಕ್ಕೆ ಒಂದೇ ದೈವ' ಎಂಬ ವಾಕ್ಯ<br>❖ ಗಾಂಧೀ ಹರಿಜನ ಚಳುವಳಿ |

ದ್ವಿರಾಷ್ಟ್ರ ಸಿದ್ದಾಂತ :–

❖ ಕೋಮುವಾದದ ಉಗಮ & ವಿಭಜನೆಗೆ ಕಾರಣವಾದ ಪ್ರಾರಂಭಿಕ ಅಂಶಗಳು:– (1905 ರಿಂದ 1947 ರ ವರೆಗೆ)

➢ 1905 ರ ಬಂಗಾಳ ವಿಭಜನೆ

➢ 1909 ರ ಮಾರ್ಲೆ–ಮಿಂಟೋ ಸುಧಾರಣೆಗಳು:– ಮುಸ್ಲಿಂರಿಗೆ ಪ್ರತ್ಯೇಕ ಮತದಾನ & ಚುನಾವಣಾ ವ್ಯವಸ್ಥೆ

➢ 1919 ರ ಮಾಂಟೆಗೋ – ಚೆಮ್ಸಫರ್ಡ ಸುಧಾರಣೆಗಳು ಮುಸ್ಲಿಂ ಸಮುದಾಯಕ್ಕೆ ಚುಣಾವಣೇಯಲ್ಲಿ ಮೀಸಲಾತಿ ಕ್ಷೇತ್ರಗಳು

- ಖಿಲಾಫತ್ ಚಳುವಳಿಗೆ ಗಾಂಧೀಜಿ ನೀಡಿದ್ದ ಬೆಂಬಲವನ್ನು **'ಚೌರಿ– ಚೌರಾ'** ಘಟನೆಯಿಂದ ಹಿಂಪಡೆದಾಗ ಮುಸ್ಲಿಂ ಮುಖಂಡರು ಇದನ್ನು ದ್ರೋಹ ಎಂದ ಭಾವಿಸಿದರು.
- 1930 ರ ನಂತರ ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಕೂಗು ಜೋರಾಯಿತು. ಮಹಮದ್ ಇಕ್ಬಾಲ ಇದರ ಮೊದಲ ಹೋರಾಟಗಾರನಾದನು.
- 1940 ರಂದು ಲಾಹೋರ್ ಅಧಿವೇಶನದಲ್ಲಿ ಜಿನ್ನಾನಿಂದ ಮುಸ್ಲಿಂ ರಾಷ್ಟ್ರದ ಸಂಕಲ್ಪ
- 1942 ರ ಕ್ರಿಪ್ಸ ಮಿಷನ್ ಪ್ರತ್ಯೇಕ ಪಾಕಿಸ್ತಾನ ರಾಷ್ಟ್ರದ ಬೇಡಿಕೆ ಯನ್ನು ತಿರಸ್ಕರಿಸಿದರೂ, ಯಾವುದೇ ಪ್ರಾಂತ್ಯ, ಭಾರತದ ಒಕ್ಕೂಟದಿಂದ ಪ್ರತ್ಯೇಕಗೋಳ್ಳಲು ಸ್ವಾತಂತ್ರ್ಯವಿದೆ ಎಂದು ಪರೋಕ್ಷವಾಗಿ ಬೆಂಬಲ ನೀಡಿತು.
- 1946 ರ ಕ್ಯಾಬಿನೆಟ್ ಮಿಷನ್ ಯೋಜನೆಯು ಪ್ರತ್ಯೇಕ ಪಾಕಿಸ್ತಾನ ಬೇಡಿಕೆಯನ್ನು ತಿರಸ್ಕರಿಸಿ, ಮುಸ್ಲಿಂ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ಪ್ರಾಂತೀಯ ಸ್ವಾಯುತ್ತತೆ ನೀಡಲು ಒಪ್ಪಿತು.
- ಇದನ್ನು ವಿರೋಧಿಸಿ ಆಗಸ್ಟ 16, 1946 ಜಿನ್ನಾ **'ನೇರ ಕಾರ್ಯಾಚರಣೆ ದಿನ'** ಎಂದು ಘೋಷಿಸಿ, ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಸಾವಿರಾರು ಮಂದಿ ಪ್ರಾಣತೆತ್ತರು.
- ನಂತರ ಎಲ್ಲಾ ಸಂಧಾನಗಳ ವಿಫಲವಾಗಿ, ಪ್ರತ್ಯೇಕ ಪಾಕಿಸ್ತಾನ ರಾಷ್ಟ್ರವೊಂದೇ ಪರಿಹಾರ ಎಂದು ಅರಿತು 'ಮೌಂಟ ಬ್ಯಾಟನ್ ಯೋಜನೆ' ಯು ಜುಲೈ 3, 194೭ ರಂದು ಪ್ರತ್ಯೇಕ ಪಾಕಿಸ್ತಾನ ರಾಷ್ಟ್ರದ ಘೋಷಣೆ ಮಾಡಿದರು.

**ಇಸ್ಲಾಂನ ಪುನರುಜ್ಜೀವನ ತತ್ವ:–**

ಪುನರಿಜ್ಜೀವನವು ಒಂದು ನಿಯತಕಾಲಿಕೆ ಘಟನೆಯಾಗಿದ್ದು, ಪ್ರತಿ ಶತಮಾನದ ಪ್ರಾರಂಬದಲ್ಲಿ ಬರುವ ಒಬ್ಬ **'ಸುಧಾರಕ'** ನಿಂದ ಇಸ್ಲಾಂ ಧರ್ಮವು ಪುನರುಜ್ಜೀವನಗೋಳ್ಳುತ್ತದೆ ಎಂಬ ನಂಬಿಕೆ ಇಸ್ಲಾಂನಲ್ಲಿದೆ.

ಇದರಲ್ಲಿ ಪ್ರಮುಖ ಸುಧಾರಕರು.

1. ಅಹ್ಮದ್ ಸಿರ್ಹಿಂದಿ
2. ಇಬ್ನ ತಯ್ಮಿಯ್ಯಾ
3. ಷಾ ವಲಿಯುಲ್ಲಾ
4. ಅಬ್ದುಲ್ ಷಹಾಬ್

- **ಪ್ರಮುಖ ಸುಧಾರಣಾ ಚಳುವಳಿಗಳು**

**1. ವಹಾಬಿ ವಲಿಯುಲ್ಲಾ ಚಳುವಳಿ:–**

- ಮುಸ್ಲಿಂ ನ್ಯಾಯಶಾಸ್ತ್ರದ 4 ಶಾಲೆಗಳ ಮದ್ಯೆ ಸಾಮರಸ್ಯ ಮಡಿಸಿ, ನಾಲ್ಕೂ ಶಾಲೆಗಳಲ್ಲಿನ ಅತ್ಯತ್ತಮ ಅಂಶಗಳನ್ನು ಒಗ್ಗೂಡಿಸುವುದು ಇವರ ಗುರಿಯಾಗಿತ್ತು.
- ಧರ್ಮಾಚರಣೆ ಯಲ್ಲಿಯಲ್ಲಿ ವೈಯುಕ್ತಿಕ ಆತ್ಮಸಾಕ್ಷೀಯ ಮಹತ್ವ ಸಾರಿದರು

- ಭಾರತವನ್ನು 'ಕಾಫಿರರ ನಾಡಿ'ನಿಂದ (ಇಸ್ಲಾಂ ಧರ್ಮದಲ್ಲಿ ನಂಬಿಕೆ ಇಲ್ಲದವರು), 'ಇಸ್ಲಾಂ ನಾಡನ್ನಾಗಿ ಪರಿವರ್ತಿಸುವುದು ಇವರ ಗುರಿಯಾಗಿತ್ತು.
- ಪ್ರಾರಂಬಿಕ ಹಂತದಲ್ಲಿ ಈ ಚಳುವಳಿಯು ಸಿಖ್ಖರ ವಿರುದ್ಧವಾಗಿತ್ತು. ನಂತರ ೧೮೪೯ ರಲ್ಲಿ ಪಂಜಾಭನ್ನು ಬ್ರೀಟಿಷರು ವಶಪಡಿಸಿಕೊಂಡ ಮೇಲೆ, ಬ್ರೀಟಿಷರ ವಿರುದ್ದವಾಗಿ ತಿರುಗಿತು.

2. **ಫರೈಜಿ ಚಳುವಳಿ:–**

- ಮಿರ್ಜಾ ಗುಲಾಮ್ ಅಹ್ಮದ್‌ನಿಂದ 188೯ ರಲ್ಲಿ ಪ್ರಾರಂಭ
- ಬ್ರಹ್ಮ ಸಮಾಜದ ತತ್ವದಂತೆ 'ಮಾನವೀಯತೆ' ಎಂಬ ಜಾಗತಿಕ ಧರ್ಮದ ಅವಶಕ್ಯತೆಯನ್ನು ಒತ್ತಿಹೆಳಿತು.
- 'ಜಿಹಾದ್' (ಧರ್ಮಯುದ್ಧ) ವನ್ನು ವಿರೋಧಿಸಿದರು.

**3. ಆರ್‍ಹಾರ್ ಚಳುವಳಿ:–**

- ೧೯ ನೇ ಶತಮಾನದಲ್ಲಿ 'ಅಲಿಫರ್ ಚಳುವಳಿ' ಯು ಮುಸ್ಲಿಂ ಯುವಕರನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದಂತೆ ಕರೆಕೊಟ್ಟಿತ್ತು.
- ಆ ಸಮಯದಲ್ಲಿ ಮೌಲಾನಾ ಮೊಹಮದ್ ಅಲಿ, ಹರಮ್ ಅಜ್ಮಲ್ & ಹಸನ್ ಇಮಾಮ್ ರಿಂದ ಶುರುವಾದ ಆರ್‍ಹಾರ್ ಚಳುವಳಿಯು 'ಆಲಿಫರ್ ಚಳುವಳಿಯನ್ನು ವಿರೋಧಿಸಿ ಸ್ವಾತಂತ್ರ್ಯ ಚಳುವಳಿಯನ್ನು ಮುಸ್ಲಿಂ ಯುವಕರ ಭಾಗವಹಿಸುವಿಕೆಯನ್ನು ಒತ್ತಿ ಹೇಳಿತು.

❖ ಧರ್ಮ ಹಾಗೂ ಶಿಕ್ಷಣದ ಮುಖಾಂತರ ಶೋಷಣೆಗೋಳಗಾದ ಸಬಲೀಕರಣ:–

19 ನೇ ಮತ್ತು 20 ನೇ ಶತಮಾನದಲ್ಲಿ ಶೊಷಣೆಗೋಳಗಾದ ವರ್ಗಗಳ ಸುಧಾರಣೆ ಮಾಡುವ ಕಾರ್ಯಗಳು ಅನೇಕ ಸಂಘಟನೆಗಳಿಂದ ಪ್ರಾರಂಭಗೊಂಡಿತು

ಪ್ರಮುಖ ಸಂಘಟನೆಗಳು:–

1. ಶ್ರೀ ರಾಮಕೃಷ್ಣ ಮಿಷನ್ (1877)

- ದುರ್ಬಲ ವರ್ಗದವರಿಗೆ ಜಾತಿ & ಧರ್ಮ ಬೇಧವಿಲ್ಲದೇ ಸರ್ವರಿಗೂ ಶಿಕ್ಷಣ & ವಸತಿ

2. ಹರಿಜನ ಸೇವಕ್ ಸಂಘ (1923)

- ಟಕ್ಕರ್ ಬಾಪಾನಿಂದ ಸ್ಥಾಪಿತವಾದ ಈ ಸಂಘಟನೆಯು ಹರಿಜನರ ಕಲ್ಯಾಣಕ್ಕಾಗಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳ ಸ್ಥಾಪನೆ
- ಶಿಕ್ಷಣ ಸೌಲಭ್ಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ

- ದೇವಾಲಯ ಪ್ರವೇಶ, ಹರಿಜನ ಕೇರಿ ಸ್ವಚ್ಛತೆ, ಸಾಮೂಹಿಕ ಭಜನೆ ಇವರ ಇತರೆ ಕಾರ್ಯಕ್ರಮಗಳು.

3. ಶ್ರೀ ನಾರಾಯಣಗುರು ದರ್ಮ ಪರಿಪಾಲನಾ ಯೋಗಂ

- 1902 ರಲ್ಲಿ ಕೇರಳದಲ್ಲಿ ಶ್ರೀ ನಾರಾಯಣ ಗುರುಗಳಿಂದ ಸ್ಥಾಪನೆ
- ಒಂದು ಜಾತಿ, ಒಂದು ಧರ್ಮ, ಒಬ್ಬನೆ ದೇವರು' ಎಂಬ ತತ್ವ ಪ್ರಚಾರ
- ಕೇರಳದ ಶೋಷಿತ 'ಇಜ್ವಾ ಸಮೂಹದ ಸಾಮಾಜಿಕ ಸ್ಥಾನಮಾನಗಳನ್ನು ಸುಧಾರಿಸಿ, ಈ ಸಮುದಾಯಕ್ಕಾಗಿ ಪ್ರತ್ಯೇಕ ದೇವಾಲಯ ನಿರ್ಮಿಸಿ, ಸರಳವಾದ ಸಾಮಜಿಕ & ಧಾರ್ಮಿಕ ವಿಧಿ ವಿಧಾನಗಳನ್ನು ಇವರಿಗೆ ಕೊಡುಗೆಯಾಗಿ ನೀಡಿದ್ದಾರೆ.
- ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳನ್ನು ಆರಂಭಿಸಿದರು.

4. ಅಸ್ಪೃಶತೆಯ ವಿರುದ್ಧ ಹೊರಾಡಿದ ಇನ್ನಿತರ ಸಂಘಟನೆಗಳು:–

- ಜ್ಯೋತಿಬಾ ಫುಲೆಯವರ ಸತ್ಯಶೋಧಕ ಸಮಾಜ
- ಗಾಂಧೀಜಿಯವರ ಅಸ್ಪೃಶ್ಯತಾ ನಿರ್ಮೂಲನಾ ಆಂದೋಲನ

5. ತಮೀಳುನಾಡಿನಲ್ಲಿ ನಡೆದ ಆತ್ಮಶುದ್ಧಿ ಚಳುವಳಿ & ಸ್ವ ಗೌರವ ಚಳುವಳಿಗಳು ದಲಿತರ ಉದ್ಧಾರಕ್ಕಾಗಿ ಆದ ಧಾರ್ಮಿಕ ಸಂಘಟನೆಗಳು.

❖ ಹಿಂದುತ್ವ ಹಾಗೂ ದೇಶಭಕ್ತಿ:–

- ವಿನಾಯಕ ದಾಮೋದರ್ ಸಾರ್ವಕರ್ ಅವರಿಂದ ಜನಪ್ರೀಯವಾದ 'ಹಿಂದುತ್ವ' ಎಂಬ ಪದದ ಅರ್ಥ ಹಿಂದೂ ಎಂಬುದು ಒಂದು ಧರ್ಮಕ್ಕ ಸೀಮಿತವಾಗದೆ ಭಾರತವನ್ನು ಮಾತೃಭೂಮಿ ಯನ್ನಾಗಿ ನಂಬಿರುವ ಒಂದು ಬೃಹತ್ ಸಮುದಾಯ ಭಾರತವು ಮಾತೃಭೂಮಿಯಾಗಿರದ ಕಾರಣ ಮುಸ್ಲಿಂ & ಕ್ರೀಶ್ಚಿಯನ್‌ರು ಹಿಂದುತ್ವದಿಂದ ಹೊರತಾಗಿದ್ದಾರೆ.

❖ ಹಿಂದುತ್ವದ ಬೆಳವಣಿಗೆಗೆ ಕಾರಣಗಳು:–

- ಅಸಹಕಾರಿ ಚಳುವಳಿಯ ವೈಫಲ್ಯದಿಂದ ಹಿಂದೂ & ಮುಸ್ಲಿಂ ಕೊಮುವಾದಿ ಭಾವನೆಗಳು ಹೆಚ್ಚಾಗತೊಡಗಿದವು.
- 1922 ರನೋತರ ಲೊಕಮಾನ್ಯ ತಿಲಕರ ಅನುಯಾಯಿಗಳು ಹಿಂದುತ್ವದ ಬೆಂಬಲಿಗರಾದರು.\
- ಹಿಂದೂ ಜಮೀನ್ದಾರರು, ಮದ್ಯಮ ವರ್ಗದವರು ಹಿಂದುತ್ವಕ್ಕೆ ತಮ್ಮ ಬೆಂಬಲ ನೀಡಿದರು.

- ಕ್ರೀಶ್ಚಿಯನ್ ಮಿಷಿನ್‌ರಿಗಳ ಮತಾಂತರ ನೀತಿ ಮತ್ತು ಮುಸ್ಲಿಂರ ಜಿಹಾದ್ ನೀತಿಯ ವಿರುದ್ದವಾಗಿ ಹಿಂದುತ್ವದ ಉಗಮ ಎಂಬುದು ಹಿಂದುತ್ವದ ಬೆಂಬಲಿಗರ ವಾದವಾಗಿತ್ತು.

**ಹಿಂದುತ್ವದ ಮುಖ್ಯ ಉದ್ದೇಶ:–**

- ಭಾರತೀಯ ಸಂಸ್ಕೃತಿ & ಮೌಲ್ಯಗಳನ್ನು ದೇಶದೆಲ್ಲಡೆ ಪಸರಿಸುವುದು ಹಿಗೆ ದೇಶದ ನಾಗರಿಕರಲ್ಲಿಯು 'ನಾವು ಮೊದಲು ಭಾರತೀಯರು' ಎಂಬ ಭಾವನೆಯನ್ನು ಹೊಮ್ಮಿಸುವುದು.
- ವಿದೇಶಿ ಮೂಲವನ್ನು ಹೊಂದಿರುವ ಭಾರತದ ನಾಗರಿಕರಲ್ಲಿಯೂ **'ಭಾರತೀಯರು'** ಎಂಬ ಭಾವನೆಯನ್ನು ತುಂಬುವುದು.

ಹಿಂದೂ ರಾಷ್ಟ್ರೀಯತೆಯು **'ಸಹೋದರತ್ವ'** & **'ವಸುದೈವ ಕುಟುಬಂಬಕಂ'** ವನ್ನಾಗಿ ಹೋತ್ತಿದ್ದು. ವಿದೇಶಿ ಪ್ರಭಾವ & ಸಂಸ್ಕೃತಿಗಳ ಪರಿಣಾಮದಿಂದ ಹಿಂದೂಗಳನ್ನು ರಕ್ಷಿಸುವ ಕಾರ್ಯವನ್ನು ಮಾಡುತ್ತದೆ. ತನ್ನ ತಾಯಿನಾಡಿನ ಮೇಲಿರುವ ನಿಸ್ವಾರ್ಥ ಪ್ರೀತಿ, ತ್ಯಾಗ ಮನೋಭವನೆಯನ್ನು ಹೊಂದಿರುವ ದೇಶಭಕ್ತಿಯು ದೇಶವನ್ನು ಅಭಿವೃದ್ಧಿ & ಸನ್ನಡತೆಯ ಮಾರ್ಗದಲ್ಲಿ ಮುಂದುವರೆಸಲು ಪ್ರೇರಕವಾಗಿದೆ.

**ದ್ರಾವಿಡ ಚಳುವಳಿ:–**

- 'ಸ್ವಗೌರವ ಚಳುವಳಿ' ಅಥವಾ ದ್ರಾವಿಡ ಚಳುವಳಿಯು 1925 ರಲ್ಲಿ ಇ.ವಿ ರಾಮಸ್ವಾಮಿಯವರ ಪ್ರಾರಂಭವಯಿತು
- ಮುಖ್ಯ ಉದ್ದೇಶ :–
    1. ಸರ್ವರಿಗೂ ಸಮಾನ ಮನವೀಯ ಹಕ್ಕುಗಳನ್ನು ಹೋಂದಿರುವ ಸಮಾಜವನ್ನು ಸ್ಥಾಪಿಸಿವುದು.
    2. ಹಿಂದುಳಿದ ವರ್ಗದವರಿಗೆ ಆತ್ಮಗೌರವ ಹೊಂದಲು ಉತ್ತೇಜಿಸುವುದು.

**ದ್ರಾವಿಡ ಚಳುವಳಿಯ ಮುಖ್ಯ ತತ್ವಗಳು**

1. ಜನರಲ್ಲಿಯಾವುದೇ ರೀತಿಯ 'ಅನಮಾನತೆ' & ಆರ್ಥಿಕ ಜೀವನ ದಲ್ಲಿ 'ಬಡವ' ಜೀವನದಲ್ಲಿ 'ಬಡವ' & ಶ್ರೀಮಂತ ಎಂಬ ವ್ಯತ್ಯಾಸವಿರಬಾರದು.

2. ಪುರುಷರು & ಮಹಿಳೆಯರನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನವಾಗಿ ಸ್ವೀಕರಿಸಬೇಕು

3. ಸಮಾಜದಿಂದ ಜತಿ, ಧರ್ಮ, ಬಣ್ಣ ಎಲ್ಲವನ್ನೂ ತ್ಯಜಿಸಿ ಎಲ್ಲರೂ ಸ್ನೇಹ & ಸಹೋದರತ್ವದಿಂದ ಬಾಳುವುದು.

- **ದ್ರಾವಿಡ ಚಳುವಳಿಯ ೨ ಪ್ರಮುಖ ಪರಿಕಲ್ಪನೆಗಳು:–**

  1. ಬ್ರಾಹ್ಮಣ ವಿರೋಧಿ
  2. ಸ್ವ ಗೌರವದ ಮದುವೇಗಳು (ಬ್ರಾಹ್ಮನರಿಗೆ ಆಹ್ವಾನವಿಲ್ಲದೆಯೆ ಮದುವೆ ಮಾಡಿಕೋಳ್ಳುವುದು)

**D M K ಪಕ್ಷದ ಉಗಮ :–**

- ಆಗಸ್ಟ 15 1947 ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಪೆರಿಯಾರ್, ಸ್ವಾತಂತ್ರ್ಯ ತಂದ INC ಪಕ್ಷವು ಬ್ರಾಹ್ಮಣರ ಪ್ರಾಬಲ್ಯ ಹೋಂದಿದ್ದು, ಸ್ವಾತಂತ್ರ್ಯಾನಂತರ ನಾವು ಬ್ರಾಹ್ಮಣರು & ಉತ್ತರ ಭಾರತೀಯರ ಪ್ರಾಬಲ್ಯಕ್ಕೆ ಒಳಗಾಗಬೇಕಾಗುತ್ತದೆ. ಎಂದು ಸ್ವಾತಂತ್ರ್ಯ ದಿನವನ್ನು ಶೋಕಾಚರಣೆಯ ದಿನ ವನ್ನಾಗಿ ಘೋಷಿಸಿದ.
- ಈ ನಡೆಯನ್ನು ಸಿ ಎಸ್ ಅಣ್ಣಾದೊರೈ ಹಾಗೂ ಮೊದಲಾದ ಮುಖಂಡರು ವಿರೋಧಿಸಿ, ಪೆರಿಯಾರ್‌ರ ನಡತೆಯಿಂದ ಬೆಸತ್ತು (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷವನ್ನು ಸ್ಥಾಪಿಸಿದರು.

**A D M K ಪಕ್ಷದ ಉಗಮ:–**

- ಎಮ್ ಆರ್ ರಾಮಚಂದ್ರನ್ ಎಂಬ ಪ್ರಸಿದ್ದ ತಮಿಳುನಟ **D M K** ಪಕ್ಷದಲ್ಲಿ ಖಜಾಂಚಿಯಗಿ ಕಾರ್ಯನಿರ್ವಹಿಸಿದ ಪಕ್ಷಕ್ಕೆ ಒಳ್ಳೆಯ ಸಾರ್ವಜನಿಕ ಬೇಂಬಲ ತರುವಲ್ಲಿ ಯಶಸ್ವಿಯಾಗಿದ್ದರು.
- ನಂತರ ಪಕ್ಷದ ಅದ್ಯಕ್ಷ ಕರುಣಾನಿದಿ & ರಾಮಚಂದ್ರನ್ ನಡುವಿನ ಬಿಕ್ಕಟ್ಟಿನಿಂದ, ಎಂ ಜಿ ಆರ್ ಅವರನ್ನು ಬ್ರಷ್ಟಾಚಾರದ ಆರೋಪದ ಹೊರಿಸಿ ಪಕ್ಷದಿಂದ ಉಚ್ಚಾಟಿಸಲಾಯಿತು. ಆ ಸಮಯದಲ್ಲಿ ಎಂ. ಜಿ. ಆರ್ 'ಅಣ್ಣಾ ದ್ರಾವಿಡ ಪಾಲನ್ನೇತ್ರ ಕಳಗಂ' **A D M K** ಎಂಬ ಸ್ವಂತ ಪಕ್ಷವನ್ನು ಸ್ಥಾಪಿಸಿದರು.

❖ **ಶೋಷಣೆಯಿಂದ ಮುಕ್ತಿಗಾಗಿ ದಲಿತರ ಹೊರಾಟ ಹಾಗೂ ಸಬಲಿಕರಣ:–**

ಪುರಾತನ ಹಿಂದೂ ನೀತಿ ಸಂಹಿತೆಗಳು ಅಸ್ಪೃಶ್ಯರನ್ನು ಸಮಾಜದ ತಳಭಾಗದಲ್ಲಿ ಇಟ್ಟು, ಅವರನ್ನು ಹಲವಾರು ರೀತಿಯ ಶೋಷಣೆಗೆ ಒಳಪಡಿಸಲಾಯಿತು. ನಂತರ ಬ್ರೀಟಿಷರ ಅವಧಿಯಲ್ಲಿ ಪಾಶ್ಚಿಮಾತ್ಯ ಪ್ರಭಾವ & ಇಂಗ್ಲೀಷ್ ಶಿಕ್ಷಣದಿಂದ ಪ್ರೇರೆಪಿತಗೊಂಡು ಹಲವಾರು ವಿದ್ಯಾವಂತ ದಲಿತರು ಈ ಶೋಷಣೆಯ ವಿರುದ್ದ ದಂಗೆಯೆದ್ದರು. ಅದರಲ್ಲಿ ಡಾ. ಬಿ. ಆರ್ ಅಂಬೇಡ್ಕರ್ ಅವರು ಅಗ್ರರಾಗಿದ್ದರು.

- 'ಶಿಕ್ಷಣ– ಹೋರಾಟ– ಸಂಘಟನೆ' ಎಂಬ ತ್ರೀವಳಿ ಸೂತ್ರ ದಲಿತರ ಸ್ವಾಭಿಮಾನ ಆಂದೋಲನ' ವು ಅಂಬೇಡ್ಕರ್ ಅವರೀಂದ ಸ್ಥಾಪಿತವಾಯಿತು
- ಈ ಆಂದೋಲನಗಳ ಮೂಲಕ ದಲಿತರಲ್ಲಿ ಆತ್ಮಾಭಿಮಾನ, ಕೆಚ್ಚು, ಆಧುನಿಕತೆ, ಶಿಕ್ಷಣದ ಬಗ್ಗೆ ಅರಿವು ಮೂಡಿಸಿದರು.

- ದಲಿತರು ತಾವು ನಡೆಸುತ್ತಿರುವ ಅಸಭ್ಯ & ಅನಾಗರಿಕ ಜೀವನ ಶೈಲಿಯನ್ನು ಬದಲಾಯಿಸಿಕೋಳಬೇಕೆಂದು ಕರೆಕೊಟ್ಟರು.
- 1924 ರಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ ಸ್ಥಾಪಿಸಿದರು. ಇದರ ಮೂಲಕ ದಲಿತರ ಶಿಕ್ಷಣ, ಆರ್ಥಿಕ ಪ್ರಗತಿಯ ಉತ್ತೇಜನೆಗೆ ನೆರವಾದರು
- ದಲಿತರ ಏಳಿಗೆಗೆ ಅಂಬೆಡ್ಕರ್ ಅವರ ಪಂಚಸೂತ್ರಗಳು:–
    1. ಸ್ವ–ಸುಧಾರಣೆ
    2. ಸ್ವ– ಏಳ್ಗೆ
    3. ಸ್ವಾವಲಂಬನೆ
    4. ಸ್ವಾಭಿಮಾನ
    5. ಸ್ವನಂಬಿಕೆ
- ದಲಿತರ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ನೀಡಿದರು

❖ **ಸಮಾಜವಾದದ ಮಾರ್ಗ ಹಾಗೂ ಸಂಪೂರ್ಣ ಕ್ರಾಂತಿ:–**

- 1925 ರಲ್ಲಿ ಎಮ್ ಎನ್ ರಾಯ ರಿಂದ ಸ್ಥಾಪನೆಯಾದ **'ಕಮ್ಯೂನಿಸ್ಟ ಪಕ್ಷವು'** ಭಾರತದಲ್ಲಿ ಪ್ರಪ್ರಥಮ ಬಾರಿಗೆ ಸಮಾಜವಾದಿ ಚಳುವಳಿಗೆ ನಾಂದಿಯಾಯಿತು. ನಂತರ **ಲಾಲಾ ಲಜಪತ್ ರಾಯ್, ಅಶೋಕ ಮೆಹ್ತಾ ಜಯಪ್ರಕಾಶ ನಾರಾಯಣ್** ರಂತಹ ನಾಯಕರ ಪ್ರಭಾವದಿಂದ ಭಾರತದಲ್ಲಿ ಸಮಾಜದಲ್ಲಿ ಧೊರಣೇ ಬೆಳೇಯಿತು.
- ಭಾರತದ ಸಮಾಜದ ಚಳುವಳಿಯಲ್ಲಿ ಪ್ರಸಾಸತಾತ್ಮಕ ಸಮಾಜವಾದಿ ಅಂಶಗಳನ್ನು ಜಾರಿಗೆ ತಂದವರು ಜಯಪ್ರಕಾಶ ನಾರಾಯಣ್
- ಜಯಪ್ರಕಾಶ ನಾರಾಯಣ್ರ **'ಸಂಪೂರ್ಣ ಕ್ರಾಂತಿ'** ಯ ಭಾರತದ ಆಧುನಿಕ ರಾಜಕೀಯ ಚಿಂತನಗಳಿಗೆ ಅತ್ಯುತ್ತಮ ಕೊಡುಗೆಯಾಗಿದ್ದು ಪ್ರಸ್ತುತ ಭಾರತದ ಸಮಾಜೋ–ರಾಜಕೀಯ ಸನ್ನಿವೇಷಗಳಲ್ಲಿ ಸಂಪೂರ್ಣ ಕ್ರಾಂತಿಯ ಮಹತ್ವವನ್ನು ಅರಿಯುವುದು ಅವಶ್ಯವಿದೆ.
- ಜಯಪ್ರಕಾಶ ನಾರಾಯಣ್ ಹೇಳಿದಂತೆ, ಸಂಪೂರ್ಣಕ್ರಾಂತಿಯ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಬೌದ್ದಕ, ಶೈಕ್ಷಣಿಕ & ಆದ್ಯಾತ್ಮಿಕ ಕ್ರಾಂತಿಗಳ ಸಮ್ಮಿಶ್ರಣವಾಗಿದ್ದು, ಸರ್ವೋದಯದ ಆಶಯವು ಪ್ರಸ್ತುತ ಸಮಾಜದ ಪರಿವರ್ತನೆಗೆ ಪ್ರೇರಕವಾಗಿದೆ.
- ಜಯಪ್ರಕಾಶ ನಾರಾಯಣ್‌ರು ಪ್ರಾರಂಬಿಕ ಹಂತದಲ್ಲಿ ಜನರನ್ನು ಒಗ್ಗೂಡಿಸಿ, ಪ್ರಸ್ತುತ ದೇಶದ ರಾಜಕೀಯ & ಸಾಮಾಜಿಕ ಸನ್ನಿವೇಶಗಳನ್ನು ಅರಿವು ಮಾಡಿ ಅವರನ್ನು ಜಾಗೃತಗೋಳಿಸಲು ಪ್ರಯತ್ನಿಸಿ ವಿಫಲಾದರು. ಆದ್ದರಿಂದ ಪ್ರಜಾಪ್ರಭುತ್ವದ ಉಳಿವಿಗೆ ಯುವಕರ ತಂಡವನ್ನು ರಚಿಸಿದರು
- ಗುಜರಾತ್ & ಬಿಹಾರ್ ನಲದಲಿ ಉಂಟಾದ ವಿದ್ಯಾರ್ಥಿಗಳ ಬ್ರಷ್ಟಾಚಾರದ ವಿರುದ್ಧ ಹೊರಾಟವು, ಜೇ ಪಿ ಅವರ ಹೋರಾಟಕ್ಕೆ ಶಕ್ತಿಯನ್ನ ನೀಡಿತು.

- ಭಾರತದ ರಾಜಕೀಯ ಸಾಮಾಜಿಕ ಜೀವನದಲ್ಲಿ ಬ್ರಷ್ಟಾಚಾರ ವನ್ನು ಕಿತ್ತುಹಾಕಿ, ಬಡತನದಿಂದ ಕಳಗೆ ವಾಸಿಸುತ್ತಿರುವ ಜನರಿಗೆ ಕನಿಷ್ಠ ಅವಶಕತೆಗಳನ್ನು ಪೂರೈಸಬೇಕೆಂದು ಅವರ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ಜೇ ಪಿ ಅವರ ಸಂಪೂರ್ಣ ಕ್ರಾಂತಿಯು ಮಹಾತ್ಮ ಗಾಂಧಿಯವರ **'ಆದರ್ಶ ಸಮಾಜ'** ವನ್ನು ಈಡೆರಿಸುವ ಸಾಧನವಾಗಿತ್ತು.
- ಅಹಿಂಸೆಯಿಂದ ಕೂಡಿದ,ವಯುಕ್ತಿಕ ನೈತಿಕತೆಯ ಆಧಾರದ ಮೇಲೆ ಭಾರತೀಯ ಸಂಸ್ಕೃತಿ, ಸ್ವಾತಂತ್ರ್ಯ ಚಳುವಳಿ & ಗ್ರಾಮೀಣ ಅವಶ್ಯಕತೆಗಳಿಗೆ ಅನುಗುಣವಾದ ಉತ್ಪಾದನೆಯಿಂದ ಕೂಡಿದ 'ಸಂಪೂರ್ಣ ಕ್ರಾಂತಿ' ಯು ಇವರ ಆಶವಾಗಿತ್ತು.

❖ **ಗ್ರಾಮ ಸ್ವರಾಜ್ಯ, ಸತ್ಯಾಗ್ರಹ & ಭೂದಾನ :–**

❖ **ಗ್ರಾಮ ಸ್ವರಾಜ್ಯ:–**

- ಗಾಂಧಿಜಿಯವರು ಹೇಳಿದಂತೆ **'ಭಾರತದ ಆತ್ಮವು ಹಳ್ಳಿಗಳಲ್ಲಿ ಜೀವಿಸುತ್ತದೆ'** ಆದ್ದರಿಂದ ಗ್ರಾಮ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣವು ಅವಶ್ಯವಿದ್ದು, ಗ್ರಾಮಗಳಿಗೆ ಸ್ವಯಂ ನಿಯಂತ್ರಣ ಶಕ್ತಿಯನ್ನು ಕೊಟ್ಟಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವದ ಪರಿಕಲ್ಪನೆ ಈಡೇರಲು ಸಾಧ್ಯ ಎಂದರು.
- ಗ್ರಾಮ ಸ್ವರಾಜ್ಯದ ಮುಖ್ಯ ಉದ್ಧೇಶವು, ಪ್ರತಿ ಹಳ್ಳೀಯೂ ಒಂದು ಸ್ವಂತ ಗಣತಂತ್ರ ವ್ಯವಸ್ಥೆಯಾಗಿ ತನ್ನಲ್ಲಿ ವಾಸಿಸುತ್ತಿರುವ ಸರ್ವರ ಅವಶ್ಯಕತೆ ಗಳನ್ನು ಪೂರೈಸಬೇಕು. ಇತರೆ ಹಳ್ಳಿಗಳ ಮೇಲೆ ಅವಲಂಬಿತವಾಗಬಾರದು ಉದಾ:– ಆಹಾರ ಧಾನ್ಯಗಳು, ಕೃಷಿ ಉಪಕರಣಗಳು, ಕಟ್ಟಿಗೆ ಇತ್ಯಾದಿ.

❖ **ಸತ್ಯಾಗ್ರಹ:–**

- **'ಸತ್ಯಾಗ್ರಹ'** ಎಂಬ ಪದವು ಮೊಟ್ಟ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮಾ ಗಾಂಧಿಯವರಿಂದ ಬೆಳಕಿಗೆ ಬಂದಿತು.
- **'ಶಾಂತಿ'** & **'ಅಹಿಂಸೆಯನ್ನು'** ಒಳಗೊಂಡು, ಸತತವಾಗಿ ದಬ್ಬಾಳಿಕೆಗಾರರ ಮನಮುಟ್ಟುವಂತೆ **'ಆತ್ಮಶಕ್ತಿ'** ಯಿಂದ ಹೋರಾಟ ನಡೆಸುವುದು ಸತ್ಯಾಗ್ರಹ
- ಗಾಂಧಿಯವರ ಪ್ರಕಾರ, **'ಸತ್ಯಾಗ್ರಹಿ'** ಯು ಭಯವೆ ಇಲ್ಲದೆ ವ್ಯಕ್ತಿ ಆಗಿರುತ್ತಾನೆ, ಎಂತಹ ಸನ್ನಿವೇಶದಲ್ಲಿಯೂ ಶೋಷಣೆಗೆ ಶರಣಾಗುವುದಿಲ್ಲ. ಅವನೇ ವಿಜಯಶಾಲಿಯಾಗಿರತ್ತಾನೆ.
- ಸತ್ಯ, ಅಹಿಂಸೆ & ಶಾಂತಿ & ಆತ್ಮಶಕ್ತಿ ಇವೆಲ್ಲವು ಸೇರಿ ಸತ್ಯಾಗ್ರಹಿ ಆಗುವನು
- ಸತ್ಯಾಗ್ರಹದ ಪ್ರಮುಖ ವಿಧಗಳು:–

    1. ಅಸಹಕಾರ
    2. ಉಪವಾಸ
    3. ಮುಷ್ಕರ– ಕಾರ್ಮಿಕರ ತೊಂದರೆಗಳು

4. ನಾಗರಿಕ ಕಾನೂನು ಭಂಗ– ಅನೈತಿಕ ಕಾನೂನುಗಳ ಉಲ್ಲಂಘನೆ

5. ಹಿಜರತ್ – ಅನ್ಯಾಯಗಳ ವಿರುದ್ಧ ಹೋರಾಡಲು ಆಗದೇ ವಾಸಸ್ಥಾನದಿಂದ ಬೇರೆ ಸ್ಥಳಕ್ಕೆ ಹೊಗಿ ನೆಲೆಸುವುದು.

- ಸತ್ಯಾಗ್ರಹವು ಆಧುನಿಕ ಸಮಾಜದಲ್ಲಿ ಒಂದು ತತ್ವಶಾಸ್ತ್ರವಾಗಿ ಪರಿಣಮಿಸಿದೆ.

❖ **ಭೂದಾನ ಚಳುವಳಿ:–**

- ಅಪ್ಪಟ ಗಾಂಧಿವಾದಿಯಾದ ವಿನೋಭಾ ಭಾವೆ ಇದರ ಜನಕರು
- 1951 ರಲ್ಲಿ ಆಂಧ್ರದ ನೆಲಗೋಂಡ ಜಿಲ್ಲೆಯ ಪೋಚಂಪಲ್ಲಿಗೆ ಪಾದಯಾತ್ರೆ ಕೈಗೋಳ್ಳುವ ಮೂಲಕ ಭೂದಾನ ಚಳುವಳಿ ಆರಂಭ
- ಒಂದು ಬಾರಿ ವಿನೋಭಾ ಭಾವೆ ಆವರು ಆಂಧ್ರಪ್ರದೇಶದ ಗ್ರಾಮದಲ್ಲಿ ಭಾಷಣ ಮಾಡುತಿದ್ದಾಗ, ಭೂರಹಿತ ಕಾರ್ಮಿಕರು ಅವರ ಬಳಿ ಹೊಗಿ ತಮಗೆಲ್ಲಾ ಸ್ವಲ್ಪ ಭೂಮಿ ದೊರಕುವಂತೆ ಮಾಡಲು ಕೇಳಿಕೊಂಡರು. ಆಗ ಸಭೆಯಲ್ಲಿದ್ದ ವ್ಯಕ್ತಿ ಎದ್ದು ನಿಂತು ತನ್ನ 80 ಎಕರೆ ಆಸ್ತಿಯನ್ನು ಅವರಿಗೆ ಹಂಚುವುದಾಗಿ ಘೊಷಿಸಿದ. ಈ ಕಾರ್ಯವನ್ನೆ 'ಭೂದಾನ ಎಂದು ಕರೆಯಲಾಯಿತು.
- ನಂತರ ನೆರೆಹೊರೆಯ ಜಮೀನ್ದಾರರು ಕೂಡ ಈ ಭೂ ರಹಿತ ಕಾರ್ಮಿಕರಿಗೆ ತಮ್ಮ ಜಮೀನನ್ನು ದಾನ ಮಾಡಿ, ಈ ಚಳುವಳಿಯನ್ನು **'ಗ್ರಾಮದಾನ ಚಳುವಳಿ'** ಎಂದು ಪ್ರಸಿದ್ಧಿ ಪಡೆಯಿತು.